ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವಜೋಡಿ
ಬಾಲಿವುಡ್ ತಾರಾಜೋಡಿ ಸಿದ್ಧಾರ್ಥ್ ಮಲ್ಹೋತ್ರಾ ಮತ್ತು ಕಿಯಾರಾ ಅಡ್ವಾಣಿ ಮುಂಬೈ ವಿಮಾನ ನಿಲ್ದಾಣದಲ್ಲಿ ಶನಿವಾರ ಕಾಣಿಸಿಕೊಂಡಿದ್ದು ಹೀಗೆ



3ಂಗಳಲ್ಲಿ 16 ಮಂದಿ ಅಂಗಾಂಗ ದಾನ

ಬೆಂಗಳೂರು: ಅಂಗಾಂಗ ದಾನಕ್ಕೆ ಈ ವರ್ಷ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದ್ದು, ತಿಂಗಳೊಂದರಲ್ಲಿ 16 ಮಂದಿಯಿಂದ 76 ಅಂಗಾಂಗ ಹಾಗೂ ಅಂಗಾಂಶಗಳನ್ನು ಸಂಗ್ರಹಿಸಲಾಗಿದೆ.

ಈ ಮೊದಲು ಜೀವಸಾರ್ಥಕತೆ ಹೆಸರಿನಿಂದ ನೋಂದಾಯಿತವಾಗಿದ್ದ ಸೊಟ್ಟೊ (ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ), ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮೃತ ದಾನಿಗಳಿಂದ ಅಂಗಾಂಗ ಒದಗಿಸುವ ಕಾರ್ಯವನ್ನು ಮಾಡುತ್ತಿದೆ. ಈ ಸಂಸ್ಥೆ ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ. ಈ ವರ್ಷ 22 ಮೂತ್ರಪಿಂಡಗಳು, 11 ಯಕೃತ್ತು ಹಾಗೂ ಎರಡು ಹೃದಯವನ್ನು ದಾನಿಗಳಿಂದ ಸಂಗ್ರಹಿಸಿದೆ. ಅದೇ ರೀತಿ ನಾಲ್ವರಿಂದ ಚರ್ಮ, 9 ಹೃದಯದ ಕವಾಟ ಹಾಗೂ 28 ನೇತ್ರಗಳನ್ನು ಸಂಗ್ರಹಿಸಿದೆ.

ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭಗಳಲ್ಲಿ ಗಂಭೀರವಾಗಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡವರ ಅಂಗಾಂಗಗಳನ್ನು ಸಂಗ್ರಹಿಸಲಾಗುತ್ತದೆ. 2020ರಲ್ಲಿ ಕೋವಿಡ್ ಕಾಣಿಸಿಕೊಂಡಿದ್ದರಿಂದ ಅಂಗಾಂಗ ದಾನಕ್ಕೆ ಸಮಸ್ಯೆಯಾಗಿತ್ತು. 2022ರ ಮಾರ್ಚ್ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖ ಆಗಿದ್ದರಿಂದ, ಅಂಗಾಂಗ ದಾನ ಪ್ರಮಾಣ ಏರಿಕೆ ಕಂಡಿತ್ತು. ಕಳೆದ ವರ್ಷ 151 ಮಂದಿ ಅಂಗಾಂಗಗಳನ್ನು ದಾನ ಮಾಡಿದ್ದಾರೆ. ಅವರಿಂದ 403 ಅಂಗಾಂಗಗಳು ಹಾಗೂ 348 ಅಂಗಾಂಶಗಳನ್ನು ಸಂಗ್ರಹಿಸಲಾಗಿತ್ತು. ಐ'ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ' ಎಂದು ಸೊಟ್ಟೊ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸಾಹಿತಿ ಕೆ. ಮರುಳಸಿದ್ದಪ್ಪ ಹೇಳಿಕೆ • ಕುಂ.ವೀರಭದ್ರಪ್ಪ ಅವರ 'ಸುಪಾರಿ' ಕಾದಂಬರಿ ಬಿಡುಗಡೆ

'ಸಂವಿಧಾನ ನಾಶ ಮಾಡಲು ಸುಪಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸಂವಿಧಾನವನ್ನು ನಾಶ ಮಾಡಲು ಸುಪಾರಿ ತೆಗೆದುಕೊಂಡವರೇ ದೇಶದಲ್ಲಿ ಈಗ ಮುಂಚೂಣಿಯಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಪ್ರಬುದ್ಧ ಲೇಖಕರಿಗೆ ಜನಾಭಿಪ್ರಾಯ ರೂಪಿಸುವ ಜವಾಬ್ದಾರಿ ಇದೆ' ಎಂದು ಸಾಹಿತಿ ಕೆ. ಮರುಳಸಿದ್ದಪ್ಪ ಹೇಳಿದರು.

ಸಪ್ನ ಬುಕ್ ಹೌಸ್ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುಂ. ವೀರಭದ್ರಪ್ಪ ಅವರ 'ಸುಪಾರಿ' ಕಾದಂಬರಿ ಬಿಡುಗಡೆಯಾಯಿತು.

'ನಮ್ಮಲ್ಲಿ ಬಹಳಷ್ಟು ಪ್ರತಿಭಾವಂತ ಲೇಖಕರು ಇದ್ದಾರೆ. ಆದರೆ, ಅವರು ನಿರ್ಣಾಯಕ ಸಂದರ್ಭದಲ್ಲಿ ಮೌನಿ ಬಾಬಾಗಳಾಗುತ್ತಾರೆ. ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳುವ ಲೇಖಕರನ್ನು ನಾನು ಗೌರವಿಸುತ್ತೇನೆ. ಈ ವಿಚಾರವಾಗಿ ನನಗೆ ಎಸ್.ಎಲ್. ಬೈರಪ್ಪ ಅವರ ಮೇಲೆ ಹೆಚ್ಚು ಗೌರವವಿದೆ. ಅವರ ಅನೇಕ ವಿಚಾರಗಳನ್ನು ನಾನು ಒಪ್ಪುವುದಿಲ್ಲ.



ಕುಂ. ವೀರಭದ್ರಪ್ಪ (ಎಡದಿಂದ ಮೊದಲನೆಯವರು) ಅವರ 'ಸುಪಾರಿ' ಕಾದಂಬರಿಯನ್ನು ಪ್ರೊ. ಸಿ.ಎನ್. ರಾಮಚಂದ್ರನ್ (ಎಡದಿಂದ ಎರಡನೆಯವರು) ಬಿಡುಗಡೆ ಮಾಡಿದರು. ಕೆ. ಮರುಳಸಿದ್ದಪ್ಪ, ಅಗ್ರಹಾರ ಕೃಷ್ಣಮೂರ್ತಿ ಮತ್ತು ಸಪ್ನ ಬುಕ್ ಹೌಸ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ ಇದ್ದಾರೆ.
—ಪ್ರಜಾವಾಣಿ ಚಿತ್ರ

ಆದರೆ, ಅವರು ತಮಗೆ ಅನಿಸಿದ್ದನ್ನು ಸ್ಪಷ್ಟವಾಗಿ, ನೇರವಾಗಿ ಹೇಳುತ್ತಾರೆ. ಅದೇ ರೀತಿ, ಕುಂ. ವೀರಭದ್ರಪ್ಪ ಅವರೂ ನೇರವಾಗಿ ತಿಳಿಸುತ್ತಾರೆ. ಸೃಜನಶೀಲ ಲೇಖಕರು ಜನಾಭಿಪ್ರಾಯ ರೂಪಿಸಲು ಸ್ಪಷ್ಟವಾಗಿ, ನೇರವಾಗಿ ಹೇಳಬೇಕು' ಎಂದು ತಿಳಿಸಿದರು.

ಮುಖಪುಟಕ್ಕೆ ಆಕ್ಷೇಪ: 'ಅಪಾಯಗಳನ್ನು ಎದುರಿಸಲು ಸನ್ನದ್ದನಾಗಿಯೇ ಕಾದಂಬರಿಯನ್ನು ಬರೆಯುತ್ತೇನೆ. 'ಸುಪಾರಿ' ಕಾದಂಬರಿ ಮುಖಪುಟದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿಆಕ್ಷೇಪಗಳು ವ್ಯಕ್ತವಾಗಿದ್ದವು. ಎಚ್.ಡಿ. ಕುಮಾರಸ್ವಾಮಿ ಮತ್ತು ಬ್ರಾಹ್ಮಣ ಸಮುದಾಯದ ನಡುವೆ ಮುಖ್ಯಮಂತ್ರಿ ವಿಚಾರವಾಗಿ ಘರ್ಷಣೆ ನಡೆಯುತ್ತಿದೆ. ಯಾರು ಮುಖ್ಯಮಂತ್ರಿಯಾದರೂ ನಮ್ಮ ತಕರಾರು ಇಲ್ಲ. ಹಿಂದೆ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸುವ ಸಂದರ್ಭದಲ್ಲಿ ನನಗೆ ಕೈಕೊಡದ ಚುನಾಯಿತ ಮುಖ್ಯಮಂತ್ರಿ, ಜ್ಯೋತಿಷಿಯೊಬ್ಬರಿಗೆ ಸಾಷ್ಟಾಂಗ ಪ್ರಣಾಮ ಮಾಡಿದ್ದರು. ನಿಜವಾದ ಮುಖ್ಯಮಂತ್ರಿ ಯಾರು' ಎಂದು ಕುಂ. ವೀರಭದ್ರಪ್ಪ ಪ್ರಶ್ನಿಸಿದರು.

ವಿಮರ್ಶಕ ಪ್ರೊ.ಸಿ.ಎನ್. ರಾಮಚಂದ್ರನ್ ಹಾಗೂ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರು ಕಾದಂಬರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

'ಸುಪಾರಿ ಕಿಲ್ಲರ್ ಜತೆ ವಾಸ, ಸಂದರ್ಶನ'

'ನಾನು 40 ವರ್ಷಗಳು ಆಂಧ್ರಪ್ರದೇಶದ ರಾಯಲುಸೀಮೆಯಲ್ಲಿ ವಾಸವಿದ್ದೆ. ಅಲ್ಲಿನ ತಳಸಮುದಾಯ, ಮೂಲಬೇರುಗಳು ಅರಿವಿನಲ್ಲಿದೆ. ಅಲ್ಲಿನ ನಿಗೂಢ ಭಾರತದ ಜತೆಗೆ ಒಡನಾಟ ಹೊಂದಿದ್ದೇನೆ. ಬೇತಂಚೆರ್ಲದಲ್ಲಿ ಜ್ಯೋತಿಷ್ಯಾಲಯ ನಡೆಸುತ್ತಿರುವ ಆಂಜನೇಯ ಶಾಸ್ತ್ರಿ, ಹಿಂದೆ ಸುಪಾರಿ ಕಿಲ್ಲರ್ ಆಗಿದ್ದರು. ಕುಕಟ್‌ಪಲ್ಲಿಯಲ್ಲಿ ಚಹಾ ಅಂಗಡಿ ಇಟ್ಟುಕೊಂಡಿರುವ ಸುಂಕದ ಪ್ರಸಾದ್ ನಾಯ್ಡು ಅವರೂ ಸುಪಾರಿ ಕಿಲ್ಲರ್ ಆಗಿದ್ದರು. ಅವರ ಸಂದರ್ಶನ ಮಾಡಿದ್ದೇನೆ. ಒಂದುವಾಗ್ಲಿ ಎಂಬ ಹಳ್ಳಿಯಲ್ಲಿ ಇದ್ದಾಗ ಸುಪಾರಿ ಕಿಲ್ಲರ್ ಒಬ್ಬರು 15 ದಿನ ನನ್ನ ಜತೆ ವಾಸವಿದ್ದರು. ಮನೆಯನ್ನು ತೊರೆದು 2 ದಿನಗಳಲ್ಲಿಯೇ ಅವರು ಕೊಲೆಯಾಗಿರುವುದು ತಿಳಿಯಿತು. ಈ ಅನುಭವಗಳು ಕಾದಂಬರಿಗೆ ಸಹಕಾರಿಯಾದವು' ಎಂದು ಕುಂ. ವೀರಭದ್ರಪ್ಪ ಹೇಳಿದರು. 'ನನ್ನ 'ಜೈ ಬಜರಂಗಬಲಿ' ಕಾದಂಬರಿಯನ್ನು ನರೇಂದ್ರ ಮೋದಿ, ಅಮಿತ್ ಶಾ ಹಾಗೂ ಪ್ರಲ್ಹಾದ್ ಜೋಶಿ ಓದಿದರೆ, ಕೂಡಲೇ ನನ್ನ ಮೇಲೆ ಕ್ರಮ ಕೈಗೊಳ್ಳುತ್ತಿದ್ದರು. ಆದರೆ, ನನ್ನ ಪುಣ್ಯ ಅವರು ಇಂತಹ ಕಾದಂಬರಿಗಳನ್ನು ಓದುವುದಿಲ್ಲ' ಎಂದು ಕುಟುಕಿದರು.

ಮೆಟ್ರೊ ಹಳಿ ದಾಟಲು ಯತ್ನಿಸಿದ ಪ್ರಯಾಣಿಕರ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸಂಪರ್ಕ ಇರುವುದನ್ನು ಅರಿಯದೆ ಮೆಟ್ರೊ ರೈಲು ಹಳಿಗಳನ್ನು ದಾಟಲು ಶನಿವಾರ ಪ್ರಯತ್ನಿಸಿದ ಇಬ್ಬರನ್ನು ಸಾರ್ವಜನಿಕರು ಮತ್ತು ಭದ್ರತಾ ಸಿಬ್ಬಂದಿ ರಕ್ಷಿಸಿದರು.

ನಾಗಸಂದ್ರ ಕಡೆಗೆ ಹೋಗಬೇಕಿದ್ದ ಪ್ರಯಾಣಿಕರಿಬ್ಬರು ಕುವೆಂಪು ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಮೆಜೆಸ್ಟಿಕ್ ಕಡೆಗೆ ಹೋಗುವ ಪ್ಲಾಟ್‌ಫಾರಂಗೆ ಹೋಗಿದ್ದರು. ಎದುರಿನ ಪ್ಲಾಟ್‌ಫಾರಂಗೆ ಹೋಗಬೇಕಿತ್ತು ಎಂದು ಪ್ರಯಾಣಿಕರೊಬ್ಬರು ತಿಳಿಸಿದ್ದರು. ತರಕಾರಿ ಬ್ಯಾಗ್ ಹಿಡಿದಿದ್ದ ಇಬ್ಬರು ಅತ್ತ ಸಾಗಲು ಹಳಿಗಳ ಮೇಲೆ ಇಳಿದರು.

ಸ್ಥಳದಲ್ಲಿ ಇದ್ದ ಸಹ ಪ್ರಯಾಣಿಕರು



ಮತ್ತು ಭದ್ರತಾ ಸಿಬ್ಬಂದಿ ಕೂಗಿ ಅವರನ್ನು ಮುಂದೆ ಹೋಗದಂತೆ ಎಚ್ಚರಿಸಿ ವಾಪಸ್ ಕರೆದರು. ಬಳಿಕ ಅವರನ್ನು ಮೇಲಕ್ಕೆ ಹತ್ತಿಸಿದರು.

ನಿಲ್ದಾಣದ ಭದ್ರತಾ ಸಿಬ್ಬಂದಿ ಮತ್ತು ನಿಯಂತ್ರಕರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು. ಮೊದಲ ಬಾರಿಗೆ ಮೆಟ್ರೊ ರೈಲು ಪ್ರಯಾಣ ಮಾಡುತ್ತಿದ್ದ ಇಬ್ಬರೂ, ಸಾಮಾನ್ಯ ರೈಲುಗಳ ಹಳಿ ದಾಟುವ ಮಾದರಿಯಲ್ಲೇ ಇಲ್ಲಿಯೂ ಪ್ರಯತ್ನಿಸಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

'ರೈಲುಗಳ ಸಂಚಾರವನ್ನು 10 ನಿಮಿಷ ತಡೆಯಲಾಗಿತ್ತು. ಬಳಿಕ ಅವರನ್ನು ಎದುರಿನ ಪ್ಲಾಟ್‌ಫಾರಂಗೆ ಕಳುಹಿಸಿದರು. ಜೋಡಿ ಮಾರ್ಗದ ಮಧ್ಯದಲ್ಲಿ 700 ಕೆ.ವಿ. ವಿದ್ಯುತ್ ಸಂಪರ್ಕದ ಎರಡು ಹಳಿಗಳಿದ್ದು, ಅಲ್ಲಿಯವರೆಗೆ ಅವರು ಹೋಗಿದ್ದರೆ ಅವಘಡ ಸಂಭವಿಸುತ್ತಿತ್ತು. ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ. ತಿಳಿವಳಿಕೆ ಇಲ್ಲದೆ ಹಳಿಗಳ ಮೇಲೆ ಇಳಿದಿದ್ದರಿಂದ ಅವರ ಮೇಲೆ ಯಾವುದೇ ಪ್ರಕರಣ ದಾಖಲಿಸಿಲ್ಲ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಆನೇಕಲ್ ಬಳಿ ಕಾಡಾನೆ ಹಾವಳಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಮೆಣಸಿಗನಹಳ್ಳಿ ಮತ್ತು ನೆರೆಯ ತಮಿಳುನಾಡಿನ ಹುಚ್ಚನಹಳ್ಳಿಯಲ್ಲಿ ಕಾಡಾನೆಗಳ ಹಿಂಡು ಮೂರು ದಿನಗಳಿಂದ ಬೀಡುಬಿಟ್ಟಿವೆ.

ತಮಿಳುನಾಡಿನ ಹೊಸೂರು ಕಡೆಯಿಂದ ಬಂದಿದ್ದ ಮೂರು ಆನೆಗಳು ಹಿಂಡು ಹುಚ್ಚನಹಳ್ಳಿ ಮೂಲಕ ಮೆಣಸಿಗನಹಳ್ಳಿಯತ್ತ ಧಾವಿಸಿ ಬೆಳೆ ಮತ್ತು ರಾಗಿ ಮೆದೆಗಳನ್ನು ತಿಂದು



ಹಾಕಿವೆ.

ರಾಜ್ಯ ಅರಣ್ಯ ಇಲಾಖೆ ಹಾಗೂ ತಮಿಳುನಾಡು ಅರಣ್ಯ ಇಲಾಖೆ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ ಆನೆ ಓಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸರ್ಕಾರಿ ಆಸ್ಪತ್ರೆ ಸಿಬ್ಬಂದಿಗೆ ವಸ್ತ್ರ ಸಂಹಿತೆ

ಚಂಡೀಗಢ (ಪಿಟಿಐ): ಆರೋಗ್ಯ ಇಲಾಖೆಗೆ ವೃತ್ತಿಪರತೆಯ ಸ್ಪರ್ಶ ನೀಡಲು ಮುಂದಾಗಿರುವ ಹರಿಯಾಣ ಸರ್ಕಾರವು ಸರ್ಕಾರಿ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಏಕರೂಪದ ವಸ್ತ್ರ ಸಂಹಿತೆಜಾರಿಗೊಳಿಸಲುಮುಂದಾಗಿದೆ.

ಬಗೆ ಬಗೆಯ ಕೇಶವಿನ್ಯಾಸ, ಉದ್ದನೆಯ ಉಗುರು ಬಿಡುವುದು, . ಟೀಶರ್ಟ್, ಡೆನಿಮ್ ಉಡುಪು, ಸ್ಕರ್ಟ್ ತೊಡುವುದನ್ನು ನಿರ್ಬಂಧಿಸಲಾಗಿದೆ.

ಕೆಐಎಡಿಬಿ ದರೋಡೆಕೋರ ವರ್ತನೆ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರವು ಅಭಿವೃದ್ಧಿಯ ಹೆಸರಿನಲ್ಲಿ ನಾಗರಿಕರ ಜಮೀನನ್ನು ಸ್ವಾಧೀನಕ್ಕೆ ಪಡೆಯುವಾಗ ದರೋಡೆಕೋರನ ರೀತಿಯಲ್ಲಿ ವರ್ತಿಸುವುದು ಸಲ್ಲ' ಎಂದು ಕಿಡಿ ಕಾರಿರುವ ಹೈಕೋರ್ಟ್, 'ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಮತ್ತು ಅದರ ಅಧಿಕಾರಿಗಳ ನಡವಳಿಕೆ ತೀವ್ರಗಾಮಿತನದಿಂದ ಕೂಡಿರುವುದು ಪಾಳೆಗಾರಿಕೆಯ ಪ್ರತಿಬಿಂಬದಂತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಪರಿಹಾರ ವಿಳಂಬ ಪ್ರಶ್ನಿಸಿ ಬೆಂಗಳೂರಿನ ಜೆ.ಪಿ.ನಗರದ ಎಂ.ವಿ.ಗುರುಪ್ರಸಾದ್ ಮತ್ತು ನಂದಿನಿ ಎಂ.ಗುರುಪ್ರಸಾದ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪವಿರುವ ದೇವನಹಳ್ಳಿ ತಾಲ್ಲೂಕಿನ ಜೊನ್ನಹಳ್ಳಿ ಗ್ರಾಮದಲ್ಲಿ ಗುರುಪ್ರಸಾದ್ 2007ರ ಜನವರಿ 27ರಂದು 5.1 ಎಕರೆ ಜಮೀನು ಹಾಗೂ ನಂದಿನಿ ಅವರು 2006ರ ಡಿಸೆಂಬರ್ 23ರಂದು 38 ಗುಂಟೆ ಜಮೀನು ಖರೀದಿಸಿದ್ದರು. ಈ ಜಮೀನನ್ನು ಕೆಐಎಡಿಬಿ 2007ರ ಮೇನಲ್ಲಿ ಸ್ವಾಧೀನಕ್ಕೆ ಪಡೆದಿತ್ತು. ಕೋಟ್ಯಂತರ ಮೌಲ್ಯದ ಈ ಜಮೀನಿಗೆ ಸಕಾಲದಲ್ಲಿ ಪರಿಹಾರ ಪಾವತಿಸದ ಕಾರಣ ಇದು ಹಲವು ಸುತ್ತಿನ ವ್ಯಾಜ್ಯಕ್ಕೆ ಕಾರಣವಾಗಿತ್ತು.

ಈ ಕುರಿತಂತೆ ಹೈಕೋರ್ಟ್ ಮೆಟ್ಟಿಲೇರಿದ್ದ ಗುರುಪ್ರಸಾದ್ ಮತ್ತು ನಂದಿನಿ ಅವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠವು, 'ಅರ್ಜಿದಾರರ ಜಮೀನನ್ನು ಸ್ವಾಧೀನಪಡಿಸಿಕೊಂಡು ಪರಿಹಾರ ನೀಡಲು 15 ವರ್ಷಗಳ ಕಾಲ ಕಾಯುವಂತೆ ಮಾಡಿದ ಅಧಿಕಾರಿಗಳ ವರ್ತನೆ ಮತ್ತು ಇಷ್ಟು ಸುದೀರ್ಘ ಅವಧಿಯತನಕ ಪರಿಹಾರ ಪಾವತಿಯನ್ನು ಏಕೆ ತಡೆಹಿಡಿಯಲಾಗಿದೆ ಎಂಬುದಕ್ಕೆ ಕೆಐಎಡಿಬಿ ವತಿಯಿಂದ ಸಮಂಜಸವಾದ ವಿವರಣೆಯಿಲ್ಲ. ಹೀಗಾಗಿ, ಅರ್ಜಿದಾರರರಿಗೆ ಶೇ 50ರ ದರದಲ್ಲಿ ಪರಿಹಾರವನ್ನು ಮರು ನಿಗದಿಪಡಿಸಬೇಕು. ಪರಿಹಾರ ಮೊತ್ತದ ಮೇಲೆ ವಾರ್ಷಿಕ ಶೇ 12ರ ಬಡ್ಡಿಯನ್ನು ಎಂಟು ವಾರಗಳ ಒಳಗೆ ಪಾವತಿಸಬೇಕು' ಎಂದು ಕೆಐಎಡಿಬಿಗೆ ನಿರ್ದೇಶಿಸಿದೆ.

ಭಾನುವಾರ, ಫೆಬ್ರುವರಿ 12, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 43 | ಪುಟ 20
● www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕಲೆ ಮತ್ತು ಚಿತ್ರಪಟಗಳ ವಸ್ತುಸಂಗ್ರಹಾಲಯ ಜ್ಯುಯೆಲ್ ಬಾಕ್ಸ್‌ನೊಳಗೆ ಎಷ್ಟೊಂದು 'ಆಭರಣ'ಗಳು...



'ಬೊಬ್ಬೆಯಲ್ಲ, ನಾದದ ಸಂಸ್ಕೃತಿಯತ್ತ ಹೊರಳಲಿ' 5
ಸಿಪಿಎಂ–ಕಾಂಗ್ರೆಸ್ ಮೈತ್ರಿಗೆ ಪ್ರಧಾನಿ ಮೋದಿ ವ್ಯಂಗ್ಯ
ವಾಕ್ ಸ್ವಾತಂತ್ರ್ಯವೇ ಇಲ್ಲ: ಖರ್ಗೆ 7
ಕೇರಳದಲ್ಲಿ 'ಕುಸ್ತಿ', ತ್ರಿಪುರಾದಲ್ಲಿ 'ದೋಸ್ತಿ' 7

ಕೋವಿಡ್ ಅವಧಿ ಹೊರತುಪಡಿಸಿ ನಿರಂತರ ನಷ್ಟ ● ಮಾರುಕಟ್ಟೆಗೆ ಹೊಂದದ ವ್ಯಾಪಾರ ಶೈಲಿ

ಸಂಕಷ್ಟಕ್ಕೆ ಹಾಪ್‌ಕಾಮ್ಸ್ ಏದುಸಿರು

ಹಾಪ್‌ಕಾಮ್ಸ್ ವಿವರ

ಬೆಂಗಳೂರು ಜಿಲ್ಲೆ	1 ಹಾಪ್‌ಕಾಮ್ಸ್ (ನಗರ ಮತ್ತು 4 ಜಿಲ್ಲೆ ಒಳಗೊಂಡಂತೆ)	7,724 ನೋಂದಾಯಿತ ಸದಸ್ಯರು	209 ಒಟ್ಟು ಮಳಿಗೆಗಳು	₹100 ಕೋಟಿ ವಾರ್ಷಿಕ ವಹಿವಾಟು	14 ಸಾವಿರ ಟನ್ ವಾರ್ಷಿಕ ಹಣ್ಣು, ತರಕಾರಿ ಖರೀದಿ
ಜಿಲ್ಲಾ ಮಟ್ಟ	23 ಹಾಪ್‌ಕಾಮ್ಸ್‌ಗಳು	28,336 ಒಟ್ಟು ಸದಸ್ಯರು	218 ಒಟ್ಟು ಮಳಿಗೆಗಳು	₹50 ಕೋಟಿ ವಾರ್ಷಿಕ ವಹಿವಾಟು	7 ಸಾವಿರ ಟನ್ ವಾರ್ಷಿಕ ಹಣ್ಣು, ತರಕಾರಿ ಖರೀದಿ

ಒಳನೋಟ
ಪೈಪೋಟಿಗೆ ತತ್ತರ
ಪ್ರತಿಕ್ರಿಯಿಸಿ: 9606038256
feedback@prajavani.co.in

● ಕೆ.ಎಸ್.ಸುನಿಲ್



ಕಲಬುರಗಿಯ ಹಳೆ ಜೇವರ್ಗಿ ರಸ್ತೆಯಲ್ಲಿರುವ ಹಾಪ್‌ಕಾಮ್ಸ್ ಮಳಿಗೆ

ಬೆಂಗಳೂರು: ಗುಣಮಟ್ಟದ, ತಾಜಾ ಹಣ್ಣು, ತರಕಾರಿಗಳನ್ನು ಗ್ರಾಹಕರಿಗೆ ಪೂರೈಸುವ ಹಾಗೂ ಮಧ್ಯವರ್ತಿಗಳಿಂದ ಮುಕ್ತ ವಾದ ಮಾರುಕಟ್ಟೆ ಒದಗಿಸುವ ಮಹತ್ವದ ಉದ್ದೇಶದಿಂದ ಸ್ಥಾಪನೆಗೊಂಡ ಹಾಪ್ ಕಾಮ್ಸ್ (ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ) ದಶಕಗಳ ಕಾಲ ವಹಿವಾಟು ನಡೆಸಿದ ನಂತರವೂ ಆರ್ಥಿಕ ನಷ್ಟ, ಸಿಬ್ಬಂದಿ, ಸೌಲಭ್ಯಗಳ ಕೊರತೆ, ಖಾಸಗಿ ಪೈಪೋಟಿ ಎದುರಿಸಲಾಗದೆ ಬಳಲುತ್ತಿದೆ. ಸಂಸ್ಥೆಯ ಸ್ಥಾಪನೆಯ ಉದ್ದೇಶಗಳೇ ಕಾರ್ಯಗತವಾಗುತ್ತಿಲ್ಲ.

ತೋಟಗಾರಿಕಾ ಪಿತಾಮಹ ಎನಿಸಿರುವ ಎಂ.ಎಚ್. ಮರೀಗೌಡ ಅವರ ದೂರದೃಷ್ಟಿಯ ಫಲವಾಗಿ ಸಂಸ್ಥೆ ಆರಂಭವಾಯಿತು. ದ್ರಾಕ್ಷಿ ಬೆಳೆಗೆ ಮಾರುಕಟ್ಟೆ ಕಲ್ಪಿಸಬೇಕು ಎಂಬ ದೃಷ್ಟಿಯಿಂದ 1959ರಲ್ಲಿ ದ್ರಾಕ್ಷಿ ಬೆಳೆಗಾರರ ಸಹಕಾರಿ ಸಂಘ ಆರಂಭವಾಯಿತು. ಇದು ತನ್ನ ಕಾರ್ಯ ವ್ಯಾಪ್ತಿ ವಿಸ್ತರಿಸಿಕೊಂಡು 1965ರಿಂದ ಹಣ್ಣು, ತರಕಾರಿ ವಹಿವಾಟು ಆರಂಭಿಸಿತು. 1986–87ರಿಂದ ಹಾಪ್‌ಕಾಮ್ಸ್ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ರಾಜ್ಯದಲ್ಲಿ ಅಂದಾಜು 8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸರಾಸರಿ 1.5 ಕೋಟಿ ಟನ್ ಹಣ್ಣು, ತರಕಾರಿ ಬೆಳೆಯಲಾಗುತ್ತಿದೆ. ಈ ಪೈಕಿ ಶೇ 50 ರಿಂದ 60ರಷ್ಟು ರಾಜ್ಯದಲ್ಲೇ ಬಳಕೆ ಆಗುತ್ತಿದೆ. ಉಳಿದದ್ದು ನೆರೆ ರಾಜ್ಯಗಳಿಗೆ ಪೂರೈಕೆ ಆಗುತ್ತಿದೆ. ಎಪಿಎಂಸಿ ಜತೆಗೆ, ಹಾಪ್‌ಕಾಮ್ಸ್ ಮಳಿಗೆ, ಸೂಪರ್ ಮಾರ್ಕೆಟ್‌ಗಳು, ಅಸಂಘಟಿತ ವಲಯಗಳಲ್ಲಿಯೂ ಉತ್ಪನ್ನಗಳ ಮಾರಾಟ ಮಾಡಲಾಗುತ್ತಿದೆ. ಬೆಳೆಗಾರರಿಂದ ಬೆಂಗಳೂರು ಹಾಪ್‌ಕಾಮ್ಸ್ ನಿತ್ಯ ಸರಾಸರಿ 40 ಟನ್ ಹಣ್ಣು, ತರಕಾರಿ ಖರೀದಿಸುತ್ತಿದೆ.

ನಷ್ಟದಲ್ಲಿ ಬಹುತೇಕ ಹಾಪ್‌ಕಾಮ್ಸ್‌ಗಳು

ಜಿಲ್ಲಾ ಮಟ್ಟದ 23 ಹಾಪ್‌ಕಾಮ್ಸ್‌ಗಳ ಪೈಕಿ ಶಿವಮೊಗ್ಗ, ಮೈಸೂರು, ಕೊಡಗು ಹೊರತುಪಡಿಸಿ ಉಳಿದವು ನಷ್ಟದಲ್ಲಿವೆ. ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಇಲಾಖೆ ಅಡಿ ಕಾರ್ಯನಿರ್ವಹಿಸುವ ವಸತಿನಿಲಯಗಳು, ಆರೋಗ್ಯ ಇಲಾಖೆ ಆಸ್ಪತ್ರೆಗಳು ಹಾಗೂ ಜೈಲುಗಳಿಗೆ ಸಂಸ್ಥೆ ಮೂಲಕ ತರಕಾರಿ, ಹಣ್ಣುಗಳ ಪೂರೈಕೆಯಾಗಬೇಕು. ಶಾಸಕರ ಅನುದಾನದಲ್ಲಿ ಹಾಪ್‌ಕಾಮ್ಸ್ ಮಳಿಗೆ ನಿರ್ಮಿಸಿ ಸ್ಥಳೀಯವಾಗಿ ಮಾರುಕಟ್ಟೆ ವಿಸ್ತರಿಸಬೇಕು. ಸಂಸ್ಥೆಯ ಪುನಃಶ್ಚೇತನಕ್ಕಾಗಿ ಸಿ.ಎಂ ಬಸವರಾಜ ಬೊಮ್ಮಾಯಿ ₹ 12 ಕೋಟಿ ದುಡಿಯುವ ಬಂಡವಾಳ ಮಂಜೂರು ಮಾಡಿದ್ದಾರೆ. ಬಡ್ಡಿ ವಿಧಿಸದಿರಲು ಸರ್ಕಾರಕ್ಕೆ ಮನವಿ ಮಾಡಿದ್ದೇವೆ.

ಬಿ.ಡಿ.ಭೂಕಾಂತ್, ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ (ಕೆಎಚ್‌ಎಫ್) ಅಧ್ಯಕ್ಷ

4ನೇ ಪುಟ ನೋಡಿ

ಅಲ್‌ಕೈದಾ ನಂಟು ಆರೋಪ: ಸಾಫ್ಟ್‌ವೇರ್ ಉದ್ಯೋಗಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಗ್ರ ಸಂಘಟನೆ 'ಅಲ್ ಕೈದಾ' ಜೊತೆ ನಂಟು ಹೊಂದಿರುವ, ಸಿರಿಯಾಗೆ ಹೋಗಲು ಸಿದ್ಧತೆ ನಡೆಸಿದ್ದ ಆರೋಪದಡಿ ಮೊಹಮ್ಮದ್ ಆರೀಫ್ ಎಂಬಾತನನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದಾರೆ.



ಆರೀಫ್

'ಉತ್ತರ ಪ್ರದೇಶದ ಆರೀಫ್, ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ಥಣಿಸಂದ್ರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ. ರಾಜ್ಯ ಆಂತರಿಕ ಭದ್ರತಾ ವಿಭಾಗ (ಐಎಸ್‌ಡಿ) ಪೊಲೀಸರ ಸಹಾಯದಿಂದ ಶುಕ್ರವಾರ ರಾತ್ರಿ ಮನೆ ಮೇಲೆ ದಾಳಿ ಮಾಡಿ, ಆರೀಫ್‌ನನ್ನು ಬಂಧಿಸಲಾಗಿದೆ. ಲ್ಯಾಪ್‌ಟಾಪ್ ಹಾಗೂ ಎರಡು ಹಾರ್ಡ್‌ಡಿಸ್ಕ್ ಜಪ್ತಿ ಮಾಡಲಾಗಿದೆ' ಎಂದು ಎನ್‌ಐಎ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಅಲ್ ಕೈದಾ ಉಗ್ರ ಸಂಘಟನೆ ಸೇರಲು ಅಫ್ಗಾನಿಸ್ತಾನಕ್ಕೆ ಹೊರಟಿದ್ದ ಅಸ್ಸಾಂನ ಅಖ್ತರ್ ಹುಸೈನ್ ಲಷ್ಕರ್ ಅಲಿಯಾಸ್ ಮಹಮ್ಮದ್ ಹುಸೈನ್ (24) ಹಾಗೂ ಪಶ್ಚಿಮ ಬಂಗಾಳದ ಅಬ್ದುಲ್ ಅಲೀಂ ಮಂಡಲ್ ಅಲಿಯಾಸ್ ಮಹಮ್ಮದ್ ಜುಬಾನನ್ನು (23) 2022ರ ಜುಲೈನಲ್ಲಿ ಬಂಧಿಸಲಾಗಿತ್ತು. ಅವರಿಬ್ಬರ ವಿಚಾರಣೆ ವೇಳೆ ಮೊಹಮ್ಮದ್ ಆರೀಫ್ ಹೆಸರು ಬಾಯ್ಬಿಟ್ಟಿದ್ದರು. ನಕಲಿ ಹೆಸರಿನಲ್ಲಿ ಸಾಮಾಜಿಕ ಮಾಧ್ಯಮಗಳ ಮೂಲಕ ಅಲ್ ಕೈದಾ ಸಂಘಟನೆ ಉಗ್ರರ ಜೊತೆ ಆರೀಫ್ ಮಾತುಕತೆ ನಡೆಸುತ್ತಿದ್ದ. ಈತ ಯಾರು ಎಂಬುದು ಆರಂಭದಲ್ಲಿ ಗೊತ್ತಾಗಿರಲಿಲ್ಲ. ಇತ್ತೀಚೆಗೆ ಟೆಲಿಗ್ರಾಂ ಆ್ಯಪ್ ಮೂಲಕ ಈತನ ಸುಳಿವು ಸಿಕ್ಕಿತ್ತು' ಎಂದು ಎನ್‌ಐಎ ಅಧಿಕಾರಿಯೊಬ್ಬರು ತಿಳಿಸಿದರು.

ಮಹಾರಾಷ್ಟ್ರದಲ್ಲೂ ಶೋಧ

ನವದೆಹಲಿ (ಪಿಟಿಐ): 'ಅಲ್‌ಕೈದಾ ಉಗ್ರ ಸಂಘಟನೆ ಜೊತೆ ನಂಟು ಹೊಂದಿದ ಆರೋಪಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಪಾಲ್ಘರ್ ಹಾಗೂ ಥಾಣೆಯಲ್ಲಿ ಎನ್‌ಐಎ ಅಧಿಕಾರಿಗಳು ಶೋಧ ನಡೆಸಿದ್ದಾರೆ' ಎಂದು ವಕ್ತಾರರೊಬ್ಬರು ಶನಿವಾರ ಹೇಳಿದ್ದಾರೆ. 'ಶೋಧದ ವೇಳೆ ಅಧಿಕಾರಿಗಳಿಗೆ ಕೆಲ ದಾಖಲೆಗಳು ಹಾಗೂ ಡಿಜಿಟಲ್ ಉಪಕರಣಗಳು ದೊರೆತಿದ್ದು ಅವುಗಳನ್ನು ಜಪ್ತಿ ಮಾಡಿದ್ದಾರೆ' ಎಂದೂ ತಿಳಿಸಿದ್ದಾರೆ.

ಅಂಬೇಡ್ಕರ್ ಅವಹೇಳನ: ಅಮಾನತು

ಬೆಂಗಳೂರು: ಇಲ್ಲಿನ ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರದರ್ಶಿಸಿದ ಕಿರುನಾಟಕದಲ್ಲಿ ಡಾ.ಬಿ. ಆರ್. ಅಂಬೇಡ್ಕರ್ ಅವರನ್ನು ಅವಹೇಳನ ಮಾಡಿ, ಜಾತಿ ನಿಂದಿಸಿದ್ದಕ್ಕೆ ರಾಜ್ಯದ ವಿವಿಧೆಡೆ ಆಕ್ರೋಶ ವ್ಯಕ್ತವಾಗಿದೆ. ಈ ನಡುವೆ ನಾಟಕದಲ್ಲಿ ಅಭಿನಯಿಸಿದ ಎಲ್ಲ ವಿದ್ಯಾರ್ಥಿಗಳನ್ನು ಅಮಾನತುಗೊಳಿಸಿರುವ ವಿಶ್ವವಿದ್ಯಾಲಯವು ತನಿಖೆಗೆ ಶಿಸ್ತು ಸಮಿತಿ ರಚಿಸಿದೆ. 5

ಟರ್ಕಿಯಲ್ಲಿ ಎಂಜಿನಿಯರ್ ಮೃತದೇಹ ಪತ್ತೆ

ಬೆಂಗಳೂರು: ಕಂಪನಿ ಕೆಲಸಕ್ಕೆಂದು ಟರ್ಕಿಗೆ ಹೋಗಿ ನಾಪತ್ತೆಯಾಗಿದ್ದ ಬೆಂಗಳೂರಿನ ಎಂಜಿನಿಯರ್ ವಿಜಯ್ ಕುಮಾರ್ (36) ಅವರ ಮೃತದೇಹ ಭೂಕಂಪ ಪೀಡಿತ ಮಲಾಟ್ಯ ಎಂಬಲ್ಲಿ ಅವಶೇಷಗಳಡಿ ಪತ್ತೆಯಾಗಿದೆ.



ಡೆಹ್ರಾಡೂನ್‌ನ ವಿಜಯ್‌ಕುಮಾರ್, ಬೆಂಗಳೂರಿನ ಪೀಣ್ಯದಲ್ಲಿರುವ ಆಮ್ಲಜನಕ ಹಾಗೂ ನೈಟ್ರೋಜನ್ ತಯಾರಿಕೆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕಂಪನಿಯ ಹೊಸ ಘಟಕ ಸ್ಥಾಪನೆ ಕೆಲಸಕ್ಕಾಗಿ ಜ. 25ರಂದು ಟರ್ಕಿಗೆ ಹೋಗಿದ್ದರು. ಟರ್ಕಿಯಲ್ಲಿ ಭೂಕಂಪ ಸಂಭವಿಸಿದ ಬಳಿಕ, ಅವರ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ವಿಜಯ್‌ಕುಮಾರ್ ಅವರನ್ನು ಹುಡುಕಿಕೊಡುವಂತೆ ಸಂಬಂಧಿಕರು ಭಾರತೀಯ ರಾಯಭಾರ ಕಚೇರಿಗೆ ಪತ್ರ ಬರೆದಿದ್ದರು.

'ವಿಜಯ್‌ಕುಮಾರ್ ಅವರು ಉಳಿದುಕೊಂಡಿದ್ದ ಹೋಟೆಲ್ ನೆಲಸಮವಾಗಿತ್ತು. ಅದರ ಅವಶೇಷಗಳಡಿ ಶುಕ್ರವಾರ ವಿಜಯ್‌ಕುಮಾರ್ ಮೃತದೇಹ ಪತ್ತೆಯಾಗಿದ್ದು, ಈ ಬಗ್ಗೆ ರಾಯಭಾರ ಕಚೇರಿ ಅಧಿಕಾರಿಗಳು ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಾರೆ' ಎಂದು ಕಂಪನಿ ಪ್ರತಿನಿಧಿಯೊಬ್ಬರು ತಿಳಿಸಿದರು.

ಬೊಮ್ಮಾಯಿ ಕೈ ಬಲಪಡಿಸಿ; ತಿಂಗಳೊಳಗೆ ಪ್ರತಿ ಹಳ್ಳಿ ಸಂಪರ್ಕಿಸಿ

ಬಿಜೆಪಿ ನಾಯಕರಿಗೆ ಶಾ ಗಡುವು

ಪ್ರಜಾವಾಣಿ ವಾರ್ತೆ

ಮಂಗಳೂರು: 'ಮುಂದಿನ 30 ದಿನಗಳ ಒಳಗೆ ರಾಜ್ಯದ ಹಳ್ಳಿ ಹಳ್ಳಿಗಳನ್ನು ತಲುಪಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳ ಬಗ್ಗೆ ಜನರಿಗೆ ತಿಳಿವಳಿಕೆ ನೀಡಿ, ಚುನಾವಣೆಗೆ ಅಗತ್ಯ ವೇದಿಕೆ ಸಿದ್ಧಪಡಿಸಬೇಕು' ಎಂದು ಬಿಜೆಪಿ ರಾಜ್ಯ ಮುಖಂಡರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಎಚ್ಚರಿಕೆ ರೂಪದ ಸೂಚನೆ ನೀಡಿದರು.

'ಮುಂದಿನ ತಿಂಗಳು ನಾನೇ ರಾಜ್ಯಕ್ಕೆ ಬಂದು ಪುನಃ ಪರಿಶೀಲನೆ ನಡೆಸುತ್ತೇನೆ' ಎಂದೂ ಹೇಳಿದರು.

ಶನಿವಾರ ಪುತ್ತೂರಿನಲ್ಲಿ ನಡೆದ ಕೇಂದ್ರ ಅಡಿಕೆ ಮತ್ತು ಕೊಕ್ಕೊ ಮಾರುಕಟ್ಟೆ ಮತ್ತು ಸಂಸ್ಕರಣೆ ಸಹಕಾರಿ ಸಂಸ್ಥೆ 'ಕ್ಯಾಂಪ್ಕೊ' ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿಯೂ ರಾಜಕೀಯ ಭಾಷಣ ಮಾಡಿದ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕೈ ಬಲಪಡಿಸಿ, ಮೋದಿ ಅವರ ಕೈ ಬಲಪಡಿಸಿ' ಎಂದು ಕೋರುವ ಮೂಲಕ ರಾಜ್ಯ ರಾಜಕಾರಣದಲ್ಲಿ ಚರ್ಚೆಯಾಗುತ್ತಿರುವ 'ಬ್ರಾಹ್ಮಣ ಮುಖ್ಯಮಂತ್ರಿ' ವಿಷಯಕ್ಕೆ ಸಂಬಂಧಿಸಿದಂತೆ ಹೊಸ ಸಂದೇಶ ರವಾನಿಸಲು ಯತ್ನಿಸಿದರು.

'ಟಿಪ್ಪುವನ್ನು ಒಪ್ಪುವ ಕಾಂಗ್ರೆಸ್–ಜೆಡಿಎಸ್ ಬೇಕಾ, ರಾಣಿ ಅಬ್ಬಕ್ಕ ಅವರನ್ನು ಆರಾಧಿಸುವ ಬಿಜೆಪಿ ಬೇಕಾ' ಎಂದು ಪ್ರಶ್ನಿಸಿದರು.

7ನೇ ಪುಟ ನೋಡಿ

ಬಿಡಿಎ: ಇಬ್ಬರು ದಲ್ಲಾಳಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಚೇರಿ ಆವರಣದಲ್ಲಿ ಲೋಕಾಯುಕ್ತ ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದ ಮೂವರು ದಲ್ಲಾಳಿಗಳ ಪೈಕಿ ಇಬ್ಬರನ್ನು ಶನಿವಾರ ಬಂಧಿಸಲಾಗಿದೆ.

ನಿವೇಶನ ಹಂಚಿಕೆ, ಬದಲಿ ನಿವೇಶನಗಳ ಮಂಜೂರಾತಿ, ಭೂಮಾಲೀಕರಿಗೆ ಪರಿಹಾರ ನೀಡುವಲ್ಲಿ ವ್ಯಾಪಕ ಅಕ್ರಮಗಳು ನಡೆಯುತ್ತಿರುವ ದೂರುಗಳನ್ನು ಆಧರಿಸಿ ಶುಕ್ರವಾರ ಮಧ್ಯಾಹ್ನ ಬಿಡಿಎ ಕೇಂದ್ರ ಕಚೇರಿ ಮೇಲೆ ದಾಳಿಮಾಡಿದ್ದ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದ್ದರು. ಆಗ ಕಚೇರಿ ಆವರಣದಲ್ಲಿದ್ದ ಅನಿಲ್ ಕುಮಾರ್, ಮಂಜಪ್ಪ ಮತ್ತು ಆದಿನಾರಾಯಣ ಎಂಬ ದಲ್ಲಾಳಿಗಳನ್ನು ತನಿಖಾ ತಂಡ ವಶಕ್ಕೆ ಪಡೆದಿತ್ತು.

'ಮೂವರನ್ನೂ ತೀವ್ರವಾಗಿ ವಿಚಾರಣೆಗೆ ಒಳಪಡಿಸಲಾಗಿದೆ. ಆದಿನಾರಾಯಣ ಸ್ವಂತ ಕೆಲಸಕ್ಕಾಗಿ ಬಿಡಿಎ ಕಚೇರಿಗೆ ಬಂದಿರುವುದಾಗಿ ಕೆಲವು ದಾಖಲೆಗಳನ್ನು ಒದಗಿಸಿದರು. ಈ ಕಾರಣದಿಂದ ಅವರನ್ನು ಬಂಧಿಸಿಲ್ಲ. ಅನಿಲ್ ಕುಮಾರ್ ಮತ್ತು ಮಂಜಪ್ಪ, ದಲ್ಲಾಳಿ ಕೆಲಸಕ್ಕಾಗಿಯೇ ಅಲ್ಲಿದ್ದುದಕ್ಕೆ ಸಾಕ್ಷ್ಯಗಳು ದೊರಕಿವೆ. ಇಬ್ಬರನ್ನೂ ಬಂಧಿಸಿ ಶನಿವಾರ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು. ನ್ಯಾಯಾಧೀಶರ ಆದೇಶದಂತೆ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಲೋಕಾಯುಕ್ತದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

7ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಅಶ್ವಿನ್ ಮೋಡಿಗೆ ಕುಸಿದ ಆಸ್ಟ್ರೇಲಿಯಾ

ನಾಗಪುರ ಟೆಸ್ಟ್



ಆಫ್‌ಸ್ಪಿನ್ನರ್ ಆರ್ ಅಶ್ವಿನ್ ಸ್ಪಿನ್ ಮೋಡಿಯ ಮುಂದೆ ಬಾರ್ಡರ್ ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ತಂಡವು ಇನಿಂಗ್ಸ್ ಮತ್ತು 132 ರನ್‌ಗಳಿಂದ ಜಯಿಸಿತು.

ಆರ್. ಅಶ್ವಿನ್
ಓವರ್ 12
ಮೇಡನ್ 3
ರನ್ 37
ವಿಕೆಟ್ 5

- ಟೆಸ್ಟ್‌ನಲ್ಲಿ 31ನೇ ಬಾರಿ ಐದು ವಿಕೆಟ್ ಪಡೆದರು
- ಭಾರತದ ನೆಲದಲ್ಲಿ ಟೆಸ್ಟ್‌ನಲ್ಲಿ 25ನೇ ಬಾರಿ ಐದು ವಿಕೆಟ್ ಗಳಿಸಿ, ಅನಿಲ್ ಕುಂಬ್ಳೆ ದಾಖಲೆ ಸರಿಗಟ್ಟಿದರು
- ಆಸ್ಟ್ರೇಲಿಯಾದ 20 ವಿಕೆಟ್‌ಗಳಲ್ಲಿ 10 ವಿಕೆಟ್‌ಗಳನ್ನು ಭಾರತದ ಬೌಲರ್‌ಗಳು ಎಲ್‌ಬಿಡಬ್ಲ್ಯು ಮೂಲಕ ಗಳಿಸಿದ್ದಾರೆ
- **91 ರನ್:** ಭಾರತದ ನೆಲದಲ್ಲಿ ಟೆಸ್ಟ್ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾದ ಕನಿಷ್ಠ ಮೊತ್ತ ಇದು. 2004ರಲ್ಲಿ ಮುಂಬೈನಲ್ಲಿ ಗಳಿಸಿದ್ದ 93 ರನ್ ಇದುವರೆಗಿನ ಕನಿಷ್ಠ ಮೊತ್ತ ಆಗಿತ್ತು

ಏರೋ ಇಂಡಿಯಾ: ಸೋಮವಾರದಿಂದ ವೈಮಾನಿಕ ಪ್ರದರ್ಶನ ● ತಾಲೀಮು ಪ್ರದರ್ಶನ ವೀಕ್ಷಣೆಗೆ ಕಿಕ್ಕಿರಿದು ಸೇರಿದ ಜನ

ವಾಯುನೆಲೆಯಲ್ಲಿ ತಾಲೀಮಿನ ಅಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನೇನು ನೆಲಕ್ಕೆ ಅಪ್ಪಳಿಸಿತು ಎನ್ನುವಷ್ಟರಲ್ಲಿ ಚಂಗನೆ ಆಕಾಶದತ್ತ ಜಿಗಿದು ಹೊರಟ ಯುದ್ಧ ವಿಮಾನ ಕಣ್ಣಿಗೆ ಕಾಣದಷ್ಟು ಚಿಕ್ಕದಾಗಿ, ಕಣ್ಮುಚ್ಚಿ ಬಿಡುವಷ್ಟರಲ್ಲಿ ಮತ್ತೆ ಅದೇ ವೇಗದಲ್ಲಿ ಬಂದು ಆಕಾಶದಲ್ಲಿ ಪಲ್ಟಿ ಹೊಡೆಯುತ್ತಿತ್ತು. ವಿರುದ್ಧ ದಿಕ್ಕಿನಲ್ಲಿ ಬಂದ ಯುದ್ಧ ವಿಮಾನಗಳು ಇನ್ನೇನು ಡಿಕ್ಕಿ ಹೊಡೆದುಕೊಂಡವು ಎನ್ನುವಷ್ಟರಲ್ಲಿ ಬಾಗಿ ತಪ್ಪಿಸಿಕೊಂಡು ಮುಂದೆ ಸಾಗಿದವು!

ಯಲಹಂಕ ವಾಯುನೆಲೆಯಲ್ಲಿ ಸೋಮವಾರದಿಂದ ಆರಂಭವಾಗಲಿರುವ ಏರೋ ಇಂಡಿಯಾ ವೈಮಾನಿಕ ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಶನಿವಾರ ನಡೆದ ಪೂರ್ಣ ಪ್ರಮಾಣದ ತಾಲೀಮಿನಲ್ಲಿ ಕಂಡು ಬಂದ ದೃಶ್ಯಗಳಿವು.

ಬೆಳಿಗ್ಗೆ 9.30ಕ್ಕೆ ಸರಿಯಾಗಿ ತಿರಂಗದೊಂದಿಗೆ ಬಂದ ಹೆಲಿಕಾಪ್ಟರ್‌ಗಳು ಹಾದು ಮುಂದೆ ಸಾಗಿದವು. ಅವುಗಳ ಹಿಂದೆಯೇ ಕಣ್ಣು ಸಾಗುತ್ತಿದ್ದರೆ, ಮತ್ತೊಂದು ದಿಕ್ಕಿನಿಂದ ಯುದ್ಧ ವಿಮಾನಗಳ ದಂಡು ಎದುರಾದವು. ಸರಸರನೆ ಹಾದು ಹೋದ ತೇಜಸ್, ಸುಖೋಯ್, ರಫೇಲ್ ಯುದ್ಧ ವಿಮಾನಗಳು ನಡೆಸಿದ ಕಸರತ್ತು ನೋಡುಗರನ್ನು ನಿಬ್ಬೆರಗಾಗುವಂತೆ ಮಾಡಿದವು.

ಆತ್ಮನಿರ್ಭರ ಭಾರತದ ಪರಿಕಲ್ಪನೆಯಲ್ಲಿ ಎಚ್‌ಎಎಲ್ ನಿರ್ಮಿತ ಹೆಲಿಕಾಪ್ಟರ್ ನಡೆಸಿದ ವ್ಯವಸ್ಥಿತ ಹಾರಾಟಕ್ಕೆ ನೋಡುಗರು ಮನಸೋತರು. ನೀಲಿಯಾಕಾಶದಲ್ಲಿ ಯುದ್ಧ ವಿಮಾನಗಳು ವ್ಯವಸ್ಥಿತ ಕಸರತ್ತು ನಡೆಸಿದವು. ವೇಗವಾಗಿ ಬಂದು ಗಾಳಿಯಲ್ಲೇ ಪಲ್ಟಿ ಹೊಡೆದು ಮುಂದೆ ಸಾಗಿ ಚಿತ್ತಾರಗಳನ್ನು ಬಿಡಿಸಿದವು.

ಇನ್ನು ಜನರ ಆಕರ್ಷಣೆಯ ಕೇಂದ್ರ ಬಿಂದು ಎಂದರೆ ಸೂರ್ಯಕಿರಣ ವಿಮಾನಗಳು. ಒಂಬತ್ತು ವಿಮಾನಗಳು ಹಾರಿ ಬಂದು ಬಾನಂಗಳದಲ್ಲಿ ಬಿಡಿಸಿದ ಚಿತ್ತಾರಗಳು ನೆರೆದಿದ್ದವರ ಮನಸೂರೆಗೊಳಿಸಿದವು. ನೀಲಿಯಾಗಸದಲ್ಲಿ ಸಾಗಿದಾಗ ಹೊರಟ ಹೊಗೆಯಲ್ಲಿ ಹೃದಯದ ಆಕಾರದ ಚಿತ್ರಗಳನ್ನು ಬಿಡಿಸಿ ಜನರಿಂದ ಚಪ್ಪಾಳೆ ಗಿಟ್ಟಿಸಿದವು. ಅಂತಿಮವಾಗಿ ಬಂದ ಸಾರಂಗ್ ಹೆಲಿಕಾಪ್ಟರ್‌ಗಳು ಕಸರತ್ತುಗಳನ್ನು ನಡೆಸಿದವು. 74 ವರ್ಷಗಳಷ್ಟು ಹಳೆಯ 'ಡಕೋಟಾ ಡಿ.ಸಿ-3' ಯುದ್ಧ ವಿಮಾನ ಪೂರ್ವ ಸಿದ್ಧತಾ ಹಾರಾಟ ನೋಡುಗರನ್ನು ಪುಳಕಿತಗೊಳಿಸಿತು.

ಬೆಳಿಗ್ಗೆ 9.30ಕ್ಕೆ ಆರಂಭವಾದ ಕಸರತ್ತು 12 ಗಂಟೆ ತನಕ ನಡೆಯಿತು. ಬಿಸಿಲಿನಲ್ಲೇ ನಿಂತು ವೀಕ್ಷಿಸಿದ ಜನರಿಗೆ ಎರಡೂವರೆ ಗಂಟೆ ಕಳೆದಿದ್ದೆ ಗೊತ್ತಾಗಲಿಲ್ಲ. ಸೇನೆ, ವಾಯುಸೇನೆ, ಬಿಎಸ್‌ಎಫ್, ಮಾಧ್ಯಮ ಪ್ರತಿನಿಧಿಗಳ ಕುಟುಂಬ ಸದಸ್ಯರ ವೀಕ್ಷಣೆಗೆ ಶನಿವಾರ ಅವಕಾಶ ನೀಡಲಾಗಿತ್ತು. ಕಿಕ್ಕಿರಿದು ಸೇರಿದ್ದ ಜನರಿಗೆ ವೈಮಾನಿಕ ಪ್ರದರ್ಶನ ವಿಶೇಷ ಅನುಭವ ಕಟ್ಟಿಕೊಟ್ಟಿತು.

ಮೊರಾರ್ಜಿ ದೇಸಾಯಿ ವಸತಿಶಾಲೆ ಮತ್ತು ಆಶ್ರಮ ಶಾಲೆಯ 2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಮಾನಗಳ ಕಸರತ್ತುಗಳನ್ನು ಹತ್ತಿರದಿಂದ ಕಣ್ತುಂಬಿಕೊಂಡು ಕೇಕೆ ಹಾಕಿ ಸಂಭ್ರಮಿಸಿದರು.


ವಾಯುನೆಲೆಯಲ್ಲಿ ಶನಿವಾರ ನಡೆದ ವೈಮಾನಿಕ ಪ್ರದರ್ಶನದ ತಾಲೀಮಿನ ಒಂದು ನೋಟ
–ಪ್ರಜಾವಾಣಿ ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್.

2023 ಏರೋ ಇಂಡಿಯಾ

ದಟ್ಟಣೆಯಲ್ಲಿ ಸಿಲುಕಿ ಪರದಾಟ

ವೈಮಾನಿಕ ಪ್ರದರ್ಶನ ಅಧಿಕೃತವಾಗಿ ಆರಂಭವಾಗುವ ಮುನ್ನವೇ ಶನಿವಾರ ಪೂರ್ಣ ಪ್ರಮಾಣದ ತಾಲೀಮು ನೋಡಲು ಜನಸಾಗರವೇ ನೆರೆದಿತ್ತು. ಇದರಿಂದಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ವಿಪರೀತ ಸಂಚಾರ ದಟ್ಟಣೆ ಉಂಟಾಗಿ ವಾಹನ ಸವಾರರು ಪರದಾಡಿದರು.

ಬೆಳಿಗ್ಗೆ 7ರಿಂದಲೇ ಯಲಹಂಕ ವಾಯುನೆಲೆ ಕಡೆಗೆ ಜನ ದಂಡು ದಂಡಾಗಿ ಹೊರಟಿದ್ದರು. ಶಾಲಾ ವಾಹನಗಳು, ಕಾರುಗಳು ಮೂರ್ನಾಲ್ಕು ಪಟ್ಟು ಜಾಸ್ತಿಯಾಗಿದ್ದವು. ವಾಹನಗಳನ್ನು ಪರಿಶೀಲನೆ ನಡೆಸಿ ಗೇಟಿನೊಳಗೆ ಪ್ರವೇಶ ನೀಡುತ್ತಿದ್ದರಿಂದ ರಸ್ತೆಯಲ್ಲಿ ಸಾಲುಗಟ್ಟಿ ನಿಲ್ಲಬೇಕಾಯಿತು. ಇದರಿಂದಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಸಾಗುವ ವಾಹನಗಳೂ ದಟ್ಟಣೆಯಲ್ಲಿ ಸಿಲುಕಿಕೊಂಡವು.

ಗಂಟೆಗಟ್ಟಲೆ ದಟ್ಟಣೆ ಕರಗಲಿಲ್ಲ. ವಿಮಾನ ಪ್ರಯಾಣಿಕರು ಸಮಯಕ್ಕೆ ಸರಿಯಾಗಿ ಸಾಗಲು ಸಾಧ್ಯವಾಗದೆ ಪರಿತಪಿಸಿದರು.

ಪ್ರಧಾನಿಯಿಂದ ನಾಳೆ ಉದ್ಘಾಟನೆ

ಪ್ರಧಾನಿ ನರೇಂದ್ರ ಮೋದಿ ಅವರು ಈ ಸಾಲಿನ ವೈಮಾನಿಕ ಪ್ರದರ್ಶನವನ್ನು ಸೋಮವಾರ ಉದ್ಘಾಟಿಸುವರು.

ಭಾನುವಾರ ಸಂಜೆ 7.40ಕ್ಕೆ ನಗರಕ್ಕೆ ಬರಲಿರುವ ಅವರು, ರಾಜಭವನದಲ್ಲಿ ತಂಗಲಿದ್ದಾರೆ. ಸೋಮವಾರ ಬೆಳಿಗ್ಗೆ ರಾಜಭವನದಿಂದ ಹೆಲಿಕಾಪ್ಟರ್ ಮೂಲಕ ಯಲಹಂಕ ವಾಯುನೆಲೆಗೆ ತೆರಳುವರು. 9.30ರಿಂದ 11.30ರವರೆಗೆ ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ವೈಮಾನಿಕ ಪ್ರದರ್ಶನ ವೀಕ್ಷಿಸುವರು. 11.45ಕ್ಕೆ ಅಲ್ಲಿಂದಲೇ ವಾಯುಪಡೆ ವಿಮಾನದಲ್ಲಿ ತ್ರಿಪುರಾಕ್ಕೆ ತೆರಳುವರು.

ಏರೋ ಇಂಡಿಯಾ: ಮೇಲ್ಸೇತುವೆ ಸಂಚಾರ ಬಂದ್

ಬೆಂಗಳೂರು: ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ಉದ್ಘಾಟನೆ ಕಾರ್ಯಕ್ರಮಕ್ಕಾಗಿ ಬಳ್ಳಾರಿ ರಸ್ತೆಯಲ್ಲಿರುವ ಎಲಿವೇಟೆಡ್ ಮೇಲ್ಸೇತುವೆಯಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಸಂಚಾರ ಪೊಲೀಸರು, 'ಫೆ. 13ರಂದು ಬೆಳಿಗ್ಗೆ 8 ಗಂಟೆಯಿಂದ 11.30 ಗಂಟೆಯವರೆಗೆ ಎಸ್ಟೀಮ್ ಮಾಲ್‌ನಿಂದ ಯಲಹಂಕವರೆಗಿನ ಮೇಲ್ಸೇತುವೆಯಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ' ಎಂದಿದ್ದಾರೆ.

'ಪ್ರಧಾನ ಮಂತ್ರಿ ಹಾಗೂ ರಾಷ್ಟ್ರ–ಅಂತರರಾಷ್ಟ್ರೀಯ ಗಣ್ಯರು ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅವರೆಲ್ಲರ ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಈ ತೀರ್ಮಾನ ಕೈಗೊಳ್ಳಲಾಗಿದೆ. ಮೇಲ್ಸೇತುವೆಯಲ್ಲಿ ಸಂಚರಿಸುವ ವಾಹನಗಳು, ಹೆಣ್ಣೂರು ವೃತ್ತದಿಂದ ಪರ್ಯಾಯ ರಸ್ತೆ ಮೂಲಕ ವಿಮಾನ ನಿಲ್ದಾಣದತ್ತ ಹೋಗಬಹುದು' ಎಂದು ತಿಳಿಸಿದ್ದಾರೆ.

'ಏರೋ ಇಂಡಿಯಾ ಪ್ರದರ್ಶನದ ಪಾಸ್ ಇರುವ ವಾಹನಗಳು ಯಥಾಪ್ರಕಾರ ಮೇಲ್ಸೇತುವೆಯಲ್ಲಿ ಸಂಚರಿಸಲು ಅವಕಾಶವಿದೆ' ಎಂದೂ ಹೇಳಿದ್ದಾರೆ.

ಬಿಎಂಟಿಸಿ ಹೆಚ್ಚುವರಿ ಬಸ್ ಸೇವೆ

ವೈಮಾನಿಕ ಪ್ರದರ್ಶನ ವೀಕ್ಷಣೆಗೆ ಬರುವ ಜನರ ಅನುಕೂಲಕ್ಕಾಗಿ ಫೆ.16 ಮತ್ತು 17ರಂದು ಬಿಎಂಟಿಸಿ ಹೆಚ್ಚುವರಿ ಬಸ್‌ಗಳನ್ನು ಕಾರ್ಯಾಚರಣೆ ಮಾಡಲು ನಿರ್ಧರಿಸಿದೆ.

ಫೆ.13ರಿಂದಲೇ ವೈಮಾನಿಕ ಪ್ರದರ್ಶನ ಆರಂಭವಾಗಲಿದೆ. ಆದರೆ, ಸಾರ್ವಜನಿಕರ ವೀಕ್ಷಣೆಗೆ ಕೊನೆಯ ಎರಡು ದಿನ ಮಾತ್ರ ಅವಕಾಶ ಇರುವುದರಿಂದ ಅಂದು ಬನಶಂಕರಿ, ಕೆಂಗೇರಿ, ಪೀಣ್ಯ, ಸೆಂಟ್ರಲ್ ಸಿಲ್ಕ್ ಬೋರ್ಡ್, ಟಿನ್ ಫ್ಯಾಕ್ಟರಿ, ಯಶವಂತಪುರ, ಹೆಬ್ಬಾಳ, ಯಲಹಂಕ, ಕೆಂಪೇಗೌಡ ಬಸ್ ನಿಲ್ದಾಣದಿಂದ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ ಎಂದು ಬಿಎಂಟಿಸಿ ತಿಳಿಸಿದೆ.


ವೈಮಾನಿಕ ಪ್ರದರ್ಶನದ ತಾಲೀಮು ನೋಡಲು ಕಿಕ್ಕಿರಿದು ಸೇರಿದ್ದ ಜನ

ಸುದ್ದಿ 2 ನಿಮಿಷ

ವೇತನ ಹೆಚ್ಚಳಕ್ಕೆ ಆಯುಷ್ ವೈದ್ಯರ ಆಗ್ರಹ

ಬೆಂಗಳೂರು: ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವಂತೆ ಆರೋಗ್ಯ ಇಲಾಖೆ ಅಡಿ ಗುತ್ತಿಗೆ ಆಧಾರ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

'ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ಹಾಗೂ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ (ಆರ್‌ಬಿಎಸ್‌ಕೆ) ಅಡಿ 1,300 ಆಯುಷ್ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. 10 ವರ್ಷಕ್ಕೂ ಹೆಚ್ಚು ಅವಧಿ ಸೇವೆ ಸಲ್ಲಿಸಿದ ಆಯುಷ್ ವೈದ್ಯರು ಕೇವಲ ₹ 37 ಸಾವಿರ ವೇತನ ಪಡೆಯುತ್ತಿದ್ದಾರೆ. ಇತ್ತೀಚೆಗೆ ಗ್ರಾಮೀಣ ಸೇವೆಯ ನೆಪದಲ್ಲಿ ಅದೇ ಸ್ಥಳಕ್ಕೆ ನಿಯೋಜಿಸಿರುವ ಎಂಬಿಬಿಎಸ್ ವೈದ್ಯರಿಗೆ ₹ 60 ಸಾವಿರ ವೇತನ ನೀಡಲಾಗುತ್ತಿದೆ' ಎಂದು ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್‌ನ ರಾಜ್ಯ ವಿದ್ಯಾರ್ಥಿ ವಿಭಾಗದ ಸಂಚಾಲಕ ಡಾ. ಕಿರಣ್ ಕುಮಾರ್ ಕೆ ತಿಳಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಆಯುರ್ವೇದಕ್ಕೆ ಅಂತರರಾಷ್ಟ್ರೀಯ ಮಾನ್ಯತೆ ತಂದುಕೊಡಲು ಪ್ರಯತ್ನಿಸುತ್ತಿದ್ದರೆ, ರಾಜ್ಯ ಸರ್ಕಾರ ಆಯುಷ್ ವೈದ್ಯರನ್ನು ನಿರ್ಲಕ್ಷ್ಯ ಮಾಡುತ್ತಿದೆ. ಆಯುರ್ವೇದ ಮತ್ತು ಯೋಗದ ಹೆಸರಿನಲ್ಲಿ ಪ್ರಚಾರಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿರುವ ಸರ್ಕಾರ, ಅದೇ ಪದ್ಧತಿಯಲ್ಲಿ ಚಿಕಿತ್ಸೆ ನೀಡುವ ಆಯುಷ್ ವೈದ್ಯರಿಗೆ ಸೂಕ್ತ ವೇತನ ನೀಡದೆ ಕಡೆಗಣಿಸುತ್ತಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡದಿದ್ದರೆ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಬೆಂಗಳೂರಿನಲ್ಲಿ ಎರಡನೇ ಮಳಿಗೆ ಆರಂಭಿಸಿದ ಗಾರ್ಮಿನ್ ಇಂಡಿಯಾ

ಬೆಂಗಳೂರು: ಗಾರ್ಮಿನ್ ಇಂಡಿಯಾ ಕಂಪನಿಯು ಬೆಂಗಳೂರಿನ ಇಂದಿರಾನಗರದ 100 ಅಡಿ ರಸ್ತೆ ಬಳಿ ತನ್ನ ಎರಡನೇ ರಿಟೇಲ್ ಮಳಿಗೆಯನ್ನು ಆರಂಭಿಸಿದೆ. ಇದರಿಂದಾಗಿ ಕಂಪನಿಯು ಭಾರತದಲ್ಲಿ ಒಟ್ಟು ನಾಲ್ಕು ಮಳಿಗೆಗಳನ್ನು ಹೊಂದಿದಂತಾಗಿದೆ.

ಈ ಮಳಿಗೆಯಲ್ಲಿ ಗಾರ್ಮಿನ್ ಫಿಟ್‌ನೆಸ್, ಹೊರಾಂಗಣ ಕ್ರೀಡೆಗಳು ಮತ್ತು ವೆಲ್‌ನೆಸ್ ವಿಭಾಗಗಳ ಸ್ಮಾರ್ಟ್‌ವಾಚ್ ಶ್ರೇಣಿಗಳು ಸಿಗಲಿವೆ. ಗ್ರಾಹಕರಿಗೆ ಉತ್ಪನ್ನಗಳ ವೈಶಿಷ್ಟ್ಯಗಳನ್ನು ತಿಳಿಸಲು ಮತ್ತು ಖರೀದಿ ಆಯ್ಕೆಗಾಗಿ ಪರಿಣತರು ಮಳಿಗೆಯಲ್ಲಿ ಸಲಹೆ ನೀಡಲಿದ್ದಾರೆ ಎಂದು ಕಂಪನಿಯು ತಿಳಿಸಿದೆ.

ಗ್ರಾಹಕರಿಗೆ ಗಾರ್ಮಿನ್ ಉತ್ಪನ್ನಗಳು ಮತ್ತು ಸೇವೆಗಳನ್ನು ಸುಲಭವಾಗಿ ಪಡೆಯಲು ಮತ್ತು ಖರೀದಿಸಲು ಈ ಮಳಿಗೆಯು ಅನುಕೂಲ ಮಾಡಿಕೊಡಲಿದೆ. ಫಿಟ್‌ನೆಸ್ ಪ್ರಿಯರಿಗೆ ಉತ್ತಮ ಖರೀದಿ ಅನುಭವ ನೀಡುವ ವಿಶ್ವಾಸ ಇದೆ ಎಂದು ಗಾರ್ಮಿನ್ ಇಂಡಿಯಾದ ಮುಖ್ಯಸ್ಥ ಏಸುದಾಸ್ ಪಿಳ್ಳೈ ಹೇಳಿದರು.

ಶೇ 50 ರಿಯಾಯಿತಿ: ₹102 ಕೋಟಿ ದಂಡ ಸಂಗ್ರಹ

ಪ್ರಜಾವಾಣಿ ಚಿತ್ರ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿ ಮೇಲೆ ಘೋಷಿಸಿದ್ದ ಶೇ 50ರಷ್ಟು ರಿಯಾಯಿತಿ ಸೌಲಭ್ಯದ ಅವಧಿ ಶನಿವಾರ ಮುಕ್ತಾಯವಾಗಿದ್ದು, 9 ದಿನಗಳಲ್ಲಿ ₹ 102 ಕೋಟಿ ದಂಡ ಸಂಗ್ರಹವಾಗಿದೆ.

ಕಾನೂನು ಸೇವೆಗಳ ಪ್ರಾಧಿಕಾರದ ಪ್ರಸ್ತಾವಕ್ಕೆ ಒಪ್ಪಿದ್ದ ರಾಜ್ಯ ಸರ್ಕಾರ, ರಿಯಾಯಿತಿ ಘೋಷಣೆ ಮಾಡಿತ್ತು. ಫೆ. 3ರಿಂದ ಫೆ. 11ರವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ದಂಡ ಪಾವತಿಸಿದ್ದಾರೆ. 35.60 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿವೆ.

ರಿಯಾಯಿತಿ ಸೌಲಭ್ಯದ ಕೊನೆ ದಿನವಾಗಿದ್ದ ಶನಿವಾರವೂ ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ), ಸಂಚಾರ ಪೊಲೀಸ್ ಠಾಣೆಗಳು ಹಾಗೂ ಕರ್ನಾಟಕ ಒನ್- ಬೆಂಗಳೂರು ಒನ್ ಕೇಂದ್ರಗಳಲ್ಲಿ ಜನರು ಸರದಿಯಲ್ಲಿ ನಿಂತು ದಂಡ ಕಟ್ಟಿದರು.

ಆನ್‌ಲೈನ್ ಮೂಲಕವೂ ದಂಡ ಪಾವತಿಗೆ ಅವಕಾಶ ಕಲ್ಪಿಸಲಾಗಿತ್ತು. ಪೇಟಿಎಂ ಆ್ಯಪ್‌ನಲ್ಲಿ ಹೆಚ್ಚು ಜನರು ದಂಡ ಪಾವತಿಸಿದ್ದಾರೆ.

ದಿನ ವಿಸ್ತರಣೆಗೆ ಕೋರಿಕೆ: 'ರಿಯಾಯಿತಿ ಸೌಲಭ್ಯದಿಂದಾಗಿ ದಂಡ ಪಾವತಿಸುವವರ ಸಂಖ್ಯೆ ಏರಿಕೆ ಆಗಿದೆ. ಜನರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಿಯಾಯಿತಿ ಸೌಲಭ್ಯದ ದಿನಾಂಕ ವಿಸ್ತರಣೆ ಮಾಡಲು ಪರಿಶೀಲಿಸಿ' ಎಂದು ಸಂಚಾರ ಪೊಲೀಸರು, ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಕೋರಿಕೆ ಸಲ್ಲಿಸಿದ್ದಾರೆ.

ದಂಡ ಪಾವತಿಸಿದ ಮಾದರಿ	ಪ್ರಕರಣಗಳು	ಸಂಗ್ರಹಿಸಿದ ದಂಡ
ಪೊಲೀಸ್ ಬಳಿಯ ಉಪಕರಣ	15.53 ಲಕ್ಷ	₹43.80 ಕೋಟಿ
ಪೇಟಿಎಂ ಆ್ಯಪ್	1.49 ಕೋಟಿ	₹ 45.17 ಕೋಟಿ
ಸಂಚಾರ ನಿರ್ವಹಣಾ ಕೇಂದ್ರ	6,240	₹16.25 ಲಕ್ಷ
ಬೆಂಗಳೂರು ಒನ್ ಕೇಂದ್ರ	5 ಲಕ್ಷ	₹ 12.87 ಕೋಟಿ

ರಾಖಿ ಸಾವಂತ್ ಪತಿ ವಿರುದ್ಧ ಮೈಸೂರಿನಲ್ಲಿ ಎಫ್‌ಐಆರ್

ಮೈಸೂರು: ಬಾಲಿವುಡ್ ನಟಿ ರಾಖಿ ಸಾವಂತ್ ಮೇಲಿನ ವರದಕ್ಷಿಣೆ ಕಿರುಕುಳ ಪ್ರಕರಣದ ಆರೋಪಿ ಆದಿಲ್ ಖಾನ್ ದುರಾನಿ ವಿರುದ್ಧ, ವಿದ್ಯಾರ್ಥಿನಿಯೊಬ್ಬರ ಮೇಲಿನ ಅತ್ಯಾಚಾರ ಆರೋಪ ಪ್ರಕರಣ ಇಲ್ಲಿನ ವಿ.ವಿ.ಪುರಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಐದು ವರ್ಷಗಳ ಹಿಂದೆ ಮೈಸೂರಿನಲ್ಲಿ ಫಾರ್ಮಸಿ ಓದಲು ಬಂದಿದ್ದ ಇರಾನ್ ದೇಶದ ವಿದ್ಯಾರ್ಥಿನಿಯನ್ನು ಆದಿಲ್ ಖಾನ್ ಪರಿಚಯ ಮಾಡಿಕೊಂಡಿದ್ದ. ಆತ ಮದುವೆ ಆಗುವುದಾಗಿ ನಂಬಿಸಿ ವಿ.ವಿ.ಪುರಂ ವಸತಿ ಗೃಹವೊಂದರಲ್ಲಿ ಅತ್ಯಾಚಾರ ಎಸಗಿದ್ದ. ಬಳಿಕ ಖಾನ್ ಮಾತು ತಪ್ಪಿದ್ದಾನೆ. ಮದುವೆ ಮಾಡಿಕೊಳ್ಳುವಂತೆ ಒತ್ತಾಯಿಸಿದಾಗ ಬೆದರಿಕೆಯೊಡ್ಡಿದ್ದಾನೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಆದಿಲ್ ಖಾನ್ ವಿರುದ್ಧ ಅತ್ಯಾಚಾರ, ವಂಚನೆ, ಬೆದರಿಕೆ ಹಾಗೂ ಬ್ಲಾಕ್ ಮೇಲ್ ಮಾಡಿದ ಆರೋಪ ದಾಖಲಾಗಿದೆ.

ನಗರದಲ್ಲಿ ಇಂದು

'ಬೆಂದಕಾಳೂರು ವರ್ಸಸ್ ಬೆಂಗಳೂರು' ನಾಟಕ ಪ್ರದರ್ಶನ: ಅತಿಥಿಗಳು: ಭಾ.ಮ. ಹರೀಶ್, ಪೂರ್ಣಿಮಾ ಪ್ರಕಾಶ್, ಕುಶಾಲ್ ಎಲ್.ಸಿ, ಶಿಲ್ಪ ಶ್ರೀನಿವಾಸ್, ಆಯೋಜನೆ: ಉಲ್ಲಾಸ್ ಸ್ಕೂಲ್ ಆಫ್ ಸಿನಿಮಾಸ್, ಸ್ಥಳ: ಬಾಲಭವನದ ಆವರಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 7ರಿಂದ

ಈಶ್ವರಮ್ಮ ಪುರಸ್ಕಾರ ಸಮಾರಂಭ: ಅತಿಥಿ: ಹಿಮವಾಹಿನಿ ರತ್ನಾಕರ್, ಪ್ರಶಸ್ತಿ ಪ್ರದಾನ: ತೇಜಸ್ವಿನಿ ಅನಂತ್ ಕುಮಾರ್, ಪ್ರಶಸ್ತಿ ಪುರಸ್ಕೃತರು: ವಾಣಿಶ್ರೀ ವಿ. ಪುರೋಹಿತ್, ಪ್ರಭಾವತಮ್ಮ ಕೆ.ಆರ್., ರತ್ನಮ್ಮ ಎಸ್., ಆಯೋಜನೆ: ಶ್ರೀ ಸತ್ಯ ಸಾಯಿ ಸೇವಾ ಸಂಘದ ಮಹಿಳಾ ವಿಭಾಗ, ಸ್ಥಳ: ಬೃಂದಾವನ ಆಶ್ರಮ, ಕಾಡುಗೋಡಿ, ಬೆಳಿಗ್ಗೆ 9

ದಯಾನಂದ ಅವರ 'ಬುದ್ಧನ ಕಿವಿ' ಪುಸ್ತಕ ಬಿಡುಗಡೆ: ಆಯೋಜನೆ: ಅಲೆ ಕ್ರಿಯೇಟಿವ್ಸ್, ಸ್ಥಳ: ಕಬ್ಬನ್ ಉದ್ಯಾನ, ಬೆಳಿಗ್ಗೆ 10


ಮಲ್ಲೇಶ್ವರ ಸಮುದಾಯ ಸಂಭ್ರಮ: ಉದ್ಘಾಟನೆ: ವಿಮಲಾ ರಂಗಚಾರ್, ಜಯರಾಮ್ ಎಚ್.ಆರ್., ಪಿಟೀಲು ವಾದನ: ರಾಧಿಕಾ ವೆಂಕಟರಾಮನ್, ತಬಲಾ: ರಘು ರಾಮಕೃಷ್ಣನ್, ಆಯೋಜನೆ: ಮಲ್ಲೇಶ್ವರ ಸಮುದಾಯ ಸಂಭ್ರಮ, ಸ್ಥಳ: ಕೆನರಾ ಯೂನಿಯನ್, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

'ಎಲ್.ಎನ್. ಸಿಂಹ' ಸ್ಮಾರಕ ದತ್ತಿ ಕರ್ನಾಟಕ್ ಪಿಟೀಲು ವಾದನ: ಎಸ್. ಶಶಿಧರ್, ಜಯಶ್ರೀ ಬಾಲಾಜಿ, ಬಿ.ಜೆ. ಪ್ರಜ್ವಲ್, ಮೃದಂಗ: ಪಿ. ಶ್ರೀನಿವಾಸಮೂರ್ತಿ, ಘಟಂ: ಎನ್. ಎಸ್. ಕೃಷ್ಣಪ್ರಸಾದ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30


ಎಸ್. ಶಶಿಧರ್

ಕೆ.ಎಸ್.ನ ಸ್ಮರಣೆ ಪ್ರೇಮ ಕವಿಗೋಷ್ಠಿ–ಗೀತಗಾಯನ–ಪ್ರಶಸ್ತಿ ಪ್ರದಾನ: ಶರಣಪ್ಪ ಗಬ್ಬೂರು, ಅಧ್ಯಕ್ಷತೆ: ವಿ. ರೇಣುಕಾಪ್ರಸನ್ನ, ಬಿ. ಶೃಂಗೇಶ್ವರ್, ಉಪಸ್ಥಿತಿ: ಎಂ. ಖಾಸಿಂ ಮಲ್ಲಗೆಮಡುವು, ವೈ.ಎಸ್. ಕೃಷ್ಣಮೂರ್ತಿ, ಕುವರ ಯಲ್ಲಪ್ಪ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಯುವಜನ ಸಮಾವೇಶ, ಗೊ.ರು. ಚನ್ನಬಸಪ್ಪ ಅವರು ಸಂಪಾದಿಸಿದ 'ನಾವು ನಡೆದ ಹಾದಿ' ಗ್ರಂಥ ಬಿಡುಗಡೆ: ಉದ್ಘಾಟನೆ: ಬಸವರಾಜ ಹೊರಟ್ಟಿ, ಗ್ರಂಥ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಎಲ್. ರೇವಣ್ಣಸಿದ್ಧಯ್ಯ, ಗ್ರಂಥ ಪರಿಚಯ: ಗೊ.ರು. ಚನ್ನಬಸಪ್ಪ, ಆಯೋಜನೆ: ಗೊ.ರು.ಚ. ಗ್ರಾಮ ವಿಕಾಸ, ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸಂಸ್ಥೆ, ಸ್ಥಳ: ಧರ್ಮಸಂಸ್ಥೆಯ ಶತಮಾನೋತ್ಸವ ಸ್ಮಾರಕ ಭವನ, ಕೇಂದ್ರ ರೈಲ್ವೆ ನಿಲ್ದಾಣ ಬಳಿ ಗುಬ್ಬಿ ತೋಟದಪ್ಪ ರಸ್ತೆ, ಬೆಳಿಗ್ಗೆ 11


ಎಸ್.ಜಿ. ಸಿದ್ಧರಾಮಯ್ಯ

ಸಿ.ಆರ್. ಚಂದ್ರಶೇಖರ್ ಅವರ 'ನಾನು ಕಂಡ ನಾಡಿನ ನಕ್ಷತ್ರಗಳು' ಪುಸ್ತಕ ಬಿಡುಗಡೆ: ಅತಿಥಿಗಳು: ಪ್ರತಿಮಾ ಮೂರ್ತಿ, ವೈ.ವಿ. ಗುಂಡೂರಾವ್, ನಾ. ಸೋಮೇಶ್ವರ, ಆಯೋಜನೆ: ವಿಕ್ರಂ ಪ್ರಕಾಶನ, ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30


ಪ್ರತಿಮಾ ಮೂರ್ತಿ

ಸುಮನ ಸುಪಥ–4: ವಿಷಯ: 'ಹದಿಹರಿಯದ ತಲ್ಲಣಗಳು'–ಯಲಹಂಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ಸಂವಾದ: ಉದ್ಘಾಟನೆ: ಡಾ. ಗೋಪಿನಾಥ್, ಪ್ರಸ್ತಾವನಾ ನುಡಿ: ಡಿ. ಯಶೋದಾ, ಭಾಷಣ: ಶಾಂತಜಾ ಎನ್. ಸ್ವಾಮಿ, ಉಪಸ್ಥಿತಿ: ರಮೇಶ್ ಬಾಳಿಕಾಯಿ, ಸುವರ್ಣಾ ಹೋಳಿ, ಆಯೋಜನೆ: ಸುಮನ ಆಪ್ತ ಆವರಣ, ಸ್ಥಳ: ಅಪ್ರಮೇಯ, ಜಯಮುನಿನಗರ, ನಿಟ್ಟೆ ಮೀನಾಕ್ಷಿ ಕಾಲೇಜು ರಸ್ತೆ, ಯಲಹಂಕ, ಬೆಳಿಗ್ಗೆ 11

ಬಿ.ಎಸ್.ಕೆ. ಜೀವಾಶ್ರಯ ರಕ್ತ ಕೇಂದ್ರದ ಉದ್ಘಾಟನಾ ಸಮಾರಂಭ: ಆರ್. ಅಶೋಕ, ಅತಿಥಿಗಳು: ಟಿ.ಎ. ಶರವಣ, ಸಿ.ಪಿ. ಯೋಗೇಶ್ವರ್, ಕೃಷ್ಣಕಾಂತ್, ಗೌತಮ್ ಗೌಡ, ಆಯೋಜನೆ: ಬಿಎಸ್‌ಕೆ ಜೀವಾಶ್ರಯ ರಕ್ತ ಕೇಂದ್ರ, ಪದ್ಮನಾಭ ನಗರ, ಬೆಳಿಗ್ಗೆ 11

'ತುಳುನಾಡ್ದ ಸಿರಿ' ಪ್ರಶಸ್ತಿ ಪ್ರದಾನ, 'ಜೋಕುಲೆ ಉಜ್ವಾಲ್' ತುಳು ಪದಮಾಲೆ ಪುಸ್ತಕ ಬಿಡುಗಡೆ: ಉದ್ಘಾಟನೆ: ಗುರುದೇವಾನಂದ ಸ್ವಾಮೀಜಿ, ಅತಿಥಿಗಳು: ವೀರಪ್ಪ ಮೊಯ್ಲಿ, ಸದಾನಂದ ಗೌಡ, ವಿ. ಸುನಿಲ್ ಕುಮಾರ್, ಕೆ. ಗೋಪಾಲಯ್ಯ, ಯು.ಟಿ. ಖಾದರ್, ಆಯೋಜನೆ: ಬೆಂಗಳೂರಿನ ತುಳುವೆರೆ ಚಾವಡಿಯ ಬೆಳ್ಳಿ ಹಬ್ಬ ಸಂಭ್ರಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 3

'ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ' ಕುರಿತು ಸಂವಾದ: ಸಂವಾದಕರು: ಶ್ರೀನಿವಾಸ ಕೊಡಾಲಿ, ಆಯೋಜನೆ: ಕರ್ನಾಟಕ ಸ್ವತಂತ್ರ ತಂತ್ರಾಂಶ ಆಂದೋಲನ, ಸ್ಥಳ: ವೈಡಬ್ಲ್ಯೂಸಿಎ ಸಭಾಂಗಣ, ಕೋರಮಂಗಲ ಪೊಲೀಸ್ ಠಾಣೆ ಹತ್ತಿರ, ಸಂಜೆ 4

'ಧೂಮಕೇತುಗಳು' ಇವುಗಳ ಹುಡುಕಾಟ ಮತ್ತು ಹೆಸರಿಡುವ ಬಗ್ಗೆ: ಆಯೋಜನೆ ಮತ್ತು ಸ್ಥಳ: ಜವಾಹರ್ ಲಾಲ್ ನೆಹರು ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಸಂಜೆ 4

ಸಿ. ಚಂದ್ರಶೇಖರ್ ಅವರ 'ಕಾವೇರಿ ವಿವಾದ' ಪುಸ್ತಕ ಬಿಡುಗಡೆ: ಎಸ್.ಎಂ. ಕೃಷ್ಣ, ಅತಿಥಿಗಳು: ಚಿರಂಜೀವಿ ಸಿಂಗ್, ಶೇಷಚಂದ್ರಿಕಾ, ಜಯಪ್ರಕಾಶ್, ರೊನಾಲ್ಡೋ ಅನಿಲ್ ಫರ್ನಾಂಡಿಸ್, ಉಪಸ್ಥಿತಿ: ಸಿ. ಚಂದ್ರಶೇಖರ್, ಅಭಿರುಚಿ ಗಣೇಶ್, ಆಯೋಜನೆ: ಅಭಿರುಚಿ ಪ್ರಕಾಶನ, ಕಾಡುಮಲ್ಲೇಶ್ವರ ಬಳಗ, ಸ್ಥಳ: ಡಿ. ದೇವರಾಜ ಅರಸು ಸಭಾಂಗಣ, ಕರ್ನಾಟಕ ಚಿತ್ರಕಲಾ ಪರಿಷತ್ತು, ಸಂಜೆ 4.30

ಸಂಗೀತ ಕಾರ್ಯಕ್ರಮ: ಗಾಯನ: ಎಂ.ಎಸ್ ಸಂಜನಾ ರಾವ್, ಮನೋಜವಂ ಆತ್ರೇಯ, ಹಾರ್ಮೋನಿಯಂ: ಗೌರವ್ ಗಡಿಯಾರ್, ತಬಲಾ: ಪ್ರಜ್ವಲ್ ಶರ್ಮಾ, ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಸ್ಥಾನ, ನೋಬೋ ನಗರ, ಬನ್ನೇರುಘಟ್ಟ ರಸ್ತೆ, ಸಂಜೆ 5.30

'ಸಬ್ ಕಾ ಮಾಲಿಕ್ ಏಕ್ ಹೈ ಶಿರಡಿ ಸಾಯಿಬಾಬಾ ಕುರಿತು ಕುಚಿಪುಡಿ ನೃತ್ಯ ರೂಪಕ: ಅತಿಥಿಗಳು: ಎಸ್.ಟಿ. ಸೋಮಶೇಖರ್, ಎಂ. ಕೃಷ್ಣಾರೆಡ್ಡಿ, ಕೆ. ವಿ. ದಯಾನಂದ, ಆರ್. ಪ್ರಮೀಳಾ ನಾಯ್ಡು, ಅಶೋಕ್ ಛಲವಾದಿ, ಜಿ. ಮೋಹನ್ ಕುಮಾರ್, ಆಂಜನೇಯಲು, ಆಯೋಜನೆ: ನೂಪುರ ಫೈನ್ ಆರ್ಟ್ಸ್ ಅಕಾಡೆಮಿ, ಸ್ಥಳ: ಬಯಲು ರಂಗಮಂದಿರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಸ್ವಾತಿ ನಕ್ಷತ್ರದ ವಿಶೇಷ ಕಾರ್ಯಕ್ರಮಗಳು: ಭಜನೆ: ಶ್ರೀರಾಮ ಭಜನಾ ಮಂಡಳಿ, ದೇವರನಾಮಗಳ ಗಾಯನ: ಸುಶ್ರಾವ್ಯ ಆಚಾರ್ಯ, ಆಯೋಜನೆ ಮತ್ತು ಸ್ಥಳ: ಅಭಯ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30



ಉತ್ತಮ ಶಿಕ್ಷಕರಿಗೆ ಸನ್ಮಾನ

ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಶನಿವಾರ ನಗರದ ಶಿಕ್ಷಕರ ಸದನದಲ್ಲಿ ಆಯೋಜಿಸಿದ್ದ ಶೈಕ್ಷಣಿಕ ಸಮಾವೇಶದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ (ಎಡದಿಂದ) ಜಯನಗರದ ರಾಗಿಗುಡ್ಡ ಆಂಜನೇಯ ಸ್ವಾಮಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿ ಕೆ.ವಿ.ಜಯಲಕ್ಷ್ಮಿ, ಸಂಗಮೇಶ್ವರ ಪ್ರಾಥಮಿಕ ಪಾಠಶಾಲೆಯ ಸಹಶಿಕ್ಷಕಿ ವೈ.ಧನಲಕ್ಷ್ಮಿ, ಕೆಂಚೇನಹಳ್ಳಿ ರಾಜೇಶ್ವರಿ ವಿದ್ಯಾಶಾಲೆಯ ವೈ.ಸಿ. ನರಸಿಂಹರಾಜು, ಸುಂಕದಕಟ್ಟೆಯ ಮಲಯಾಚಲ ಮಹದೇಶ್ವರ ವಿದ್ಯಾಸಂಸ್ಥೆಯ ಮುಖ್ಯಶಿಕ್ಷಕ ಪಿ.ಸಿ. ಪ್ರಕಾಶ್, ಸುಬ್ರಹ್ಮಣ್ಯಪುರದ ಎ.ಎಸ್.ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಚಾರುಲತಾ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ ನಿಂತವರು) ಉಮೇಶ್, ದುರ್ಗಯ್ಯ, ಜಿ.ಶಿವರಾಮಯ್ಯ, ರೇವಣ್ಣ, ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೆ. ಹನುಮಂತಪ್ಪ, ಮಹೇಂದ್ರ ಮುನೋತ್ ಜೈನ್, ರಾಜಗೋಪಾಲ್, ಪರಮೇಶ್, ವಿಜಯೇಂದ್ರ ಇದ್ದರು.

ಬೊಮ್ಮನಹಳ್ಳಿ: ಉಳಿದ ಹಳೆ ಸಮಸ್ಯೆಗಳ ನಡುವೆ ಕಾಣುತ್ತಿರುವ ಹೊಸ ಲೆಕ್ಕಾಚಾರ

ಸತೀಶ್ ರೆಡ್ಡಿ ಪ್ರಾಬಲ್ಯಕ್ಕೆ ಕಾಂಗ್ರೆಸ್ ಸಡ್ಡು

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

• ವಿಶಾಖ ಎನ್.

ಬೆಂಗಳೂರು: ಮೂರು ವಿಧಾನಸಭಾ ಚುನಾವಣೆಗಳಲ್ಲೂ ತಮ್ಮ ಮತಗಳನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿರುವ ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಎಂ. ಸತೀಶ್ ರೆಡ್ಡಿ ಅವರ ಪ್ರಾಬಲ್ಯಕ್ಕೆ ಸಡ್ಡು ಹೊಡೆಯಲು ಕಾಂಗ್ರೆಸ್ ಪಾಳಯದಲ್ಲಿ ಚಿಂತನೆ ನಡೆದಿದೆ.

ಗುಜರಾತ್ ಮಾದರಿಯನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸುವ ಆಲೋಚನೆಯ ಭಾಗವಾಗಿ ಸತೀಶ್ ರೆಡ್ಡಿ ಅವರನ್ನು ಬಿಟಿಎಂ ಲೇಔಟ್‌ನಿಂದ ಕಣಕ್ಕೆ ಇಳಿಸಲು ಬಿಜೆಪಿ ನಿರ್ಧರಿಸಿರುವ ಒಳಸುದ್ದಿಯೂ ಇದೆ. ಅದು ಕಿವಿಮೇಲೆ ಬಿದ್ದದ್ದೇ, ಕ್ಷೇತ್ರ ಬಿಟ್ಟುಕೊಡಲು ತಾವು ಸುತರಾಂ ಸಿದ್ಧವಿಲ್ಲ ಎನ್ನುವ ಸಂದೇಶವನ್ನೂ ಸತೀಶ್ ರೆಡ್ಡಿ ನೀಡಿದ್ದಾರೆ.

ಪಕ್ಕದ ಬಿಟಿಎಂ ಬಡಾವಣೆಯಲ್ಲಿ ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ ಅವರದ್ದೇ ಪ್ರಾಬಲ್ಯ. ಅವರು ಹಾಗೂ ಸತೀಶ್ ರೆಡ್ಡಿ ಇಬ್ಬರೂ ಪರಸ್ಪರ ಟೀಕೆ ಮಾಡದೆ ರಾಜಕೀಯ ಮಾಡಿಕೊಂಡು ಬಂದವರು. ಈಗ ಇಬ್ಬರನ್ನೂ ಬಿಟಿಎಂ ಲೇಔಟ್‌ನಲ್ಲಿ ಪರಸ್ಪರ ಮುಖಾಮುಖಿಯಾಗಿಸಿದರೆ? ಈ ಚಿಂತೆ ಸತೀಶ್ ರೆಡ್ಡಿ ಅವರನ್ನು ಕಾಡಿದೆ.

ಕ್ಷೇತ್ರ ಸ್ಥಿತಿ–ಗತಿ

2008ರಲ್ಲಿ ಸೃಷ್ಟಿಯಾದ ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಸತೀಶ್ ರೆಡ್ಡಿ ಗೆಲುವು ಸಾಧಿಸಿದ್ದಷ್ಟೆ ಅಲ್ಲ, ಚುನಾವಣೆಯಿಂದ ಚುನಾವಣೆಗೆ ತಮ್ಮ ಮತ ಗಳಿಕೆಯ ಪ್ರಮಾಣವನ್ನು ಏರಿಸಿಕೊಳ್ಳುತ್ತಾ ಬಂದಿದ್ದಾರೆ. ಕಳೆದ ಚುನಾವಣೆಯಲ್ಲಿ ಚಲಾವಣೆಯಾದ ಮತಗಳಲ್ಲಿ ಅರ್ಧಕ್ಕೂ ಹೆಚ್ಚು ಅವರ ಬುಟ್ಟಿಗೆ ಬಿದ್ದಿದ್ದವು.


ಬೊಮ್ಮನಹಳ್ಳಿಯಿಂದ ಬೇಗೂರು ರಸ್ತೆವರೆಗೆ ವಿಸ್ತರಣೆ ಕಾಮಗಾರಿ ಪ್ರತಿ ಸಲದ ಚುನಾವಣೆಯಲ್ಲಿ ಕೇಳಿಬರುವ ಆಶ್ವಾಸನೆ. ಅದು ಇದುವರೆಗೂ ಈಡೇರದೆ ಇರಲು ಭೂಸ್ವಾಧೀನ ಪ್ರಕ್ರಿಯೆಯ ಗೋಜಲುಗಳನ್ನೇ ಅಧಿಕಾರಿಗಳು ಕಾರಣವಾಗಿ ನೀಡುತ್ತಿದ್ದಾರೆ. ಎಚ್‌ಎಸ್‌ಆರ್ ಲೇಔಟ್ ಹೊರತುಪಡಿಸಿದರೆ ಮಿಕ್ಕ ಸ್ಥಳಗಳಲ್ಲಿ ಹೇಳಿಕೊಳ್ಳುವಂಥ ಒಂದು ಉದ್ಯಾನವಾಗಲೀ, ಆಟದ ಮೈದಾನವಾಗಲೀ ಇಲ್ಲ. ಜೋರು ಮಳೆ ಬಂದರೆ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಕೆಲವು ಮನೆಗಳು ಜಲಾವೃತವಾಗುವುದು ಇನ್ನೂ ತಪ್ಪಿಲ್ಲ. ರಾಜಕಾಲುವೆ ಒತ್ತುವರಿ, ಒಂದೇ ನಿವೇಶನವನ್ನು ಕೆಲವರಿಗೆ ನೋಂದಣಿ ಮಾಡಿಕೊಡುವಂತಹ ಭೂದಂಧೆಕೋರತನಕ್ಕೆ ಇಲ್ಲಿ ಕಡಿವಾಣ ಬಿದ್ದಿಲ್ಲ.

ಭೂದಾಖಲೆಗಳ ಡಿಜಟಲೀಕರಣವಾದಾಗ, ಇಲ್ಲಿನ ಬಹುತೇಕ ಭೂದಾಖಲೆಗಳ ಎಂ.ಆರ್. ಪುಸ್ತಕಗಳನ್ನೇ ಸುಟ್ಟುಹಾಕಿದ್ದರೆಂಬ ಆರೋಪ ಕೇಳಿಬಂದಿತ್ತು. ಈಗಲೂ ಡಿಜಟಲೀಕರಣ ಆಗಿಲ್ಲ. ಗುಂಡಿ ಮೂಡಿಸಿಕೊಂಡ ರಸ್ತೆಗಳು ಅಣಕಿಸುವುದು, ಬೇಸಿಗೆಯಲ್ಲಿ ಒಂದು ಒಂದೂವರೆ ಸಾವಿರ ರೂಪಾಯಿ ತೆತ್ತು ಟ್ಯಾಂಕರ್ ನೀರು ಹೊಡೆಸಿಕೊಳ್ಳುವುದು ಸಮಸ್ಯೆಗಳು ಉಸಿರಾಡುತ್ತಿರುವುದಕ್ಕೆ ಸಾಕ್ಷಿ.

ಸತೀಶ್ ರೆಡ್ಡಿ ಇಲ್ಲಿ ಬಿಜೆಪಿಯ ಯಾರನ್ನೂ ಬೆಳೆಯಲು ಬಿಟ್ಟಿಲ್ಲ. ಹಿಂದೆ ಉಪ ಮೇಯರ್ ಆಗಿದ್ದ ರಾಮ್‌ಮೋಹನ್‌ರಾಜು ಬೆಳೆಯುವ ಲಕ್ಷಣ ತೋರಿದ್ದರೂ, ಅದಕ್ಕೆ ಶಾಸಕರು ಅವಕಾಶ ಕೊಡಲಿಲ್ಲ ಎಂದು ಕಾರ್ಯಕರ್ತರಲ್ಲೇ ಕೆಲವರು ದೂರುತ್ತಾರೆ. ಕಾಂಗ್ರೆಸ್‌ನಿಂದ ತಮಗೇ ಟಿಕೆಟ್ ಸಿಗುವುದು ಖಚಿತ ಎನ್ನುವಂತೆ ಉಮಾಪತಿ ಶ್ರೀನಿವಾಸ ಗೌಡ ಓಡಾಡುತ್ತಿದ್ದಾರೆ. ವಾಸುದೇವ ರೆಡ್ಡಿ ಟಿ., ಸಿ.ನಾಗಭೂಷಣ, ಕವಿತಾ ರೆಡ್ಡಿ, ಕೆ. ನಾರಾಯಣ ರಾಜು ಕೂಡ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು. ಜೆಡಿಎಸ್‌ನಿಂದ ನಾರಾಯಣರಾಜು ಎನ್ನುವವರು ಟಿಕೆಟ್ ನಿರೀಕ್ಷಿಸಿದ್ದಾರೆ. ಎಚ್‌ಎಸ್‌ಆರ್ ಲೇಔಟ್‌ನ ಆಟದ ಮೈದಾನವನ್ನು ಕ್ರೀಡಾಂಗಣವಾಗಿಸಲು ಹೊರಟಾಗ ಎದುರಾಗಿದ್ದ ಪ್ರತಿರೋಧದ ಕಿಡಿ ಇನ್ನೂ ಹಾಗೇ ಇದೆ. ಆಡಳಿತ ವಿರೋಧಿ ಅಲೆ ಸತೀಶ್ ರೆಡ್ಡಿ ಅವರಿಗೆ ಯಾವ ಪರಿಯ ಸವಾಲು ಒಡ್ಡುವುದೋ ನೋಡಬೇಕು.

ಬೊಮ್ಮನಹಳ್ಳಿ





ಸತೀಶ್ ರೆಡ್ಡಿ
ಹಾಲಿ ಶಾಸಕ (ಬಿಜೆಪಿ)

ಹಾಲಿ ಮತದಾರರ ವಿವರ

2,32,487 ಪುರುಷರು
2,00,194 ಮಹಿಳೆಯರು
71 ತೃತೀಯ ಲಿಂಗಿಗಳು
4,32,752 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	1,11,863	86,552	62,993
ಕಾಂಗ್ರೆಸ್	64,701	60,700	49,353
ಜೆಡಿಎಸ್	9,379	10,621	6,313

ಚುನಾವಣೆ ರೂಪುರೇಷೆ: ಆಯೋಗ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ರೂಪುರೇಷೆ ಸಿದ್ಧಪಡಿಸುತ್ತಿರುವ ಚುನಾವಣಾ ಆಯೋಗ, ರಾಜ್ಯದ ವಲಯವಾರು ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳ ಸಭೆ ನಡೆಸುತ್ತಿದೆ.

ಮೈಸೂರು, ಕಲಬುರಗಿಯಲ್ಲಿ ಒಂದು ಸುತ್ತಿನ ಸಭೆ ನಡೆಸಿರುವ ಆಯೋಗದ ಅಧಿಕಾರಿಗಳು, ಚುನಾವಣೆ ಸಿದ್ಧತೆ ಕೆಲಸ ಆರಂಭಿಸುವಂತೆ ಜಿಲ್ಲಾಧಿಕಾರಿಗಳು, ಎಸ್‌ಪಿಗಳು ಹಾಗೂ ಡಿಸಿಪಿಗಳಿಗೆ ಸೂಚನೆ ನೀಡಿದ್ದಾರೆ.

ಬೆಂಗಳೂರು ನಗರ ಜಿಲ್ಲಾಧಿಕಾರಿ, ಬಿಬಿಎಂಪಿ ಕಮಿಷನರ್ ಹಾಗೂ ಕಮಿಷನರೇಟ್ ವ್ಯಾಪ್ತಿಯ ಡಿಸಿಪಿಗಳ ಜೊತೆ ಶುಕ್ರವಾರ ಸಭೆ ನಡೆಸಿದ ಆಯೋಗ, ಮತಗಟ್ಟೆ ಹಂತದಲ್ಲಿ ಕೈಗೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಚರ್ಚಿಸಿದರು.

‘ಸರ್ಕಾರದ ಆಡಳಿತ ಅವಧಿ ಐದು ವರ್ಷ ಮುಗಿಯುವುದಕ್ಕೂ ಆರು ತಿಂಗಳ ಮೊದಲೇ ಚುನಾವಣೆ ಕೆಲಸಗಳನ್ನು ಆರಂಭಿಸಬೇಕೆಂಬ ಮಾರ್ಗಸೂಚಿ ಇದೆ. ಇದರ ಭಾಗವಾಗಿ ಆಯೋಗದ ಅಧಿಕಾರಿಗಳು, ವಲಯವಾರು ಸಭೆಗಳನ್ನು ನಡೆಸುತ್ತಿದ್ದಾರೆ. ಚುನಾವಣೆ ಅಖಾಡ ಸಜ್ಜಾಗುತ್ತಿದ್ದು, ನಮ್ಮ ಇಲಾಖೆಯಿಂದಲೂ ಪೂರ್ವತಯಾರಿ ಆರಂಭಿಸಿದ್ದೇವೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಳೆದ ಚುನಾವಣೆ ವೇಳೆ ಸಂಭವಿಸಿದ್ದ ಘಟನೆಗಳನ್ನು ಸಭೆಯಲ್ಲಿ ಮೆಲುಕು ಹಾಕಲಾಯಿತು. ಮುಂಬರುವ ಚುನಾವಣೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಭದ್ರತೆ ಬಿಗಿಗೊಳಿಸಲು ಏನೆಲ್ಲ ಕ್ರಮ ಕೈಗೊಳ್ಳಬಹುದೆಂದು ಅಧಿಕಾರಿಗಳು ಮಾಹಿತಿ ಪಡೆದುಕೊಂಡರು’ ಎಂದರು.

‘ಪ್ರತಿ ಠಾಣೆ ವ್ಯಾಪ್ತಿಯಲ್ಲಿ ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಮತಗಟ್ಟೆಗಳ ಪಟ್ಟಿಯನ್ನು ಸಿದ್ಧಪಡಿಸುವಂತೆಯೂ ಆಯೋಗದ ಅಧಿಕಾರಿಗಳು ಸೂಚಿಸಿದರು. ಸುಮಾರು ನಾಲ್ಕು ತಾಸು ನಡೆದ ಸಭೆಯಲ್ಲಿ ಚುನಾವಣೆಗೆ ಸಂಬಂಧಪಟ್ಟ ಹಲವು ಸಂಗತಿಗಳು ಚರ್ಚೆಗೆ ಬಂದವು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಅಕ್ರಮದ ಬಗ್ಗೆ ನಿಗಾ ಇರಿಸಿ: ‘ಚುನಾವಣೆ ಹತ್ತಿರವಾಗುತ್ತಿದ್ದಂತೆ ಕೆಲವು ಕ್ಷೇತ್ರಗಳಲ್ಲಿ ಮತದಾರರಿಗೆ ಆಮಿಷವೊಡ್ಡುವ ಘಟನೆಗಳು ನಡೆಯುತ್ತಿವೆ. ಇಂಥ ಘಟನೆಗಳ ಬಗ್ಗೆ ನಿಗಾ ವಹಿಸಬೇಕು. ಈ ಬಗ್ಗೆ ಕಾಲ ಕಾಲಕ್ಕೆ ವರದಿ ಸಲ್ಲಿಸಬೇಕು’ ಎಂದು ಆಯೋಗದ ಅಧಿಕಾರಿಗಳು ಹೇಳಿರುವುದಾಗಿ ಗೊತ್ತಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಬಳಿಕ ಚುನಾವಣೆ?

ರಾಜ್ಯದಲ್ಲಿ ಮಾರ್ಚ್ 31ರಿಂದ ಏಪ್ರಿಲ್ 15ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ನಡೆಯಲಿದ್ದು, ಈ ಅವಧಿಯ ಬಳಿಕ ಚುನಾವಣೆ ನಡೆಯುವ ಸಾಧ್ಯತೆ ಇದೆ.

ಪರೀಕ್ಷೆಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದ್ದ ಅಧಿಕಾರಿಯೊಬ್ಬರು, ‘ಬಹುತೇಕ ಶಾಲೆಗಳಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತದೆ. ಅದೇ ಶಾಲೆಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪರೀಕ್ಷೆಗೂ ಮುನ್ನ ಚುನಾವಣೆ ನಡೆದರೆ ಅನನುಕೂಲಗಳು ಹೆಚ್ಚಾಗಲಿವೆ’ ಎಂದಿದ್ದಾರೆ.

ಘನತೆಯ ಹಕ್ಕು ಮೊಟಕು ಸಹಿಸುವುದಿಲ್ಲ: ‘ಸುಪ್ರೀಂ’

ನವದೆಹಲಿ: ಘನತೆಯಿಂದ ಜೀವಿಸುವ ಯಾವುದೇ ವ್ಯಕ್ತಿಯ ಹಕ್ಕು ಮೊಟಕುಗೊಳ್ಳುವುದನ್ನು ಯಾವುದೇ ಸಾಂವಿಧಾನಿಕ ನ್ಯಾಯಾಲಯವು ಸಹಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ದಾವೂದಿ ಬೊಹ್ರಾ ಸಮುದಾಯದಲ್ಲಿ ಆಚರಣೆಯಲ್ಲಿರುವ ‘ಬಹಿಷ್ಕಾರ’ ಪದ್ಧತಿಯಿಂದ ಆ ಸಮುದಾಯದ ಜನರಿಗೆ ರಕ್ಷಣೆ ನೀಡಿ 1962ರಲ್ಲಿ ಐವರು ನ್ಯಾಯಮೂರ್ತಿಗಳ ಪೀಠ ತೀರ್ಪು ನೀಡಿತ್ತು. ಈ ತೀರ್ಪನ್ನು ಮರುಪರಿಶೀಲಿಸಲು ಒಂಬತ್ತು ನ್ಯಾಯಮೂರ್ತಿಗಳ ಪೀಠ ರಚನೆಗೆ ಸುಪ್ರೀಂ ಕೋರ್ಟ್ ಶಿಫಾರಸು ಮಾಡುವಾಗ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಂಜಯ್ ಕಿಶನ್ ಕೌಲ್ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಪೀಠ ಈ ವಿಷಯದ ಬಗ್ಗೆ ವಿವರವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

‘ಧರ್ಮದ ಆಧಾರದಲ್ಲಿ ಕೆಲಸ ಮಾಡುವ ಧಾರ್ಮಿಕ ಪಂಗಡಗಳ ಹಕ್ಕುಗಳು ಯಾವಾಗಲೂ ನೈತಿಕತೆಯನ್ನು ಒಳಗೊಂಡಿರಬೇಕು. ಧಾರ್ಮಿಕ ಆಚರಣೆಗಳ ನಿರ್ವಹಣೆಗೆ ಸಂಬಂಧಿಸಿದ 26ನೇ (ಬಿ) ವಿಧಿಗಿಂತ ಸಾಂವಿಧಾನಿಕ ನೈತಿಕತೆಯು ಮುಖ್ಯವಾದುದು’ ಎಂದು ಕೋರ್ಟ್ ಹೇಳಿತು.

ಬಹಿಷ್ಕಾರಗೊಂಡ ವ್ಯಕ್ತಿಯೊಬ್ಬರು ಸಮುದಾಯಕ್ಕೆ ಸಂಬಂಧಿಸಿದ ಸೊತ್ತುಗಳು ಹಾಗೂ ಸ್ಮಶಾನ ಸ್ಥಳವನ್ನು ಬಳಸುವಂತಿಲ್ಲ ಎಂಬ ವಿಚಾರವನ್ನು ಗಮನಿಸಿದ ಕೋರ್ಟ್, ಈ ಅಭಿಪ್ರಾಯ ವ್ಯಕ್ತಪಡಿಸಿತು.

ತಹಶೀಲ್ದಾರ್ ಕಚೇರಿ ಜಾಗ ಕಬಳಿಸಲು ಯತ್ನ

ಪ್ರಜಾವಾಣಿ ವಾರ್ತೆ

ಕೆ.ಆರ್. ಪುರ: ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್ ಕಚೇರಿಗೆ ಮೀಸಲಿಟ್ಟಿರುವ ಜಾಗ ಕಬಳಿಸಲು ಯತ್ನಿಸಿರುವ ಆರೋಪದಡಿ ಐವರ ವಿರುದ್ಧ ಕಾಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಹಶೀಲ್ದಾರ್ ಮಹೇಶ್ ಅವರು ಕೃತ್ಯದ ಬಗ್ಗೆ ಠಾಣೆಗೆ ದೂರು ನೀಡಿದ್ದಾರೆ. ಕೆ.ಆರ್. ಪುರ ವಿಭಾಗದ ಹಿರಿಯ ಉಪ ನೋಂದಣಾಧಿಕಾರಿ ಶಿವಕುಮಾರ್, ಮಂಜುನಾಥ್, ನಾಗೇಂದ್ರ ಪ್ರಸಾದ್, ಜಾವೇದ್ ಖಾನ್ ಹಾಗೂ ಕೃಷ್ಣ ಎಂಬುವರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

‘ಬಿದರಹಳ್ಳಿ ಹೋಬಳಿಯ ಖಾಜಿಸೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್ 100ರಲ್ಲಿರುವ 4 ಎಕರೆ 25 ಗುಂಟೆ ಭೂಮಿಯನ್ನು ಪೂರ್ವ ತಾಲ್ಲೂಕು ತಹಶೀಲ್ದಾರ್ ಕಚೇರಿ ನಿರ್ಮಾಣಕ್ಕೆ ಮೀಸಲಿಡಲಾಗಿತ್ತು. ಈ ಜಾಗವನ್ನು ನಕಲಿ ದಾಖಲೆ ಸೃಷ್ಟಿಸಿ ಬೇರೆಯವರಿಗೆ ಮಾರಾಟ ಮಾಡಲು ಯತ್ನ ನಡೆದಿತ್ತು’ ಎಂದು ತಹಶೀಲ್ದಾರ್ ಮಹೇಶ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

‘ಆರೋಪಿಗಳಾದ ಮಂಜುನಾಥ್, ನಾಗೇಂದ್ರಪ್ರಸಾದ್, ಜಾವೇದ್ ಖಾನ್ ಹಾಗೂ ಕೃಷ್ಣ ಅವರು, ಭೂಮಿ ಕ್ರಯ ಸಂಬಂಧ 2022ರ ಜೂನ್ 30ರಂದು ಕೆ.ಆರ್. ಪುರ ಉಪ ನೋಂದಣಿ ಕಚೇರಿಯಲ್ಲಿ ಒಪ್ಪಂದ ಪತ್ರ ನೋಂದಣಿ ಮಾಡಿಕೊಂಡಿರುವುದು ಗಮನಕ್ಕೆ ಬಂದಿದೆ.’

‘ನಮ್ಮ ತಾಯಿ ಗೌರಮ್ಮ ಅವರಿಗೆ 1978ರಲ್ಲಿ ಭೂಮಿ ಮಂಜೂರಾಗಿದೆ’ ಎಂಬುದಾಗಿ ಆರೋಪಿಗಳಾದ ಮಂಜುನಾಥ್ ಮತ್ತು ನಾಗೇಂದ್ರಪ್ರಸಾದ್ ನಕಲಿ ದಾಖಲೆ ಸೃಷ್ಟಿಸಿ ನೋಂದಣಿ ಕಚೇರಿಗೆ ಸಲ್ಲಿಸಿದ್ದರು. ಇದನ್ನು ಪರಿಶೀಲನೆ ನಡೆಸದೇ ಹಿರಿಯ ಉಪ ನೋಂದಣಿ ಅಧಿಕಾರಿ ಶಿವಕುಮಾರ್, ನೋಂದಣಿ ಒಪ್ಪಂದಕ್ಕೆ ಸಹಕರಿಸಿದ್ದರು. ₹ 5.50 ಕೋಟಿಗೆ ಜಾಗ ಮಾರಾಟ ಮಾಡಲು ಯತ್ನಿಸಿರುವುದು ಗೊತ್ತಾಗಿದೆ’ ಎಂದು ದೂರಿನಲ್ಲಿ ಹೇಳಿದ್ದಾರೆ.



ಪೂರ್ವ ತಾಲ್ಲೂಕು ತಹಶಿಲ್ದಾರ್ ಕಚೇರಿಗಾಗಿ ಕಾಯ್ದಿರಿಸಿದ ಜಾಗ

ಮಲ್ಲತಹಳ್ಳಿ ಕೆರೆಯಲ್ಲಿ ಶಿವರಾತ್ರಿ ಆಚರಣೆ ನಿರ್ಧಾರ: ಆಕ್ಷೇಪ

ಬೆಂಗಳೂರು: ‘ಮಲ್ಲತಹಳ್ಳಿ ಕೆರೆಯಲ್ಲಿ ಫೆ.18ರಂದು ಶಿವರಾತ್ರಿ ಆಚರಣೆಗೆ ಸಿದ್ಧತೆ ನಡೆದಿದ್ದು, ಇದು ಹೈಕೋರ್ಟ್ ಆದೇಶಕ್ಕೆ ವಿರುದ್ಧವಾಗಿದೆ’ ಎಂದು ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಮೂರು ಕಡೆ ಶಿವರಾತ್ರಿ ಜಾಗರಣೆ ಕಾರ್ಯಕ್ರಮವನ್ನು ಆಯೋಜಿಸಿದ್ದು, ಅದರಲ್ಲಿ ರಾಜರಾಜೇಶ್ವರಿನಗರ, ಜ್ಞಾನಭಾರತಿ ಮತ್ತು ಕೊಟ್ಟಿಗೆಪಾಳ್ಯ ವಾರ್ಡ್‌ಗಳಿಗೆ ಸಂಬಂಧಿಸಿದ ಕಾರ್ಯಕ್ರಮವನ್ನು ಮಲ್ಲತಹಳ್ಳಿ ಕೆರೆಯಲ್ಲಿ ಆಯೋಜಿಸಲಾಗಿದೆ ಎಂದು ತೋಟಗಾರಿಕಾ ಸಚಿವರೂ ಆಗಿರುವ ಶಾಸಕ ಮುನಿರತ್ನ ಅವರು ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ತಿಳಿಸಿದ್ದಾರೆ.

‘ಯಾವುದೇ ಧಾರ್ಮಿಕ ಕಾರ್ಯಕ್ರಮಗಳನ್ನು ಕೆರೆ ಆವರಣದಲ್ಲಿ ಆಯೋಜಿಸಿದಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರನ್ನು ಒಳಗೊಂಡ ಪೀಠ ಆದೇಶ ನೀಡಿದೆ. ಬೇಗೂರು ಕೆರೆಯಲ್ಲಿ ಶಿವನ ಪ್ರತಿಮೆ ಸ್ಥಾಪನೆಗೂ ತಡೆ ನೀಡಿದೆ. ಇದರ ನಡುವೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಇದನ್ನು ತಡೆಯುವ ಜವಾಬ್ದಾರಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರದ್ದು’ ಎಂದು ಪರಿಸರವಾದಿ ಲಿಯೊ ಸಾಲ್ಡಾನ ತಿಳಿಸಿದ್ದಾರೆ.

‘ನ್ಯಾಯಾಲಯದ ಆದೇಶ ಉಲ್ಲಂಘಿಸಿ ಕೆರೆಯಲ್ಲಿ ಕಾರ್ಯಕ್ರಮ ಆಯೋಜಿಸಲು ಅವಕಾಶ ನೀಡಬಾರದು’ ಎಂದು ಪರಿಸರವಾದಿ ಗೀತಾ ಮಿಶ್ರಾ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಬ್ಯಾಟರಾಯನಪುರ: 2ನೇ ಕನ್ನಡ ಸಾಹಿತ್ಯ ಸಮ್ಮೇಳನ

‘ಪರಭಾಷಿಕರಿಂದ ನಿರಂತರ ಅಪಾಯ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಕನ್ನಡ ಭಾಷೆ, ಪರಂಪರೆ ಮತ್ತು ಸಂಸ್ಕೃತಿಗೆ ಆಂಗ್ಲಭಾಷೆ ಮತ್ತು ಪರಭಾಷಿಕರಿಂದ ನಿರಂತರವಾಗಿ ಅಪಾಯ ಎದುರಾಗುತ್ತಿದೆ. ಭಾಷೆಯನ್ನು ರಕ್ಷಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾವು ಗಟ್ಟಿಯಾಗಿ ನಿಂತರೆ ಭಾಷೆಗೆ ಅಪಾಯ ಉಂಟುಮಾಡಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಹೇಳಿದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ಘಟಕದ ವತಿಯಿಂದ ಕೆಂಪಾಪುರದ ಕಾಫಿ ಬೋರ್ಡ್ ಬಡಾವಣೆಯಲ್ಲಿ ಆಯೋಜಿಸಿದ್ದ 2ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

‘ಎಲ್ಲ ಸರ್ಕಾರಗಳು ಕನ್ನಡ ಭಾಷೆಯ ಬಗ್ಗೆ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಾ ಬಂದಿವೆ. ಅವರಿಗೆ ರಾಜಕಾರಣ, ಸ್ವಾರ್ಥ, ದ್ವಂದ್ವ ನಿಲುವುಗಳು, ಮತ್ತಿತರ ಅಡ್ಡಿ, ಆತಂಕಗಳಿರಬಹುದು. ಆದರೆ, ನಾವು ಸರ್ಕಾರದ ಕಡೆಗೆ ಕಡೆಗೆ ನೋಡದೆ ಕನ್ನಡವನ್ನು ಉಳಿಸಿ, ಬೆಳೆಸುವುದರ ಕಡೆಗೆ ಗಮನ ಹರಿಸಬೇಕು’ ಎಂದು ಅವರು ಹೇಳಿದರು.

ಶಾಸಕ ಕೃಷ್ಣ ಬೈರೇಗೌಡ ಮಾತನಾಡಿ, ‘ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ನಮ್ಮ ಕನ್ನಡ ಭಾಷೆಯನ್ನು ಪದೇ ಪದೇ ಉಳಿಸಿಕೊಳ್ಳಬೇಕು ಎಂದು ಹೇಳುವ ಅವಶ್ಯಕತೆಯಿಲ್ಲ. ಭಾಷೆಯು ಎಂದೆಂದಿಗೂ ಅಜರಾಮರವಾಗಿ ಉಳಿದಿದ್ದು, ಮೊದಲು ನಮ್ಮ ಮನೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಮಾತನಾಡುವುದರ ಜೊತೆಗೆ ಇತರರ ಮೇಲೆ ಬಲವಂತವಾಗಿ ಭಾಷೆಯನ್ನು ಹೇರದೆ, ಇಷ್ಟಪಟ್ಟು ಕಲಿಯುವ ವಾತಾವರಣ ಸೃಷ್ಟಿಸಬೇಕು’ ಎಂದು ಅವರು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಬ್ಯಾಟರಾಯನಪುರ ಕ್ಷೇತ್ರ ಘಟಕದ ಅಧ್ಯಕ್ಷರಾದ ರೇಣುಕ ಹೆಗ್ಗಡೆ, ಪದಾಧಿಕಾರಿಗಳಾದ ಎ.ಎಸ್. ಗೋವಿಂದೇಗೌಡ, ಎಚ್.ಎ.ಪುಟ್ಟಸ್ವಾಮಿ, ಎಲ್.ಶಿವಕುಮಾರ್, ಬಿಬಿಎಂಪಿ ಮಾಜಿ ಉಪಮೇಯರ್ ಇಂದಿರಾ, ಕಾಂಗ್ರೆಸ್ ಮುಖಂಡರಾದ ಪಿ.ವಿ.ಮಂಜುನಾಥಬಾಬು, ಎನ್. ಎನ್.ಶ್ರೀನಿವಾಸಯ್ಯ, ಡಿ.ಬಿ.ಸುರೇಶ್ ಗೌಡ, ಕೆ.ಗೌರೀಶ್ ಇದ್ದರು.

ಇದಕ್ಕೂ ಮುನ್ನ ಸಮ್ಮೇಳನಾಧ್ಯಕ್ಷ ಡಾ.ಸಿ.ಆರ್.ಚಂದ್ರಶೇಖರ್ ಅವರನ್ನು ಸಾರೋಟ್‌ನಲ್ಲಿ ಮೆರವಣಿಗೆ ನಡೆಸಲಾಯಿತು.



ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ಘಟಕದ ವತಿಯಿಂದ ಕೆಂಪಾಪುರದ ಕಾಫಿಬೋರ್ಡ್ ಬಡಾವಣೆಯಲ್ಲಿ ಆಯೋಜಿಸಿದ್ದ 2ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್ ಉದ್ಘಾಟಿಸಿದರು. ಶಾಸಕ ಕೃಷ್ಣ ಬೈರೇಗೌಡ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ಇದ್ದರು.

‘ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕುವೆಂಪು ಹೆಸರಿಡಿ’

ಬೆಂಗಳೂರು: ಶಿವಮೊಗ್ಗದ ನೂತನ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಅವರ ಹೆಸರಿಡಬೇಕು ಎಂದು ನಿರಂತರ ಜನ ಜಾಗೃತಿ ವೇದಿಕೆ ಆಗ್ರಹಿಸಿದೆ.

ಈ ವಿಮಾನ ನಿಲ್ದಾಣವನ್ನು ಫೆ. 27ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟನೆ ಮಾಡಲಿದ್ದಾರೆ. ಶಿವಮೊಗ್ಗ ಜಿಲ್ಲೆಯವರಾದ ಕುವೆಂಪು ಅವರ ಹೆಸರನ್ನು ನಾಮಕರಣ ಮಾಡುವಂತೆ ವೇದಿಕೆಯ ಪ್ರಧಾನ ಕಾರ್ಯದರ್ಶಿ ಟಿ.ಬಿ. ನಿರಂಜನ ಒತ್ತಾಯಿಸಿದ್ದಾರೆ.

ನಿಗಮ ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಾರ್ಚ್‌ನಿಂದ ಬಸ್ ಸಂಚಾರ

ಕೆಎಸ್‌ಆರ್‌ಟಿಸಿ ಸೇರಲಿವೆ 50 ಇ.ವಿ ಬಸ್

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರು–ಮೈಸೂರು ನಡುವೆ ಪರಿಚಯಿಸಿದ ಎಲೆಕ್ಟ್ರಿಕ್ ಬಸ್ (ಇ.ವಿ) ಸಂಚಾರ ಯಶಸ್ವಿಯಾದ ಬೆನ್ನಲ್ಲೆ, ಮತ್ತೆ 50 ಇ.ವಿ ಬಸ್‌ಗಳನ್ನು ತರಿಸಿಕೊಳ್ಳಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಮುಂದಾಗಿದೆ.

‘ಮೇಕ್ ಇನ್ ಇಂಡಿಯಾ ವಿದ್ಯುತ್ ಬಸ್ ಫೇಮ್ -2 ಯೋಜನೆ’ ಅಡಿ ಡಿ.31ರಂದು ಮೊದಲ ಬಸ್‌ಗೆ ನಿಗಮ ಹಸಿರು ನಿಶಾನೆ ತೋರಿಸಿತ್ತು. ಜನವರಿ ಎರಡನೇ ವಾರದಲ್ಲಿ ಎರಡೂ ನಗರಗಳ ನಡುವೆ ಪ್ರಾಯೋಗಿಕವಾಗಿ ಸಂಚಾರ ಆರಂಭಿಸಿದ್ದ ‘ಪವರ್ ಪ್ಲಸ್’ ಹೆಸರಿನ ಬಸ್‌ಗೆ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದರು.

‘ಬಸ್‌ನ ವೇಗ, ಬ್ಯಾಟರಿ ಕಾರ್ಯಕ್ಷಮತೆ ಸೇರಿದಂತೆ ಇ.ವಿ ಬಸ್ ತಾಂತ್ರಿಕತೆಯನ್ನು ಪರಿಶೀಲನೆಗೆ ಒಳಪಡಿಸಲಾಗಿತ್ತು. ಎಲ್ಲ ವಿಭಾಗದಲ್ಲೂ ಕಾರ್ಯಕ್ಷಮತೆ ತೃಪ್ತಿ ನೀಡಿದೆ. ನಿಗಮ ವ್ಯಾಪ್ತಿಯ ಇತರೆ ಜಿಲ್ಲೆಗಳಿಗೂ ಮಾರ್ಚ್ ಅಂತ್ಯದ ವೇಳೆಗೆ ‘ಪವರ್ ಪ್ಲಸ್’ ಬಸ್ ಸಂಚರಿಸಲಿದೆ’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಾರ್ಚ್‌ನಲ್ಲಿ ಬೆಂಗಳೂರಿನಿಂದ ಮಡಿಕೇರಿ, ವಿರಾಜಪೇಟೆ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರಿಗೆ ಇ.ವಿ ಬಸ್‌ಗಳು ಸಂಚರಿಸಲಿವೆ. ಮೈಸೂರು ಮತ್ತು ಬೆಂಗಳೂರಿನಲ್ಲಿ ‘ಚಾರ್ಜಿಂಗ್ ಕೇಂದ್ರ’ ನಿರ್ಮಿಸಲಾಗಿದೆ. ಮಡಿಕೇರಿ, ವಿರಾಜಪೇಟೆ, ದಾವಣಗೆರೆಯಲ್ಲೂ ಚಾರ್ಜಿಂಗ್ ಕೇಂದ್ರದ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣವಾಗಿದೆ’ ಎಂದೂ ಮಾಹಿತಿ ನೀಡಿದರು.

300 ಕಿ.ಮೀ ಪ್ರಯಾಣ: ಪರಿಸರ ಮಾಲಿನ್ಯ ನಿಯಂತ್ರಿಸುವ ಉದ್ದೇಶದಿಂದ ನಿಗಮವು ಇ.ವಿ ಬಸ್‌ಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ‘ಪವರ್ ಪ್ಲಸ್’ ಬಸ್‌ಗೆ ಒಮ್ಮೆ ರೀಚಾರ್ಜ್ ಮಾಡಿದರೆ, 300 ಕಿ.ಮೀ ಪ್ರಯಾಣಿಸಬಹುದಾಗಿದೆ. ವೇಗವಾಗಿ ರೀಚಾರ್ಜ್ ಆಗುತ್ತಿದೆ. ಎಂದು ಅಧಿಕಾರಿಗಳು ಹೇಳಿದರು.

ಒಲೆಕ್ಟ್ರಾ ಕಂಪನಿ ಅಭಿವೃದ್ಧಿಪಡಿಸಿ ನೀಡಲಿರುವ 50 ಬಸ್‌ಗಳಲ್ಲೂ ಆರಾಮದಾಯಕ ಪುಶ್‌ಬ್ಯಾಕ್ ಆಸನ, ಗುಡ್ಡಗಾಡು ಹಾಗೂ ಬಯಲು ಪ್ರದೇಶಗಳಲ್ಲಿ ಸುಗಮ ಸಂಚಾರ ಸಾಮರ್ಥ್ಯ, 43 ಆಸನದ ವ್ಯವಸ್ಥೆ, ಪ್ರಯಾಣಿಕರ ಬಳಕೆಗೆ ವೈ-ಫೈ ಮತ್ತು ಪ್ರತಿ ಆಸನಕ್ಕೂ ಯುಎಸ್‌ಬಿ ಚಾರ್ಜರ್, ಸಿಸಿಟಿವಿ ಕ್ಯಾಮೆರಾ, ತುರ್ತು ಬಟನ್ ಸೇರಿದಂತೆ ಸುರಕ್ಷತಾ ಕ್ರಮಗಳು ಇರಲಿವೆ ಎಂದು ಮಾಹಿತಿ ನೀಡಿದರು.



ಕೆಎಸ್‌ಆರ್‌ಟಿಸಿಯ ಎಲೆಕ್ಟ್ರಿಕ್ ಬಸ್ (ಸಂಗ್ರಹ ಚಿತ್ರ)

ನಿಗಮ ವ್ಯಾಪ್ತಿಯಲ್ಲಿ ಹಂತ ಹಂತವಾಗಿ ಇ.ವಿ ಬಸ್ ಸಂಚಾರ ಆರಂಭಿಸುತ್ತೇವೆ. ಫೆಬ್ರುವರಿ ಅಂತ್ಯಕ್ಕೆ 25 ಬಸ್‌ಗಳನ್ನು ‘ಒಲೆಕ್ಟ್ರಾ ಕಂಪನಿ’ ಪೂರೈಸಲಿದ್ದು, ಉಳಿದ ಬಸ್‌ಗಳು ಮಾರ್ಚ್‌ನಲ್ಲಿ ಬರಲಿವೆ

ಅನ್ಬುಕುಮಾರ್, ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಆರ್‌ಟಿಸಿ

ಸುಧಾ, ಮಯೂರ ಓದಿರಿ

‘ಅರಣ್ಯವಾಸಿಗಳ ಬದುಕಿನಲ್ಲಿ ಕಾಂತಾರದಿಂದ ಬದಲಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಂಡಿಪುರ ಹಾಗೂ ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಅಲ್ಲಿನ ಮೂಲನಿವಾಸಿಗಳ ಅನೇಕ ಸಮಸ್ಯೆಗಳಿಗೆ ಆಡಳಿತ ವ್ಯವಸ್ಥೆ ಸ್ಪಂದಿಸುತ್ತಿರುವುದನ್ನು ನಾನು ಖುದ್ದು ಗಮನಿಸಿದ್ದೇನೆ. ಐವತ್ತು ವರ್ಷ ದಾಟಿದ ದೈವಾರಾಧಕರಿಗೆ ಸರ್ಕಾರ ಮಾಸಾಶನ ಮಂಜೂರು ಮಾಡಿತು. ಇವೆಲ್ಲ ಕಾಂತಾರ ಸಿನಿಮಾ ಬಂದ ಮೇಲೆ ಆಗಿರುವ ಪರಿಣಾಮ’ ಎಂದು ನಿರ್ದೇಶಕ ರಿಷಬ್ ಶೆಟ್ಟಿ ಅವರು ತಿಳಿಸಿದರು.

ಕರ್ನಾಟಕ ಚಲನಚಿತ್ರ ಪತ್ರಕರ್ತರ ಸಂಘ ಶನಿವಾರ ಶೇಷಾದ್ರಿಪುರಂನ ಗಾಂಧಿಭವನದ ಕಸ್ತೂರಬಾ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

‘ಶಿವರಾಮ ಕಾರಂತರು ಚೋಮನದುಡಿ ಸಿನಿಮಾದಲ್ಲಿಯೇ ಪಂಜುರ್ಲಿಯ ಬಗೆಗೆ ಹೇಳಿದ್ದರು. ಹಿಂದೆ ಕೂಡ ಅದರ ಪ್ರಸ್ತಾಪ ಹಲವು ಮಾಧ್ಯಮಗಳಲ್ಲಿ ಆಗಿದೆ. ನಮ್ಮ ಸಿನಿಮಾದಲ್ಲಿ ಅದನ್ನೇ ನಾವು ಬೇರೆ ರೀತಿ ತೋರಿದೆವು ಅಷ್ಟೆ. ಸಹಬಾಳ್ವೆಯೇ ಸಮಸ್ಯೆಗಳಿಗೆಲ್ಲ ಪರಿಹಾರ. ದೈವ ಎನ್ನುವುದು ನಂಬಿಕೆ. ಅದು ಹೊಂದಾಣಿಕೆಯಿಂದ ಬದುಕಲು ಪೂರಕ ಎಂದು ತೋರಿಸುವುದು ನನ್ನ ಉದ್ದೇಶವಾಗಿತ್ತು’ ಎಂದು ಅವರು ‘ಕಾಂತಾರ’ ಸಿನಿಮಾದ ಒಟ್ಟಾರೆ ಆಶಯದ ಕುರಿತು ಅವರು ಹೇಳಿಕೊಂಡರು.



ಸಂವಾದದಲ್ಲಿ ನಿರ್ದೇಶಕ ರಿಷಬ್ ಶೆಟ್ಟಿ ಮಾತನಾಡಿದರು, ಮುರಳೀಧರ ಖಜಾನೆ,ಬಿ.ಎನ್‌ ಸುಬ್ರಹ್ಮಣ್ಯ ಇದ್ದಾರೆ

‘ದೈವಾರಾಧನೆ ಆಯಾ ವರ್ಗಕ್ಕೆ ತಕ್ಕಂತೆ ಇರುತ್ತದೆ. ನನ್ನ ಸಿನಿಮಾದಲ್ಲಿನ ಆ ಅಂಶ ಒಂದೊಂದು ಕಡೆಯಲ್ಲಿ ಒಂದೊಂದು ರೀತಿ ಹೊಂದಾಣಿಕೆ ಕಂಡಿತಷ್ಟೆ. ಏಳು ಭಾಷೆಗಳಿಗೆ ಈ ಸಿನಿಮಾ ಡಬ್ ಆಯಿತು. ತೆಲುಗಿನಲ್ಲಿ ನಾಲ್ಕೇ ದಿನಗಳಲ್ಲಿ 20 ಕೋಟಿ ರೂಪಾಯಿ ಸಂಗ್ರಹಿಸಿತು’ ಎಂದು ಸಿನಿಮಾ ಯಶಸ್ಸಿನ ಮಾಹಿತಿ ನೀಡಿದರು.

ಕುಂದಾಪುರ ಬಳಿಯ ಸಮಾನಮನಸ್ಕರು ಸಾವಯವ ಕೃಷಿ ಮಾಡುವ ವಿಷಯದ ಚರ್ಚೆ ನಡೆಸುತ್ತಿದ್ದಾಗ ನಿಜ ಪ್ರಸಂಗವೊಂದು ಚರ್ಚೆಯಾಗಿತ್ತು. ಪರವಾನಗಿ ಇಲ್ಲದ ನಾಡಪಿಸ್ತೂಲ್ ವಶಪಡಿಸಿಕೊಂಡ ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ಗುಂಡುಗಳನ್ನು ಖಾಲಿ ಮಾಡುವ ಪ್ರಕ್ರಿಯೆಯಲ್ಲಿ ಹಾರಿಸಿದ ಗುಂಡು ಅವರ ಕಣ್ಣಿಗೇ ತಗಲಿತ್ತು. ಆ ಪ್ರಸಂಗ ಕೇಳಿದ ಮೇಲೆ ಕಾಂತಾರಾ ಸಿನಿಮಾದ ಬರವಣಿಗೆ ಹರಳುಗಟ್ಟಿತು ಎಂದು ರಿಷಬ್ ಹೇಳಿದರು. ಮುಂದುವರೆದು ಮಾತನಾಡಿ, ಆ ದೃಶ್ಯವನ್ನು ಕೂಡ ಸಿನಿಮಾದಲ್ಲಿ ಅಳವಡಿಸಿಕೊಂಡಿದ್ದನ್ನು ನೆನಪಿಸಿಕೊಂಡರು.

ಪೆದ್ರೊ, ಶಿವಮ್ಮ ತರಹದ ಸಿನಿಮಾಗಳನ್ನು ನಿರ್ಮಿಸಿರುವ ಅವರು ಮುಂದೆ ಕೆಲವು ಪರದೆಗಳಲ್ಲಿ ಆ ಸಿನಿಮಾಗಳನ್ನೂ ಬಿಡುಗಡೆ ಮಾಡುವುದಾಗಿ ಭರವಸೆ ಕೊಟ್ಟರು. ‘ಕಾಂತಾರ’ ಸಿನಿಮಾದ ಎರಡನೇ ಭಾಗವು ಚಿತ್ರಕಥೆ ದೃಷ್ಟಿಯಿಂದ ಮೊದಲ ಭಾಗ ಆಗಿರಲಿದೆ ಎಂದೂ ರಿಷಬ್ ಶೆಟ್ಟಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತ ಮುರಳೀಧರ ಖಜಾನೆ ಅವರು ಸಂವಾದ ಮಾಡಿದರು.

ಕರ್ನಾಟಕ ಚಲನಚಿತ್ರ ಪತ್ರಕರ್ತರ ಸಂಘದ ಅಧ್ಯಕ್ಷ ಬಿ. ಎನ್. ಸುಬ್ರಹ್ಮಣ್ಯ ಅವರು ಇದ್ದರು.



ಕಾರ್ಯಕ್ರಮದಲ್ಲಿ ಚಾಂದಿನಿ ಪಯಣ ಅವರು ‘ಕಾಮಕಸ್ತೂರಿ ಬನ’ ಕವನ ಸಂಕಲನ ಬಿಡುಗಡೆ ಮಾಡಿದರು. (ಎಡದಿಂದ) ಬಂಜಗೆರೆ ಜಯಪ್ರಕಾಶ್, ಬರಹಗಾರ ನಟರಾಜ್ ಹುಳಿಯಾರ್ ಮತ್ತು ಕವಿ ಪ್ರಕಾಶ್ ಮಂಟೇದ ಇದ್ದಾರೆ.
–ಪ್ರಜಾವಾಣಿ ಚಿತ್ರ

‘ಬರವಣಿಗೆಗೆ ಭಯ ಪಡುವ ಕಾಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇದು ಬರವಣಿಗೆಗೆ ಭಯ ಪಡುವ ಕಾಲವಾಗಿದೆ. ಯಾವ ಸಾಲಿಗೆ ಏನು ಅರ್ಥ ಹಾಕಿ, ನಮ್ಮನ್ನು ಒಳಗಡೆ ಹಾಕುತ್ತಾರೆಯೋ ಗೊತ್ತಿಲ್ಲ’ ಎಂದು ವಿಮರ್ಶಕ ಬಂಜಗೆರೆ ಜಯಪ್ರಕಾಶ್ ಕಳವಳ ವ್ಯಕ್ತಪಡಿಸಿದರು.

ಕೌದಿ ಪ್ರಕಾಶನ ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಪ್ರಕಾಶ್ ಮಂಟೇದ ಅವರ ‘ಕಾಮಕಸ್ತೂರಿ ಬನ’ ಕವನ ಸಂಕಲನ ಬಿಡುಗಡೆಯಾಯಿತು. ‘ಕವಿ ಹುಟ್ಟುತ್ತಿದ್ದಾನೆ ಎನ್ನುವುದು ಇತರ ಕವಿಗಳಿಗೆ ಸಂತಸದ ಸುದ್ದಿ. ನನ್ನಂತೆ ನೋಯುವ, ಬೇಯುವ, ನರಳುವ ಹಾಗೂ ಸಾಧ್ಯವಾದರೆ ಜೈಲಿಗೂ ಹೋಗುವವರು ಇದ್ದಾರೆ ಎಂಬ ಭಾವ ಕವಿಗೆ ಮೂಡುತ್ತದೆ. ಕವಿಯಾದವನು ನಿರಂಕುಶಮತಿಯಾಗಿ ಬರೆಯಬೇಕು. ಸಾಮಾಜಿಕ ಎಚ್ಚರವು ಕವಿಯನ್ನು ರೂಪಿಸುವ ದೊಡ್ಡ ಕುಲುವೆ. ಕವಿತೆಯೊಳಗೊಡೆ ಆಲೋಚನೆ ಬರಬೇಕು. ಆದರೆ, ಆಲೋಚನೆ ಮುಂದೆ ಬಂದು, ಕವಿತೆ ಬಳಿಕ ಬರಬಾರದು’ ಎಂದು ಹೇಳಿದರು.

ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಹಕ್ಕುಗಳ ಹೋರಾಟಗಾರ್ತಿ ಚಾಂದಿನಿ ಪಯಣ, ‘ಲೈಂಗಿಕ ಅಲ್ಪಸಂಖ್ಯಾತರನ್ನು ಸಾಹಿತ್ಯ ರಂಗ ಸರಿಯಾಗಿ ಗುರುತಿಸಿಲ್ಲ. ಈ ಸಮುದಾಯದ ಬಗ್ಗೆ ಇತ್ತೀಚೆಗೆ ಕನ್ನಡದಲ್ಲಿ ಬರವಣಿಗೆ ಬರುತ್ತಿದೆ. ಲೈಂಗಿಕ ಅಲ್ಪಸಂಖ್ಯಾತರ ಜೀವನ, ಅವರು ಎದುರಿಸಿದ ನೋವಿನ ಬಗ್ಗೆ ಈವರೆಗೂ ಸಮಗ್ರ ಮಾಹಿತಿ ಒಳಗೊಂಡ ಪುಸ್ತಕ ಹೊರಬಂದಿಲ್ಲ. ನನ್ನ ಆತ್ಮಚರಿತ್ರೆಯನ್ನು 10 ವರ್ಷಗಳಿಂದ ಬರೆಯುತ್ತಿದ್ದೇನೆ. ಈವರೆಗೂ ಕೃತಿ ಪೂರ್ಣಗೊಂಡಿಲ್ಲ. ಹೆಣ್ತನ ಮತ್ತು ಅನುಭವವನ್ನು ಬಿಟ್ಟು ಬೇರೆಯದನ್ನು ಬರೆಯಲು ಸಾಧ್ಯವಾಗುತ್ತಿಲ್ಲ’ ಎಂದು ತಿಳಿಸಿದರು.

ಕವನ ಸಂಕಲನದ ಬಗ್ಗೆ ವೆಂಕಟೇಶಯ್ಯ ನೆಲ್ಲುಕುಂಟೆ ಮಾತನಾಡಿದರು. ಬರಹಗಾರ ನಟರಾಜ್ ಹುಳಿಯಾರ್ ಅವರು ಕವಿತೆ ರಚನೆ ಬಗ್ಗೆ ಕಿವಿಮಾತು ಹೇಳಿದರು.

ಅನುದಾನ ಬಳಕೆಯಲ್ಲಿ ಅವ್ಯವಹಾರ: ಮಾಜಿ ಶಾಸಕ ಮುನಿರಾಜು ಆರೋಪ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ದಾಸರಹಳ್ಳಿ ಕ್ಷೇತ್ರದ ಅಭಿವೃದ್ಧಿಗೆ ಬಿಡುಗಡೆ ಮಾಡಿದ್ದ ಅನುದಾನದಲ್ಲಿ ಅವ್ಯವಹಾರ ನಡೆದಿದೆ ಎಂದು ಮಾಜಿ ಶಾಸಕ ಎಸ್. ಮುನಿರಾಜು ಆರೋಪ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕ್ಷೇತ್ರಕ್ಕೆ ಒಟ್ಟಾರೆ ₹886 ಕೋಟಿ ಅನುದಾನ ಬಿಡುಗಡೆಯಾಗಿದೆ. ಆದರೂ ಶಾಸಕರು ಯಾವುದೇ ಅಭಿವೃದ್ಧಿ ಕಾರ್ಯ ಮಾಡದೆ ಸುಳ್ಳು ಹೇಳಿಕೊಂಡು ವೃಥಾ ಬಿಜೆಪಿಯನ್ನು ದೂಷಿಸುತ್ತಿದ್ದಾರೆ. ಕ್ಷೇತ್ರದ ತುಂಬೆಲ್ಲಾ ಕಳಪೆ ಕಾಮಗಾರಿಗಳು ಕಣ್ಣಿಗೆ ರಾಚುತ್ತವೆ’ ಎಂದು ವಾಗ್ದಾಳಿ ನಡೆಸಿದರು.

‘ದಾಸರಹಳ್ಳಿ ಅಭಿವೃದ್ಧಿಗೆ ಅಡ್ಡಿಪಡಿಸುತ್ತಿರುವುದಾಗಿ ಶಾಸಕರು ಆರೋಪಿಸುತ್ತಿದ್ದಾರೆ. ಇದು ಶುದ್ಧ ಸುಳ್ಳು. ಅಭಿವೃದ್ಧಿ ಕಾರ್ಯಗಳಿಗೆ ನಾನಾಗಲಿ, ಸದಾನಂದಗೌಡರಾಗಲಿ ತಡೆಯೊಡ್ಡಿಲ್ಲ. ಬದಲಿಗೆ ಸರ್ಕಾರದಿಂದ ಕ್ಷೇತ್ರಕ್ಕೆ ಅನುದಾನ ಒದಗಿಸಲು ಸಿ.ಎಂ ಸಹಿತ ಸಂಬಂಧಪಟ್ಟವರಿಗೆ ಮನವಿ ಮಾಡಲಾಗಿದೆ’ ಎಂದು ಸ್ಪಷ್ಟಪಡಿಸಿದರು.

ಇದೇ ವೇಳೆ ಎಸ್. ಮುನಿರಾಜು, ದಾಸರಹಳ್ಳಿ ಕ್ಷೇತ್ರಕ್ಕೆ ಬಿಜೆಪಿ ಸರ್ಕಾರ ಬಿಡುಗಡೆಗೊಳಿಸಿರುವ ಅನುದಾನದ ದಾಖಲೆ ಬಿಡುಗಡೆಗೊಳಿಸಿದರು. ಮುಖಂಡರಾದ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ನಗರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಟಿ.ಎಸ್.ಗಂಗರಾಜು, ಕೃಷ್ಣಮೂರ್ತಿ ಇದ್ದರು.

‘ಸುಳ್ಳು–ಮೋಸ ಜೀವನದಲ್ಲೇ ಇಲ್ಲ’

‘ನಾನು ಬಿಡುಗಡೆ ಮಾಡಿಸಿದ್ದ ಅನುದಾನವನ್ನು ತಡೆಹಿಡಿಸಿದ್ದಾರೆ. ಈಗ ಸಲ್ಲದ ಆರೋಪ ಮಾಡುತ್ತಿದ್ದಾರೆ. ಸುಳ್ಳು– ಮೋಸ ಎಂಬುದು ನನ್ನ ಜೀವಮಾನದಲ್ಲೇ ಇಲ್ಲ’ ಎಂದು ಶಾಸಕ ಆರ್.ಮಂಜುನಾಥ್ ಪ್ರತಿಕ್ರಿಯಿಸಿದರು.

‘ಸಾರ್ವಜನಿಕ ಕೆಲಸಕ್ಕೆ ನನ್ನ ಕೈಯಿಂದ ಹಣ ಕೊಟ್ಟಿದ್ದೇನೆಯೇ ವಿನಾ ಸಾರ್ವಜನಿಕರ ಹಣವನ್ನು ಲೂಟಿ ಮಾಡುವ ಉದ್ದೇಶ ನನಗಿಲ್ಲ. ಈ ಜೀವ ಇರುವ ತನಕ ಆ ರೀತಿಯ ಕೆಲಸಕ್ಕೆ ನಾನು ಕೈಹಾಕುವವನಲ್ಲ’ ಎಂದರು.

ಉಮ್ಮನ್ ಚಾಂಡಿಗೆ ಬೆಂಗಳೂರಿನಲ್ಲಿ ಹೆಚ್ಚಿನ ಚಿಕಿತ್ಸೆ: ವೇಣುಗೋಪಾಲ್

ತಿರುವನಂತಪುರ: ಅನಾರೋಗ್ಯದ ಕಾರಣ ಇಲ್ಲಿನ ಆಸ್ಪತ್ರೆಗೆ ದಾಖಲಾಗಿರುವ ಕೇರಳದ ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯಲಾಗುವುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಶನಿವಾರ ಹೇಳಿದ್ದಾರೆ.

‘ಚಾಂಡಿ ಅವರು ಈಗ ನ್ಯುಮೋನಿಯಾದಿಂದ ಮುಕ್ತರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಬೆಂಗಳೂರಿಗೆ ಕರೆದೊಯ್ಯಲು ಕಾಂಗ್ರೆಸ್ ನಿರ್ಧರಿಸಿದೆ’ ಎಂದೂ ತಿಳಿಸಿದ್ದಾರೆ.

ಮುಂಬೈ ರೇಸ್

ಐರನ್ ಏಜ್ ಗೆಲ್ಲುವ ನಿರೀಕ್ಷೆ

ಡಾಕ್ಟರ್ ಎಸ್ ಸಿ ಜೈನ್ ಸ್ಪ್ರಿಂಟರ್ಸ್ ಚಾಂಪಿಯನ್‌ಷಿಪ್ (ಗ್ರೇಡ್-2) ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐರನ್ ಏಜ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಸ್ವಿಫ್ಟ್ 2, ಪೈರಸ್ 11, ದೌಲತ್ ಮೇ 8
2ನೇ ರೇಸ್: ಫ್ಲೈಯಿಂಗ್ ವಿಸಿಟ್ 3, ಸನ್ ಆಫ್ ಎ ಗನ್ 6, ಜಿಯಂಟ್ ಸ್ಟಾರ್ 1
3ನೇ ರೇಸ್: ಇನಾಮೊರಟ 4, ಆಲ್ಫಾ ಡೊಮಿನೊ 7, ಗಾಲ್ವೇ ಬೇ 5
4ನೇ ರೇಸ್: ಐರನ್ ಏಜ್ 3, ಮಾರ್ಕೆಟ್ ಕಿಂಗ್ 4, ಕಾರ್ಫೆ ಕ್ಯಾಸಲ್ 1
5ನೇ ರೇಸ್: ಫ್ಲೇಮಿಂಗ್ ಲಂಬೋರ್ಗಿನಿ 3, ಎಂಪವರ್ 4, ರೀಗಲ್ ಕಮಾಂಡ್ 1
6ನೇ ರೇಸ್: ರೆಮಿನಿಸೆನ್ಸ್ 10, ಮೇಸರ 9, ಅಜ್ರಿನಾಜ್ 6
7ನೇ ರೇಸ್: ವಿಲ್ಲಿ ವೊಂಕಾ 2, ತೂಫಾನ್ 10, ಪ್ರಿನ್ಸ್ ಓ ವಾರ್ 7

ಉತ್ತಮ ಬೆಟ್: ಇನಾಮೊರಟ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	4,5,6	5,6,7

ಎರಡು ವರ್ಷಗಳಿಂದ ಉಗ್ರರ ಸಂಪರ್ಕ • ಪ್ರಚೋದನಕಾರಿ ವಿಡಿಯೊ ಕಳುಹಿಸುತ್ತಿದ್ದ ಉಗ್ರರು

ವಿದೇಶದಿಂದ ಹಣ: ಮನೆ ಖಾಲಿಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: 'ಅಲ್‌ಕೈದಾ' ಉಗ್ರ ಸಂಘಟನೆ ಜೊತೆ ನಂಟು ಹೊಂದಿದ್ದ ಆರೋಪಿ ಮೊಹಮ್ಮದ್ ಆರೀಫ್, ಡಾರ್ಕ್‌ನೆಟ್ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಎರಡು ವರ್ಷಗಳಿಂದ ಉಗ್ರರ ಜೊತೆ ಮಾತುಕತೆ ನಡೆಸುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ.

ಉಗ್ರರು ಕಳುಹಿಸುತ್ತಿದ್ದ ಪ್ರಚೋದನಾಕಾರಿ ಬರಹ ಹಾಗೂ ವಿಡಿಯೊ ನೋಡುತ್ತಿದ್ದ ಆರೋಪಿ, ಉಗ್ರ ತರಬೇತಿ ಪಡೆಯಲು ಆಸಕ್ತಿ ತೋರಿಸಿದ್ದ. ಇರಾಕ್ ಮೂಲಕ ಸಿರಿಯಾಗೆ ಹೋಗಿ ಉಗ್ರ ತರಬೇತಿ ಪಡೆಯುವುದು ಈತನ ಉದ್ದೇಶವಾಗಿತ್ತು. ಇದಕ್ಕೆ ತಯಾರಿ ನಡೆಸುತ್ತಿದ್ದ ವೇಳೆಯಲ್ಲೇ ಆರೀಫ್ ಎನ್‌ಐಎ ಬಲೆಗೆ ಬಿದ್ದಿದ್ದಾನೆ.

'ಉತ್ತರ ಪ್ರದೇಶದಿಂದ ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೀಫ್, ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದ. ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡವೊಂದರಲ್ಲಿ ಕೆಲ ವರ್ಷ ವಾಸವಿದ್ದ. ಸಮೀಪದ ಮಸೀದಿಗಳಿಗೆ ಭೇಟಿ ನೀಡಿ ಪ್ರಾರ್ಥನೆ ಸಹ ಸಲ್ಲಿಸುತ್ತಿದ್ದ. ಸ್ಥಳೀಯರ ಜೊತೆಯಲ್ಲೂ ಒಡನಾಟ ಹೊಂದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಾಮಾಜಿಕ ಮಾಧ್ಯಮಗಳಲ್ಲಿ ನಕಲಿ ಖಾತೆಗಳನ್ನು ತೆರೆದು, ಇಸ್ಲಾಂ ಧರ್ಮಕ್ಕೆ ಸಂಬಂಧಪಟ್ಟ ಪೋಸ್ಟ್‌ಗಳನ್ನು ಆರೀಫ್ ಪ್ರಕಟಿಸುತ್ತಿದ್ದ. ಇದನ್ನು ಗಮನಿಸಿದ್ದ ಅಲ್‌ಕೈದಾ ಸಂಘಟನೆ ಉಗ್ರರು, ಎರಡು ವರ್ಷಗಳ ಹಿಂದೆ ಆರೀಫ್‌ನನ್ನು ಪರಿಚಯ ಮಾಡಿಕೊಂಡಿದ್ದರು. ಧರ್ಮಕ್ಕೆ ಸಂಬಂಧಪಟ್ಟ ಬರಹಗಳು ಹಾಗೂ ವಿಡಿಯೊಗಳನ್ನು ಕಳುಹಿಸಿದ್ದರು. ಅದರಿಂದ ಪ್ರಚೋದನೆಗೆ ಒಳಗಾಗಿದ್ದ ಆರೀಫ್, ಉಗ್ರರ ಜೊತೆ ಒಡನಾಟ ಮುಂದುವರಿಸಿದ್ದ' ಎಂದು ಮೂಲಗಳು ತಿಳಿಸಿವೆ.

ಮನೆ ಖಾಲಿ ಮಾಡಲು ಸಿದ್ಧತೆ: 'ಆರೀಫ್‌ನ ಪತ್ನಿ ಹಾಗೂ ಇಬ್ಬರು ಮಕ್ಕಳು ಉತ್ತರ ಪ್ರದೇಶದಲ್ಲಿದ್ದರು. ವರ್ಷದ ಹಿಂದೆಯಷ್ಟೇ ಅವರನ್ನು ನಗರಕ್ಕೆ ಕರೆಸಿದ್ದ ಆರೀಫ್, ಥಣಿಸಂದ್ರದಲ್ಲಿ ಬಾಡಿಗೆ ಮನೆ ಮಾಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಧರ್ಮವನ್ನು ರಕ್ಷಿಸಲು ಹಾಗೂ ಭಾರತವನ್ನು ಇಸ್ಲಾಂ ದೇಶವನ್ನಾಗಿಸಲು ಹೋರಾಡಬೇಕಿದೆ. ಬೆಂಗಳೂರಿನಲ್ಲಿರುವ ಕೆಲ ಯುವಕರು ತರಬೇತಿಗಾಗಿ ಸಿರಿಯಾಗೆ ಬರುತ್ತಿದ್ದಾರೆ. ನೀನೂ ಸಿರಿಯಾಗೆ ಬಾ' ಎಂಬುದಾಗಿ ಅಲ್‌ಕೈದಾ ಸಂಘಟನೆ ಉಗ್ರರು ಹೇಳಿದ್ದರು. ಜೊತೆಗೆ, ವಿದೇಶದಲ್ಲಿದ್ದ ಕೆಲವರು ಆರೀಫ್ ಹೆಸರಿನಲ್ಲಿದ್ದ ಬ್ಯಾಂಕ್ ಖಾತೆಗೆ ಹಣ ಕಳುಹಿಸಿದ್ದರು' ಎಂದು ತಿಳಿಸಿವೆ.

'ಇರಾಕ್ ಮೂಲಕ ಸಿರಿಯಾಗೆ ಹೋಗಲು ಆರೀಫ್ ಸಿದ್ಧನಾಗಿದ್ದ. ಇರಾಕ್ ವೀಸಾ ಪಡೆಯಲು ಎರಡು ಬಾರಿ ಪ್ರಯತ್ನಿಸಿದ್ದ. ಆದರೆ, ವೀಸಾ ಸಿಕ್ಕಿರಲಿಲ್ಲ. ಇತ್ತೀಚೆಗೆ ಮೂರನೇ ಬಾರಿ ವೀಸಾಗೆ ಅರ್ಜಿ ಸಲ್ಲಿಸಿ ಕಾಯುತ್ತಿದ್ದ' ಎಂದು ಮೂಲಗಳು ಹೇಳಿವೆ.

ಎರಡೇ ದಿನಗಳಲ್ಲಿ ಮನೆ ಖಾಲಿ: 'ಆರೋಪಿ ಆರೀಫ್, ವರ್ಷದಿಂದ ಮನೆಯಿಂದಲೇ ಕೆಲಸ ಮಾಡುತ್ತಿದ್ದ. ಪತ್ನಿ ಹಾಗೂ ಮಕ್ಕಳನ್ನು ಇತ್ತೀಚೆಗೆ ಉತ್ತರಪ್ರದೇಶಕ್ಕೆ ಕಳುಹಿಸಿದ್ದ. 'ಸೋಮವಾರ ಮನೆ ಖಾಲಿ ಮಾಡುತ್ತೇನೆ' ಎಂಬುದಾಗಿ ಮಾಲೀಕರಿಗೆ ತಿಳಿಸಿದ್ದ. ಶುಕ್ರವಾರದಿಂದ ಮನೆ ಸಾಮಗ್ರಿ ಹೊಂದಿಸಿಕೊಳ್ಳುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಟ್ಟಡ ಗೋಡೆ ಕುಸಿದು ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಹಳೇ ಕಟ್ಟಡದ ಗೋಡೆ ಕುಸಿದು ಕಾರ್ಮಿಕರಿಬ್ಬರು ಮೃತಪಟ್ಟಿದ್ದಾರೆ.

ಪಶ್ಚಿಮ ಬಂಗಾಳದ ಸಿರಾಜುಲ್ಲಾ (32), ಇನಾಮುಲ್ಲಾ (31) ಮೃತರು.

'ಮಹಾಲಕ್ಷ್ಮಿ ಲೇಔಟ್‌ನ 10ನೇ ಅಡ್ಡರಸ್ತೆಯಲ್ಲಿ ಹಳೇ ಕಟ್ಟಡ ನೆಲಸಮಗೊಳಿಸುವ ಕೆಲಸ ನಡೆಯುತ್ತಿತ್ತು. ಸಿರಾಜುಲ್ಲಾ, ಇನಾಮುಲ್ಲಾ ಹಾಗೂ ಇತರೆ ಕಾರ್ಮಿಕರು ಕೆಲಸದಲ್ಲಿ ತೊಡಗಿದ್ದರು. ಶನಿವಾರ ಸಂಜೆ ಕಟ್ಟಡದ ಗೋಡೆ ಸಡಿಲಗೊಂಡು ಏಕಾಏಕಿ ಕುಸಿದು ಬಿದ್ದಿತ್ತು. ಅವಶೇಷಗಳಡಿ ಸಿಲುಕಿ ಸಿರಾಜುಲ್ಲಾ ಹಾಗೂ ಇನಾಮುಲ್ಲಾ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಂಡಿರಲಿಲ್ಲ. ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಕಟ್ಟಡ ಮಾಲೀಕ ಪ್ರಕಾಶ್ ಹಾಗೂ ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಸಿರಾಜುಲ್ಲಾ ಹಾಗೂ ಇನಾಮುಲ್ಲಾ, ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಶೆಡ್‌ನಲ್ಲಿ ವಾಸವಿದ್ದರು. ಇವರಿಬ್ಬರ ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿರುವ ಸಂಬಂಧಿಕರಿಗೆ ಮಾಹಿತಿ ತಿಳಿಸಲಾಗಿದೆ' ಎಂದು ಹೇಳಿದರು

ಬಾಲಕಿ ಎಳೆದೊಯ್ದು ದೌರ್ಜನ್ಯ

ಬೆಂಗಳೂರು: ಎಂಟು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ 20 ವರ್ಷದ ಯುವಕನನ್ನು ವಿವೇಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಾಲಕಿ ಮೇಲಿನ ದೌರ್ಜನ್ಯದ ಬಗ್ಗೆ ತಾಯಿ ದೂರು ನೀಡಿದ್ದಾರೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಆರೋಪಿಯನ್ನು ಬಂಧಿಸಲಾಗಿದೆ. ಮೆಕ್ಯಾನಿಕ್ ಆಗಿದ್ದ ಆರೋಪಿ, ಬಾಲಕಿಗೆ ಪರಿಚಿತ' ಎಂದು ಪೊಲೀಸರು ಹೇಳಿದರು.

'ಬಾಲಕಿಯ ಪೋಷಕರು ಬಿಹಾರದವರು. ಕೆಲಸಕ್ಕಾಗಿ ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದಾರೆ. ಬಾಲಕಿಯು ಸ್ಥಳೀಯ ಶಾಲೆಯ ವಿದ್ಯಾರ್ಥಿನಿ. ಫೆ. 9ರಂದು ಬೆಳಿಗ್ಗೆ ಬಾಲಕಿ ಶಾಲೆಗೆ ಹೊರಟಿದ್ದಳು. ಇದೇ ವೇಳೆ ಆಕೆಯನ್ನು ಅಪಹರಿಸಿದ್ದ ಆರೋಪಿ, ಗ್ಯಾರೇಜ್‌ಗೆ ಎಳೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದ' ಎಂದು ಪೊಲೀಸರು ತಿಳಿಸಿದರು.

ಆದಾಯ ತೆರಿಗೆ ನಿರೀಕ್ಷಕರ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ತೆರಿಗೆ ನಿರೀಕ್ಷಕ ದೇವೇಂದ್ರ ದುಬೆ (40) ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ರೈಲು ಹಳಿ ಮೇಲೆ ಅವರ ಮೃತದೇಹ ಇತ್ತೀಚೆಗೆ ಪತ್ತೆಯಾಗಿದೆ.

ಉತ್ತರ ಪ್ರದೇಶದ ದೇವೇಂದ್ರ, ನಗರದ ಆದಾಯ ತೆರಿಗೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಕುಟುಂಬದವರ ಜೊತೆ ಯಶವಂತಪುರ ಬಳಿ ವಾಸವಿದ್ದರು.

'ಜ. 20ರಂದು ಮನೆಯಿಂದ ಹೊರಬಂದಿದ್ದ ದೇವೇಂದ್ರ, ವಾಪಸ್ ಹೋಗಿರಲಿಲ್ಲ. ಗಾಬರಿಗೊಂಡಿದ್ದ ಪತ್ನಿ ಹಾಗೂ ಕುಟುಂಬದವರು, ಹಲವೆಡೆ ಹುಡುಕಾಡಿದ್ದರು. ಯಾವುದೇ ಸುಳಿವು ಸಿಕ್ಕಿರಲಿಲ್ಲ. ಯಶವಂತಪುರ ಠಾಣೆಗೆ ಜ. 23ರಂದು ದೂರು ನೀಡಿದ್ದರು. ಅಂದೇ ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಸಮೀಪದ ಹಳಿ ಮೇಲೆ ಮೃತದೇಹ ಪತ್ತೆಯಾಗಿದೆ' ಎಂದು ರೈಲ್ವೆ ಪೊಲೀಸರು ಹೇಳಿದರು.

'ರೈಲು ಹರಿದು ದೇವೇಂದ್ರ ಅವರು ಮೃತಪಟ್ಟಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಇದು ಆತ್ಮಹತ್ಯೆಯೋ ಅಥವಾ ಬೇರೆ ಏನಾದರೂ ಕಾರಣ ವಿದೆಯಾ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದರು.

ಪತ್ನಿ ಜೊತೆ ಜಗಳ: 'ದೇವೇಂದ್ರ ಹಾಗೂ ಪತ್ನಿ ನಡುವೆ ಕೌಟುಂಬಿಕ ಕಾರಣಕ್ಕಾಗಿ ವೈಮನಸ್ಸು ಮೂಡಿತ್ತು. ನಿತ್ಯವೂ ಜಗಳವಾಗುತ್ತಿದ್ದ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸರು ಹೇಳಿದರು.

'ಜ. 20ರಂದು ಪತ್ನಿ ಜೊತೆ ಜಗಳ ಮಾಡಿದ್ದ ದೇವೇಂದ್ರ, 'ನಾನು ಬದುಕಿರುವುದಿಲ್ಲ. ಸಾಯುತ್ತೇನೆ' ಎಂಬುದಾಗಿ ಹೇಳಿ ಮನೆಯಿಂದ ಹೊರಹೋಗಿದ್ದರೆಂದು ಗೊತ್ತಾಗಿದೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಚಾಲಕ, ಡೆಲಿವರಿ ಬಾಯ್ ಕೊಲೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ರಾತ್ರಿ ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಟೆಂಪೊ ಚಾಲಕ ಮುನಿಯಪ್ಪ (45) ಹಾಗೂ ಡೆಲಿವರಿ ಬಾಯ್ ಶರತ್ (25) ಕೊಲೆಯಾದವರು.

ಬಾರ್‌ನಲ್ಲಿ ಕೊಲೆ: 'ವರ್ತೂರು ಬಳಿಯ ಬಾರ್‌ವೊಂದರಲ್ಲಿ ಮುನಿಯಪ್ಪ ಅವರನ್ನು ಕೊಲೆ ಮಾಡಲಾಗಿದೆ. ಕೃತ್ಯ ಎಸಗಿದ್ದ ಆರೋಪದಡಿ ತರಕಾರಿ ವ್ಯಾಪಾರಿ ಶ್ರೀಧರ್ (25) ಎಂಬಾತನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮುನಿಯಪ್ಪ ಹಾಗೂ ಶ್ರೀಧರ್ ದೊಮ್ಮಸಂದ್ರ ಬಡಾವಣೆ ನಿವಾಸಿಗಳು. ಅಕ್ಕ-ಪಕ್ಕದ ಮನೆಯವರು ಮದ್ಯವ್ಯಸನಿ ಆಗಿದ್ದ ಶ್ರೀಧರ್, ನಿತ್ಯವೂ ಕುಡಿಯುತ್ತಿದ್ದ. ಇದನ್ನು ಮುನಿಯಪ್ಪ, ಆತನ ತಂದೆಗೆ ವಿಷಯ ತಿಳಿಸಿದ್ದರು. ಇದರಿಂದ ಸಿಟ್ಟಾಗಿದ್ದ ಶ್ರೀಧರ್, ಬಾರ್‌ನಲ್ಲಿ ಮುನಿಯಪ್ಪ ಜೊತೆ ಜಗಳ ತೆಗೆದು ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ಹಳೇ ದ್ವೇಷದಿಂದ ಕೊಲೆ: 'ಕೋಣನಕುಂಟೆ ವೃತ್ತದಲ್ಲಿ ಶರತ್ (25) ಅವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಸ್ನೇಹಿತರಾದ ಲೋಕೇಶ್, ಸಂತೋಷ್ ಅವರನ್ನು ಬಂಧಿಸಲಾಗಿದೆ' ಎಂದು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿ ಶರತ್, ಡೆಲಿವರಿ ಬಾಯ್. ಆರೋಪಿ ಲೋಕೇಶ್, ಆಟೊಮೊಬೈಲ್ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ಹಣಕಾಸು ವಿಚಾರವಾಗಿ ಇಬ್ಬರ ನಡುವೆ ಆಗಾಗ ಜಗಳವಾಗುತ್ತಿತ್ತು. ಶುಕ್ರವಾರ ಇಬ್ಬರ ನಡುವೆ ಮಾರಾಮಾರಿ ನಡೆದಿತ್ತು. ಇದೇ ವೇಳೆಯೇ ಚಾಕುವಿನಿಂದ ಇರಿದು ಶರತ್ ಅವರನ್ನು ಕೊಲೆ ಮಾಡಲಾಗಿದೆ' ಎಂದರು.

ನ್ಯಾಯಾಂಗ ನಿಂದನೆ; ವಕೀಲ ಬಿಡುಗಡೆ

ಬೆಂಗಳೂರು: ಹೈಕೋರ್ಟ್ ನ್ಯಾಯಮೂರ್ತಿಗಳು ಮತ್ತು ನ್ಯಾಯಾಂಗದ ವಿರುದ್ಧ ಅವಹೇಳನಕಾರಿ ವರ್ತನೆ ತೋರಿಸಿದ ಆರೋಪದಡಿ ಪೊಲೀಸ್ ಬಂಧನದಲ್ಲಿದ್ದ ವಕೀಲ ಕೆ.ಎಸ್. ಅನಿಲ್ ಅವರ ಬಿಡುಗಡೆಗೆ ಹೈಕೋರ್ಟ್ ಆದೇಶಿಸಿದೆ.

ಅನಿಲ್ ವಿರುದ್ಧ 2019ರಲ್ಲಿ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ (ಫೆ.10) ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅನಿಲ್ ನ್ಯಾಯಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿ, 'ನಾನು ವಿಚಾರಣಾ ನ್ಯಾಯಾಲಯದ ಕಿರಿಯ ವಕೀಲನಾಗಿದ್ದು, ದೈಹಿಕ ನೋವು, ಮಾನಸಿಕ ಒತ್ತಡ ಮತ್ತು ಇತರ ಕಾಯಿಲೆಗಳಿಂದ ಬಳಲುತ್ತಿದ್ದೇನೆ. ನನಗೆ ಇಂಗ್ಲಿಷ್‌ನಲ್ಲಿ ಅಷ್ಟೊಂದು ಪ್ರಭುತ್ವವಿಲ್ಲ. ಅಂತೆಯೇ, ಹೈಕೋರ್ಟ್ ವಕೀಲಿಕೆ ಪ್ರಕ್ರಿಯೆಗಳ ಪರಿಚಯವೂ ಕಡಿಮೆ. ಹೀಗಾಗಿ ನನ್ನ ವರ್ತನೆಗೆ ಬೇಷರತ್ ಕ್ಷಮೆ ಕೋರುತ್ತೇನೆ' ಎಂದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಭವಿಷ್ಯದಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು' ಎಂಬ ಎಚ್ಚರಿಕೆಯೊಂದಿಗೆ ಅವರನ್ನು ಬಿಡುಗಡೆ ಮಾಡುವಂತೆ ಆದೇಶಿಸಿತು.

ಮೊಬೈಲ್ ಕಿತ್ತೊಯ್ಯುವ ವೇಳೆ ಅಪಘಾತ: ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯ ಬಾಲಗಂಗಾಧರನಾಥ ಸ್ವಾಮೀಜಿ (ಬಿಜಿಎಸ್) ಮೇಲ್ಸೇತುವೆಯಲ್ಲಿ ಶುಕ್ರವಾರ ರಾತ್ರಿ ಅಪಘಾತ ಸಂಭವಿಸಿದ್ದು, ದ್ವಿಚಕ್ರ ವಾಹನ ಸವಾರ ಕಬೀರ್ ಪಾಷಾ (19) ಎಂಬುವರು ಮೃತಪಟ್ಟಿದ್ದಾರೆ.

'ಮೇಲ್ಸೇತುವೆಯ ರಸ್ತೆ ವಿಭಜಕಕ್ಕೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದು ಈ ಅವಘಡ ಸಂಭವಿಸಿದೆ. ಕಬೀರ್ ಪಾಷಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಬೀರ್ ಜೊತೆಗಿದ್ದ ಸ್ನೇಹಿತನೊಬ್ಬ ತೀವ್ರ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಸಿಟಿ ಮಾರ್ಕೆಟ್ ಸಂಚಾರ ಪೊಲೀಸರು ಹೇಳಿದರು.

'ಕಬೀರ್ ಪಾಷಾ ಹಾಗೂ ಸ್ನೇಹಿತ ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ. ಅತಿ ವೇಗವಾಗಿ ದ್ವಿಚಕ್ರ ವಾಹನ ಚಲಾಯಿಸಿದ್ದೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ತಿಳಿಸಿದರು.

ಎಂಟು ಮೊಬೈಲ್ ಪತ್ತೆ: 'ಅಪಘಾತವಾಗಿದ್ದ ದ್ವಿಚಕ್ರ ವಾಹನದಲ್ಲಿ ಎಂಟು ಮೊಬೈಲ್‌ಗಳು ಸಿಕ್ಕಿವೆ. ಕಬೀರ್ ಪಾಷಾ ಹಾಗೂ ಸ್ನೇಹಿತ, ಸಾರ್ವಜನಿಕರ ಮೊಬೈಲ್ ಕಿತ್ತುಕೊಂಡು ಪರಾರಿಯಾಗುತ್ತಿದ್ದ ವೇಳೆಯಲ್ಲಿ ಅಪಘಾತ ಸಂಭವಿಸಿರುವ ಮಾಹಿತಿ ಇದೆ' ಎಂದು ಪೊಲೀಸರು ಹೇಳಿದರು.

'ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿ ಎದುರು ಶುಕ್ರವಾರ ಮಹಿಳೆಯೊಬ್ಬರ ಮೊಬೈಲ್ ಕಿತ್ತೊಯ್ಯಲಾಗಿದೆ. ಕಬೀರ್ ಪಾಷಾ ಹಾಗೂ ಸ್ನೇಹಿತ ಈ ಕೃತ್ಯ ಎಸಗಿರುವ ಅನುಮಾನವಿದೆ. ವಾಹನದಲ್ಲಿ ಸಿಕ್ಕಿರುವ ಮೊಬೈಲ್‌ಗಳ ಮಾಲೀಕರನ್ನು ಪತ್ತೆ ಮಾಡಲಾಗುತ್ತಿದೆ. ಗಾಯಾಳು ಹೇಳಿಕೆ ಪಡೆಯಬೇಕಿದೆ' ಎಂದು ತಿಳಿಸಿದರು.

'ಶಿಕ್ಷಣದಲ್ಲಿ ತಂತ್ರಜ್ಞಾನ ಅಳವಡಿಕೆ ಅಗತ್ಯ'

ಬೆಂಗಳೂರು: 'ಜಗತ್ತು ಅತ್ಯಂತ ವೇಗವಾಗಿ ಬದಲಾಗುತ್ತಿದ್ದು, ಮುಂದಿನ ಪೀಳಿಗೆಯನ್ನು ಅದಕ್ಕೆ ತಕ್ಕಂತೆ ಸಜ್ಜುಗೊಳಿಸಬೇಕು. ಶಿಕ್ಷಣದಲ್ಲೂ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು' ಎಂದು ನಿವೃತ್ತ ಡಿಜಿಪಿ ಶಂಕರ್ ಬಿದರಿ ಹೇಳಿದರು.

ನಗರದಲ್ಲಿ ಶನಿವಾರ ನಡೆದ ವೇದಿಕ್ ಇ-ಸ್ಕೂಲ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

'ಇ-ಸ್ಕೂಲ್ ಮೂಲಕ ಕಲಿಕಾ ವ್ಯವಸ್ಥೆಯನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವ ಗುರಿ ಹೊಂದಲಾಗಿದೆ. ವೇದಿಕ್ ಶಾಲೆಯು ಅತ್ಯಂತ ಸುಧಾರಿತ ತಂತ್ರಜ್ಞಾನ ಮತ್ತು ಶೈಕ್ಷಣಿಕ ಟೂಲ್ ಬಳಸಿಕೊಂಡು ವಿದ್ಯಾರ್ಥಿಗಳಿಗೆ ವಿಶ್ವ ದರ್ಜೆಯ ಶಿಕ್ಷಣ ನೀಡುತ್ತಿದೆ' ಎಂದರು.

ಕೇರಳದ ಕಣ್ಣೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಬಾಬು ಸೆಬಾಸ್ಟಿನ್ ಮತ್ತು ವೇದಿಕ್ ಇ-ಸ್ಕೂಲ್ ಸಿಇಒ ಜೇಮ್ಸ್ ಮಟ್ಟಮ್ ಮಾತನಾಡಿದರು.

ಬಯಲಾಟ ಕಲಾವಿದ ಶಂಕರಪ್ಪ ನಿಧನ



ಅಳವಂಡಿ: ಕೊಪ್ಪಳ ತಾಲ್ಲೂಕಿನ ಬೆಟಗೇರಿ ಸಮೀಪದ ಮೋರನಾಳ ಗ್ರಾಮದ ಬಯಲಾಟ ಕಲಾವಿದ ಶಂಕರಪ್ಪ ಹೊರಪೇಟೆ (63) ಹೃದಯ ಸಂಬಂಧಿತ ಸಮಸ್ಯೆಯಿಂದ ಶನಿವಾರ ನಿಧನರಾದರು.

ಮೃತರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಭಾನುವಾರ ಸ್ವಗ್ರಾಮ ಮೋರನಾಳದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಅವರು ವಿವಿಧ ದೊಡ್ಡಾಟಗ ಳಲ್ಲಿ ಭೀಮಾ, ಆಂಜನೇಯ, ಲವಕುಶ, ಸೀತಾದೇವಿ ಹೀಗೆ ವಿವಿಧ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. 180 ಬಯಲಾಟ ಪ್ರದರ್ಶನಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ.

ಅವರಿಗೆ 2018ರಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿ ಪ್ರಶಸ್ತಿ ದೊರೆತಿದೆ. 2022ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿತ್ತು.

ಚಿತ್ರಾವಳಿ



ಕೆ.ಆರ್.ಪುರ ಸಮೀಪದ ಬಸವನಪುರ ವಾರ್ಡ್‌ನ ಹ್ಯಾಪಿ ಗಾರ್ಡನ್ ಬಡಾವಣೆಯಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ರಸ್ತೆ ಡಾಂಬರೀಕರಣಕ್ಕೆ ಚಾಲನೆ ನೀಡಿದರು. ಮಾಜಿ ಪಾಲಿಕೆ ಸದಸ್ಯ ಜಯಪ್ರಕಾಶ್, ಬಿಜೆಪಿ ಮುಖಂಡರಾದ ಮೇಡಹಳ್ಳಿ ಕೃಷ್ಣಮೂರ್ತಿ, ಉದಯ್ ಕುಮಾರ್, ರಂಗಸ್ವಾಮಿ, ಶಿವಕುಮಾರ್ ಇದ್ದರು.



ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಗುರು ದೇಶಪಾಂಡೆ ಸಂಗೀತ ಸಭಾ ಶನಿವಾರ ಆಯೋಜಿಸಿದ್ದ ರಾತ್ರಿಪೂರ್ತಿ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಸಿದ್ಧಾರ್ಥ ಬೆಲ್ಮಣ್ಣು ಗಾಯನ ಪ್ರಸ್ತುತ ಪಡಿಸಿದರು. ಪ್ರಜಾವಾಣಿ ಚಿತ್ರ

ಸಂಕಷ್ಟಕ್ಕೆ ಹಾಪ್‌ಕಾಮ್ಸ್ ಏದುಸಿರು

ಒಂದನೇ ಪುಟದಿಂದ..

ಮುಕ್ತ ಮಾರುಕಟ್ಟೆಯಿಂದ ಎದುರಾಗಿರುವ ಸ್ಪರ್ಧೆಗೆ ಅನುಗುಣವಾಗಿ ತನ್ನ ವಹಿವಾಟು ಶೈಲಿಯನ್ನು ಪರಿಷ್ಕರಿಸಿಕೊಳ್ಳದ ಕಾರಣ ಖಾಸಗಿ ಕಂಪನಿಗಳ ಪೈಪೋಟಿಯೂ ಹೊಡೆತ ನೀಡಿದೆ. ಪರಿಣಾಮ, ನಾಲ್ಕು ಜಿಲ್ಲೆಗಳ ವ್ಯಾಪ್ತಿ ಒಳಗೊಂಡ ಬೆಂಗಳೂರು ಹಾಪ್‌ಕಾಮ್ಸ್ ಸೇರಿದಂತೆ ಬಹುತೇಕ ಜಿಲ್ಲಾ ಹಾಪ್‌ಕಾಮ್ಸ್‌ಗಳೂ ನಷ್ಟದಲ್ಲಿವೆ.

ಚಟುವಟಿಕೆಗಳು ವಿಸ್ತರಣೆ ಆಗದಿರುವುದು, ಉತ್ಪನ್ನಗಳ ದಾಸ್ತಾನಿಗೆ ಹೊಸ ತಂತ್ರಜ್ಞಾನಗಳ ಅಳವಡಿಕೆಗೆ ನಿರಾಸಕ್ತಿ, ಮಾರುಕಟ್ಟೆ ಏರಿಳಿತಗಳ ಅಸಮರ್ಪಕ ನಿರ್ವಹಣೆ, ವ್ಯವಸ್ಥಿತ ಪೂರೈಕೆ ಜಾಲ ರೂಪಿಸದೇ ಇರುವುದು, ಕೌಶಲರಹಿತ ಸಿಬ್ಬಂದಿ ಹಾಪ್‌ಕಾಮ್ಸ್ ಏಳಿಗೆಗೆ ಪೆಟ್ಟು ನೀಡಿದೆ.

ಕಾರ್ಪೊರೇಟ್ ಶೈಲಿಯ ಖಾಸಗಿ ಕಂಪನಿಗಳಲ್ಲಿ ಗುರುತಿಸಿದ ರೈತರಿಂದ ಖಾಸಗಿಯವರು ತ್ವರಿತವಾಗಿ ಹಣ್ಣು, ತರಕಾರಿ ಖರೀದಿಸುತ್ತಾರೆ. ಖರೀದಿಸುವ ಪ್ರಮಾಣಕ್ಕೆ ಮಿತಿ ಇಲ್ಲ. ತಕ್ಷಣ ನಗದು ಪಾವತಿ ಆಗಲಿದೆ. ಈ ಅಂತರವೇ ಹಾಪ್‌ಕಾಮ್ಸ್‌ಗೆ ಹಿನ್ನಡೆಯಾಗಿದೆ. ಹಾಪ್‌ಕಾಮ್ಸ್ ರೈತಸ್ನೇಹಿ ಅಲ್ಲ ಎಂಬ ಭಾವನೆ ಬೆಳೆಗಾರರಲ್ಲಿ ಬೇರೂರಿದೆ.

ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿ ಒಳಗೊಂಡು ಒಂದು ಹಾಪ್‌ಕಾಮ್ಸ್ ಸಂಸ್ಥೆ ಇದೆ. ಉಳಿದಂತೆ 23 ಜಿಲ್ಲೆಗಳಲ್ಲಿ ತಲಾ ಒಂದು ಹಾಪ್‌ಕಾಮ್ಸ್ ಕಾರ್ಯನಿರ್ವಹಿಸುತ್ತಿವೆ.

ವಾರ್ಷಿಕ ₹ 100 ಕೋಟಿ ವಹಿವಾಟು ನಡೆಸುವ ಬೆಂಗಳೂರು ಹಾಪ್‌ಕಾಮ್ಸ್ 2020–21 ಮತ್ತು 2021–22ರಲ್ಲಿ ಕ್ರಮವಾಗಿ ₹ 2.63 ಕೋಟಿ, ₹ 3.35 ಕೋಟಿ ನಷ್ಟ ಅನುಭವಿಸಿದೆ. ಜಿಲ್ಲಾ ಮಟ್ಟದ ಹಾಪ್‌ಕಾಮ್ಸ್‌ಗಳ ಸ್ಥಿತಿಯೂ ಭಿನ್ನವಾಗಿಲ್ಲ. 2020–21 ಮತ್ತು 2021–22ರಲ್ಲಿ ಕ್ರಮವಾಗಿ ₹ 1.08 ಕೋಟಿ ಮತ್ತು ₹ 83 ಲಕ್ಷ ನಷ್ಟವನ್ನು ಜಿಲ್ಲಾ ಹಾಪ್‌ಕಾಮ್ಸ್‌ಗಳು ಅನುಭವಿಸಿದೆ.

ಎರಡು ವರ್ಷಗಳ ಹಿಂದೆ ಬೆಂಗಳೂರು ವ್ಯಾಪ್ತಿಯಲ್ಲಿ 316, ಜಿಲ್ಲೆಗಳಲ್ಲಿ 262 ಹಾಪ್‌ಕಾಮ್ಸ್ ಮಳಿಗೆ ಇದ್ದವು. ನಷ್ಟ, ಮೂಲಸೌಲಭ್ಯ ಕೊರತೆಯಿಂದ ಮಳಿಗೆಗಳ ಸಂಖ್ಯೆ ಕ್ರಮವಾಗಿ ಬೆಂಗಳೂರಿನಲ್ಲಿ 209, ಜಿಲ್ಲೆಗಳಲ್ಲಿ 218ಕ್ಕೆ ಕುಸಿದಿದೆ.

ರಿಲಯನ್ಸ್ ಫ್ರೆಷ್, ಮೋರ್ ಮುಂತಾದ ಖಾಸಗಿ ಕಂಪನಿಗಳು ಆಕರ್ಷಕ ಮಳಿಗೆಗಳನ್ನು ರೂಪಿಸಿ, ವಾರಾಂತ್ಯದ ರಿಯಾಯಿತಿ ಹೆಸರಿನಲ್ಲಿ ಗ್ರಾಹಕರನ್ನು ಸೆಳೆಯುತ್ತಿವೆ. ಜಮೀನುಗಳಿಗೆ ತೆರಳಿ ರೈತರಿಂದ ನೇರವಾಗಿ ಹಣ್ಣು, ತರಕಾರಿಗಳನ್ನು ಖರೀದಿಸುತ್ತಿವೆ. ಹಾಪ್‌ಕಾಮ್ಸ್ ಇಂಥ ಪ್ರಯತ್ನಕ್ಕೆ ಕೈ ಹಾಕಿಲ್ಲ. ಗ್ರಾಹಕರ ಮನೆಗೇ ತಾಜಾ ಹಣ್ಣು, ತರಕಾರಿಗಳನ್ನು ತಲುಪಿಸಲು ಹಾಪ್‌ಕಾಮ್ಸ್ ಆರಂಭಿಸಿದ್ದ ಆನ್‌ಲೈನ್ ಸೇವೆಯೂ ಸ್ಥಗಿತಗೊಂಡಿದೆ.

ಖಾಸಗಿ ಕಂಪನಿಗಳಿಗೆ ಪೈಪೋಟಿ ನೀಡಲು ಬೆಂಗಳೂರು ಹಾಪ್‌ಕಾಮ್ಸ್ ಆರಂಭಿಸಿದ್ದ ಆಧುನಿಕ ಮಳಿಗೆ ‘ಹಾರ್ಟಿ ಬಜಾರ್’ ನಿರೀಕ್ಷಿತ ಯಶಸ್ಸು ಕಂಡಿಲ್ಲ. ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ, ಕಸ್ತೂರಿ ನಗರ, ಸದಾಶಿವ ನಗರದಲ್ಲಿ ಹಾರ್ಟಿ ಬಜಾರ್ ನಷ್ಟದಲ್ಲಿವೆ. ಇನ್ನೊಂದೆಡೆ ಸಂಸ್ಥೆ ಸಿಬ್ಬಂದಿ ಸ್ನೇಹಿಯಾಗಿಯೂ ಉಳಿದಿಲ್ಲ. ನಿವೃತ್ತ ಸಿಬ್ಬಂದಿಗೆ ಆರ್ಥಿಕ ಸೌಲಭ್ಯ ಒದಗಿಸಲೂ ಸಂಘದಲ್ಲಿ ನಿಧಿ ಇಲ್ಲ. 150 ನಿವೃತ್ತ ನೌಕರರಿಗೆ ₹ 5 ಕೋಟಿ ಪಾವತಿಸಲೂ ಆಗದಷ್ಟು ಸಂಕಷ್ಟದಲ್ಲಿದೆ. ಸಮಾಧಾನದ ಸಂಗತಿ ಎಂದರೆ ಕೋವಿಡ್ ಅವಧಿಯಲ್ಲಿ ಉತ್ತಮ ವಹಿವಾಟು ನಡೆಸಿ ಒಂದಷ್ಟು ಲಾಭ ಗಳಿಸಿದೆ.

‘ಅಲ್ಪಾವಧಿಯಲ್ಲಿ ಹಾಳಾಗುವ ಹಾಲನ್ನು ಸಂಸ್ಕರಿಸಿ, ಮಾರಾಟ ಮಾಡಿ ಹಾಲು ಒಕ್ಕೂಟಗಳು ಲಾಭಗಳಿಸುತ್ತವೆ. ನಾಲ್ಕೈದು ದಿನ ಉಳಿಯುವ ತರಕಾರಿ, ಹಣ್ಣಿನಿಂದ ಲಾಭ ಗಳಿಕೆ ಸಾಧ್ಯವಿಲ್ಲವೇ? ಚುನಾಯಿತ ಸಂಸ್ಥೆ, ಅಧಿಕಾರಿಗಳ ನಿರಾಸಕ್ತಿಯಿಂದ ಹಾಪ್‌ಕಾಮ್ಸ್‌ಗಳು ರೈತ ಸ್ನೇಹಿಯಾಗಿಲ್ಲ. ಕೋವಿಡ್ ಸಮಯದಲ್ಲಿ ಹಾಪ್‌ಕಾಮ್ಸ್ ಬಿಟ್ಟು ಬೇರೆಲ್ಲಾ ಅಂಗಡಿಗಳು ಮುಚ್ಚಿದ್ದವು. ಆಗ ಕೋಟ್ಯಂತರ ರೂಪಾಯಿ ಲಾಭ ಬಂತು. ಅವೆಲ್ಲಾ ಎಲ್ಲಿಗೆ ಹೋಯಿತು ಎನ್ನುವ ಪ್ರಶ್ನೆಗೆ ಉತ್ತರವಿಲ್ಲ’ ಎಂದು ತೋಟಗಾರಿಕೆ ಇಲಾಖೆಯ ನಿವೃತ್ತ ಅಧಿಕಾರಿಯೊಬ್ಬರು ತಿಳಿಸಿದರು.

ಖರೀದಿ, ಕಾರ್ಯವೈಖರಿ ಹೇಗೆ?: ₹ 500 ಶುಲ್ಕ ಪಾವತಿಸಿ ಹಾಪ್‌ಕಾಮ್ಸ್ ಸದಸ್ಯತ್ವ ಪಡೆಯಬೇಕು. ನೋಂದಾಯಿತ ಸದಸ್ಯರಿಂದ ಬೇಡಿಕೆಗೆ ಅನುಗುಣವಾಗಿ ಸಂಸ್ಥೆ ಹಣ್ಣು, ತರಕಾರಿಗಳನ್ನು ಖರೀದಿಸುತ್ತದೆ. ತರಕಾರಿ, ಹಣ್ಣುಗಳ ಗುಣಮಟ್ಟ, ಗಾತ್ರ ಹಾಗೂ ಬಣ್ಣವನ್ನು ಆಧರಿಸಿ ವರ್ಗೀಕರಣ ಮಾಡಲಾಗುತ್ತದೆ, ಇದೇ ಆಧಾರದಲ್ಲಿ ದರವು ನಿಗದಿಯಾಗುತ್ತದೆ. ಸದಸ್ಯರಾಗದಿದ್ದರೆ ಸಂಸ್ಥೆಯು ಖರೀದಿ ಮಾಡುವುದಿಲ್ಲ.

ಇದೀಗ ನಷ್ಟದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳನ್ನು ಖಾಸಗಿಯವರಿಗೆ ಫ್ರ್ಯಾಂಚೈಸಿ ನೀಡಲಾಗುತ್ತಿದೆ. ಸಂಸ್ಥೆ, ವ್ಯಕ್ತಿಗಳು ಫ್ರ್ಯಾಂಚೈಸಿ ಪಡೆಯಬಹುದು. ಇದಕ್ಕಾಗಿ ₹ 1 ಲಕ್ಷ ಠೇವಣಿ ಇಡಬೇಕು. ಪ್ರತಿ ತಿಂಗಳು ₹1 ಲಕ್ಷ ಮೊತ್ತದ ತರಕಾರಿ, ಹಣ್ಣುಗಳನ್ನು ಖರೀದಿಸುವುದು ಕಡ್ಡಾಯ. ಲಾಭಾಂಶದಲ್ಲಿ ಹಂಚಿಕೆ ಪದ್ಧತಿ ಇರುತ್ತದೆ.

‘ಬಹುತೇಕ ಹಾಪ್‌ಕಾಮ್ಸ್‌ಗಳಲ್ಲಿ ಗುತ್ತಿಗೆ ನೌಕರರು ಇದ್ದಾರೆ. ಖಾಲಿ ಹುದ್ದೆಗಳು ಭರ್ತಿಯಾಗಿಲ್ಲ. ಚುನಾಯಿತ ಸಹಕಾರ ಸಂಘಗಳು ರಾಜಕಾರಣದಲ್ಲಿ ಮುಳುಗಿರುವ ಕಾರಣ ಸಂಸ್ಥೆ ರೈತಸ್ನೇಹಿಯಾಗಿಲ್ಲ. ಸರ್ಕಾರ ಬಿಡುಗಡೆ ಮಾಡುವ ಹಣಕ್ಕೆ ಸರಿಯಾಗಿ ಲೆಕ್ಕ ಕೇಳದ ಕಾರಣ ಹಾಪ್‌ಕಾಮ್ಸ್ ನಷ್ಟ ಹೊಂದುತ್ತಿವೆ’ ಎನ್ನುತ್ತಾರೆ ಹಾಪ್‌ಕಾಮ್ಸ್ ಮಾಜಿ ನಿರ್ದೇಶಕ ವಿಜಯ್‌ಕುಮಾರ್.

ಸುಧಾರಣೆಗೆ ಏನು ಮಾಡಬೇಕು?: ಹಾಪ್‌ಕಾಮ್ಸ್ ಅನ್ನು ಲಾಭದ ಹಾದಿಗೆ ತರಬೇಕಾದರೆ, ‘ಮಳಿಗೆಗಳಲ್ಲಿ ತರಕಾರಿ, ಹಣ್ಣುಗಳನ್ನು ದೀರ್ಘಕಾಲ ಸಂಗ್ರಹಿಸುವ ವ್ಯವಸ್ಥೆ ಮಾಡಬೇಕು. ಸಾರಿಗೆ ವೆಚ್ಚ ಉಳಿಸಲು ವಾರಕ್ಕೆ ಬೇಕಾಗುವಷ್ಟು ಹಣ್ಣು, ತರಕಾರಿ ದಾಸ್ತಾನು ಇರುವಂತೆ ಕ್ರಮವಹಿಸಬೇಕು, ತೋಟಗಾರಿಕೆ ಬೆಳೆಗಾರರಿಗೆ ಸದಸ್ಯತ್ವ ನೀಡುವ ಮೂಲಕ ಸದಸ್ಯರ ಸಂಖ್ಯೆ ಹೆಚ್ಚಿಸಬೇಕು, ಕೋಲ್ಡ್ ಸ್ಟೋರೇಜ್‌ಗಳ ನಿರ್ಮಾಣ, ಮಳಿಗೆ ಹಾಗೂ ಸಂಗ್ರಹಣಾ ಕೇಂದ್ರದ ಉನ್ನತೀಕರಣವಾಗಬೇಕು. ‘ಹಾಪ್‌ಕಾಮ್ಸ್ ನಮ್ಮದು’ ಎಂಬ ಭಾವನೆ ಬೆಳೆಸಬೇಕು’ ಎನ್ನುತ್ತಾರೆ ಹಾಪ್‌ಕಾಮ್ಸ್‌ನ ನಿವೃತ್ತ ಅಧಿಕಾರಿಯೊಬ್ಬರು.

ಶೈತ್ಯಾಗಾರಗಳ ಕೊರತೆ: ದರ ಕುಸಿದಾಗ ಲಭ್ಯವಿರುವ ತರಕಾರಿ, ಹಣ್ಣು ದಾಸ್ತಾನು ಮಾಡಿ, ಶೇಖರಿಸಿ ನಂತರ ಬೆಲೆ ಏರಿಕೆ ಅಥವಾ ಸ್ಥಿರತೆ ಕಾಯ್ದುಕೊಂಡಾಗ ಮಾರಲು ಶೈತ್ಯಾಗಾರಗಳ ಅಗತ್ಯವಿದೆ. ಸದ್ಯ ರಾಜಧಾನಿ ಸೇರಿದಂತೆ ಜಿಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ ಇಂತಹ ವ್ಯವಸ್ಥೆ ಇಲ್ಲ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಮೂರು ಸಣ್ಣ ಪ್ರಮಾಣದ ಕೋಲ್ಡ್ ಸ್ಟೋರೇಜ್ ಮಾತ್ರವೇ ಕಾರ್ಯನಿರ್ವಹಿಸುತ್ತಿದೆ.

‘ಮೂರು ಟನ್ ದಾಸ್ತಾನು ಸಾಮರ್ಥ್ಯದ ಕೋಲ್ಡ್ ಸ್ಟೋರೇಜ್ ಸ್ಥಾಪಿಸಲು ಅಂದಾಜು ₹ 5 ಲಕ್ಷ (ಜಾಗ ಹೊರತುಪಡಿಸಿ) ಅಗತ್ಯ. ಘಟಕ ಸ್ಥಾಪಿಸುವ ಕುರಿತಂತೆ ಹಲವು ವರ್ಷಗಳಿಂದ ಮನವಿ ಮಾಡಿದ್ದರೂ ಸರ್ಕಾರ ಸ್ಪಂದಿಸಿಲ್ಲ’ ಎಂಬುದು ಕೆಎಚ್‌ಎಫ್ ಅಧ್ಯಕ್ಷ ಬಿ.ಡಿ.ಭೂಕಾಂತ್ ಅವರ ಆರೋಪ. ಆದರೆ ‘ಜಿಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ ವಹಿವಾಟು ಕಡಿಮೆ ಇದೆ. ಕೋಲ್ಡ್ ಸ್ಟೋರೇಜ್‌ಗಳ ಸ್ಥಾಪನೆ ಕಾರ್ಯಸಾಧುವಲ್ಲ. ಸಣ್ಣ ಫ್ರಿಜ್ ನೀಡಿದರೆ ಸಾಕು’ ಎನ್ನುತ್ತಾರೆ ಕೆಎಚ್‌ಎಫ್ ವ್ಯವಸ್ಥಾಪಕ ನಿರ್ದೇಶಕಿ ಎಚ್.ಎನ್.ಹೇಮಾ.

ಕೆಎಂಎಫ್ ಮಾದರಿ ಅಭಿವೃದ್ಧಿಪಡಿಸಿ: ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹಾಪ್‌ಕಾಮ್ಸ್‌ಗಳನ್ನು ಕೆಎಂಎಫ್ ಮಾದರಿಯಲ್ಲಿಯೇ ಅಭಿವೃದ್ಧಿಪಡಿಸುವ ಯೋಜನೆ ರೂಪಿಸಲಾಗಿತ್ತು. ನಂತರ ಬಂದ ಸರ್ಕಾರ ಈ ಯೋಜನೆಯ ಅನುಷ್ಠಾನಕ್ಕೆ ಅಷ್ಟು ಆಸಕ್ತಿ ವಹಿಸಲಿಲ್ಲ ಎನ್ನುತ್ತಾರೆ ಹಾಸನ ಹಾಲು ಒಕ್ಕೂಟ ಅಧ್ಯಕ್ಷ ಎಚ್.ಡಿ.ರೇವಣ್ಣ.

‘ಹಾಸನ, ರಾಮನಗರ, ವಿಜಯಪುರ ಸೇರಿದಂತೆ ನಾಲ್ಕು ಕಡೆ ದೊಡ್ಡ ಮಾರುಕಟ್ಟೆ ನಿರ್ಮಿಸಲು ₹ 500 ಕೋಟಿ ಮಂಜೂರು ಮಾಡುವಂತೆ ಪ್ರಸ್ತಾವ ಸಲ್ಲಿಸಲಾಗಿತ್ತು. ಸಂಸ್ಥೆ ಸಿಬ್ಬಂದಿಯೇ ನೇರವಾಗಿ ಹಳ್ಳಿಗಳಿಗೆ ತೆರಳಿ ತರಕಾರಿ, ಹಣ್ಣು ಖರೀದಿಸಬೇಕು ಎನ್ನುವುದು ಇದರ ಭಾಗವಾಗಿತ್ತು. ಬೆಳೆಗಳಿಗೂ ಉತ್ತಮ ದರ ನೀಡುವುದು, ಬೆಳೆಗಾರರು ಮಾರುಕಟ್ಟೆಗೆ ಅಲೆಯುವುದನ್ನು ತಪ್ಪಿಸುವುದು ಇದರ ಉದ್ದೇಶವಾಗಿತ್ತು. ಈ ದೊಡ್ಡ ಮಾರುಕಟ್ಟೆಗಳಿಂದ ಹಣ್ಣು, ತರಕಾರಿಗಳನ್ನು ಜಿಲ್ಲಾ ಕೇಂದ್ರಗಳಿಗೆ ಮತ್ತು ಹೊರ ರಾಜ್ಯಗಳಿಗೆ ಪೂರೈಸುವ ಚಿಂತನೆಯಿತ್ತು. ಬೇಡಿಕೆ ಆಧರಿಸಿ ಉತ್ಪನ್ನಗಳ ರಫ್ತು ಚಿಂತನೆಯೂ ಇತ್ತು. ಆದರೆ ಇದು ಕಾರ್ಯಗತವಾಗಲಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಸರ್ಕಾರ ಹಾಲಿಗೆ ಸಬ್ಸಿಡಿ ನೀಡುತ್ತಿರುವಂತೆಯೇ ಹಣ್ಣು, ತರಕಾರಿ ಬೆಳೆಗಾರರಿಗೂ ಕೆ.ಜಿ. ಗೆ ಇಂತಿಷ್ಟು ಮೊತ್ತವನ್ನು ಸಬ್ಸಿಡಿ ನೀಡಿದರೆ ಅನುಕೂಲ. ನಗರ ಮತ್ತು ಪಟ್ಟಣಗಳು ವೇಗವಾಗಿ ಬೆಳೆಯುತ್ತಿರುವುದರಿಂದ ಕೃಷಿ ಜಮೀನು ಉಳಿಯುವುದಿಲ್ಲ. ಇಂತಹ ಸ್ಥಿತಿಯಲ್ಲಿ ಸರ್ಕಾರ ಬೆಳೆಗಾರರ ಹಿತಾಸಕ್ತಿ ಬಗ್ಗೆಯೂ ಚಿಂತನೆ ಮಾಡಬೇಕು’ ಎಂದರು.

‘ಹಾಪ್‌ಕಾಮ್ಸ್‌ಗಳು ಬೇಡಿಕೆಗಿಂತ ಹೆಚ್ಚು ಉತ್ಪನ್ನ ಬಂದರೆ ಖರೀದಿಸುವುದಿಲ್ಲ. ಕೆಲ ತರಕಾರಿ ಹಣ್ಣನ್ನು ಯಾರು ಕೇಳುವುದೇ ಇಲ್ಲ. ವಾಪಸ್ ಕಳುಹಿಸುತ್ತಾರೆ. ಚಿಲ್ಲರೆ ಮಾರಾಟ ಮಾಡುವಾಗ ತೂಕದಲ್ಲಿ ಏರುಪೇರಾಗುತ್ತದೆ ಎಂಬ ನೆಪ ಹೇಳುತ್ತಾರೆ. ಸರಿಯಾದ ಸಮಯಕ್ಕೆ ಬಿಲ್ ಸಿಗುವುದಿಲ್ಲ. ದೊಡ್ಡ ಪ್ರಮಾಣದಲ್ಲಿ ತರಕಾರಿ ಮಾರಿದರೆ ಹಣಕ್ಕೆ ವಾರಗಟ್ಟಲೇ ಕಾಯಬೇಕು’ ಎಂದು ಆರೋಪಿಸುತ್ತಾರೆ ಗೌರಿಬಿದನೂರು ತಾಲ್ಲೂಕಿನ ಗುಟ್ಟೇನಹಳ್ಳಿ ರೈತ ಲಕ್ಷ್ಮೀನಾರಾಯಣ.

‘ಖಾಸಗಿ ಕಂಪನಿಗಳು ಬೇಕೆಂದಾಗ ದರ ತಗ್ಗಿಸುತ್ತವೆ. ನಮಗೆ ಅಂತಹ ಅವಕಾಶ ಇಲ್ಲ. ತಳ್ಳುಗಾಡಿಗಳಲ್ಲಿ ವ್ಯಾಪಾರ ಮಾಡುವವರೂ ಹಾಪ್‌ಕಾಮ್ಸ್ ದರಕ್ಕಿಂತ ಕಡಿಮೆಗೆ ನೀಡುತ್ತಾರೆ. ವಿವಿಧೆಡೆ ಹಾಪ್‌ಕಾಮ್ಸ್ ಮಳಿಗೆ ತೆರೆಯಲು ಜಾಗದ ಕೊರತೆ ಇದೆ. ಹಾರ್ಟಿ ಬಜಾರ್‌ಗಳು ಸೂಪರ್ ಮಾರ್ಕೆಟ್ ರೀತಿ ಕಾರ್ಯನಿರ್ವಹಿಸುತ್ತಿವೆ. ತಾಜಾ ಹಣ್ಣು, ತರಕಾರಿಗಳು, ಸಂಬಾರ ಪದಾರ್ಥಗಳು, ಮೌಲ್ಯವರ್ಧಿತ ಉತ್ಪನ್ನಗಳನ್ನು ಮಾರಲಾಗುತ್ತಿತ್ತು. ಆರಂಭದಲ್ಲಿ ಉತ್ತಮ ಸ್ಪಂದನೆ ದೊರಕಿತು. ಈಗ ನಷ್ಟದ ಕಾರಣ ಒಂದು ಮಳಿಗೆ ಬಂದ್ ಆಗಿದೆ’ ಎನ್ನುತ್ತಾರೆ ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ.

‘ಮಳಿಗೆಗಳಲ್ಲಿ ದೈನಂದಿನ ದರಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಗ್ರಾಹಕರ ಮನೆ ಬಾಗಿಲಿಗೆ ಉತ್ಪನ್ನಗಳನ್ನು ತಲುಪಿಸಲು ಕೋಡ್ ಕೆಟಲಿಸ್ಟ್ ಸಂಸ್ಥೆ ಜತೆ ಒಪ್ಪಂದವಾಗಿತ್ತು. ಆಡಳಿತಾತ್ಮಕ ಕಾರಣದಿಂದ ಈ ಸಂಸ್ಥೆಯ ಆನ್‌ಲೈನ್ ಸೇವೆಯನ್ನು ರದ್ದುಗೊಳಿಸಲಾಗಿದೆ. ಯಾವುದಾದರೂ ಸಂಸ್ಥೆ ಮುಂದೆ ಬಂದರೆ ಮತ್ತೆ ಆನ್‌ಲೈನ್ ಸೇವೆ ಆರಂಭಿಸಲಾಗುವುದು’ ಎಂದರು.

‘ಮದುವೆ, ನಾಮಕರಣ, ನಿಶ್ಚಿತಾರ್ಥ, ವಿವಿಧ ಶುಭ ಸಮಾರಂಭಗಳಿಗೆ ಹಾಪ್‌ಕಾಮ್ಸ್ ವತಿಯಿಂದಲೇ ರಿಯಾಯಿತಿ ದರದಲ್ಲಿ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತಿದೆ. ಶೇ 10ರಷ್ಟು ರಿಯಾಯಿತಿ ಸಹ ಸಿಗಲಿದೆ. ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಉತ್ಪನ್ನಗಳನ್ನು ಸಂಸ್ಥೆಯ ವಾಹನದಲ್ಲೇ ಉಚಿತವಾಗಿ ಪೂರೈಕೆ ಮಾಡಲಾಗುತ್ತಿದೆ. ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರೆ ಬೇರೆ ಜಿಲ್ಲೆಗಳಿಗೂ ಬೆಂಗಳೂರಿನಿಂದ ಉತ್ಪನ್ನಗಳನ್ನು ತಲುಪಿಸಲಾಗುವುದು’ ಎಂದು ಬೆಂಗಳೂರು ಹಾಪ್‌ಕಾಮ್ಸ್ ಅಧ್ಯಕ್ಷ ಎನ್.ದೇವರಾಜ್ ತಿಳಿಸಿದರು.

ತೋಟಗಾರಿಕಾ ಬೆಳೆಗಾರರಿಗೆ ಮಾರುಕಟ್ಟೆಯ ಬಲ ನೀಡಬೇಕಾಗಿದ್ದ ಮತ್ತು ಗ್ರಾಹಕರಿಗೆ ತಾಜಾ ಹಣ್ಣು, ತರಕಾರಿ ಪೂರೈಸಬೇಕಾಗಿದ್ದ ಹಾಪ್‌ಕಾಮ್ಸ್ ನಷ್ಟದ ಹಾದಿಯಲ್ಲಿ ಮುಂದುವರಿದರೆ ಮಾರಾಟ ಮಳಿಗೆಗಳಿಗೆ ಬೀಗ ಹಾಕುವ ಕಾಲ ದೂರವಿಲ್ಲ. ರೈತರು ಮತ್ತು ಗ್ರಾಹಕರ ನಡುವಿನ ಸಂಪರ್ಕ ಕೊಂಡಿಯೊಂದು ಕಡಿದುಹೋಗುವ ಆತಂಕವೂ ಇದೆ.

ಬೆಳೆ ಪ್ರದೇಶದ ವಿವರ				
	3.98 ಲಕ್ಷ ಹೆಕ್ಟೇರ್ ರಾಜ್ಯದಲ್ಲಿ ಹಣ್ಣಿನ ಬೆಳೆ ಪ್ರದೇಶ	70.83 ಲಕ್ಷ ಟನ್ ವಾರ್ಷಿಕ ಉತ್ಪಾದನೆ	4.41 ಲಕ್ಷ ಹೆಕ್ಟೇರ್ ತರಕಾರಿ ಬೆಳೆಯುವ ಪ್ರದೇಶ	87.77 ಲಕ್ಷ ಟನ್ ವಾರ್ಷಿಕ ಉತ್ಪಾದನೆ



ಮಡಿಕೇರಿಯಲ್ಲಿ ಕೆಎಚ್‌ಎಫ್ ವತಿಯಿಂದ ನಿರ್ಮಿಸಿರುವ ಹೈಟೆಕ್ ಹಾಪ್‌ಕಾಮ್ಸ್ ಮಳಿಗೆಯಲ್ಲಿ ಹಣ್ಣು, ತರಕಾರಿ ಮಾತ್ರವಲ್ಲದೆ ಸಂಬಾರ ಪದಾರ್ಥಗಳು, ಸ್ಥಳೀಯವಾಗಿ ತಯಾರಿಸಿದ ವೈನ್, ಹಣ್ಣಿನ ರಸಗಳನ್ನು ಮಾರಾಟ ಮಾಡಲಾಗುತ್ತಿದೆ.
ಪ್ರಜಾವಾಣಿ ಚಿತ್ರ ರಂಗಸ್ವಾಮಿ

ರೈತ–ಗ್ರಾಹಕ ಸ್ನೇಹಿ ಆಗಲಿ

ಹಾಪ್‌ಕಾಮ್ಸ್ ಮಳಿಗೆಗಳಿಗೆ ಮೊದಲು ಮೂಲಸೌಲಭ್ಯ ಕಲ್ಪಿಸಬೇಕು. ಕಡಿಮೆ ವೆಚ್ಚದಲ್ಲೂ ಕೋಲ್ಡ್ ಸ್ಟೋರೇಜ್ ಸ್ಥಾಪನೆ ಮಾಡಬಹುದು. ಸಂಸ್ಥೆಯಲ್ಲಿ ಲಾಭಕ್ಕಿಂತ ಹೆಚ್ಚು ನಷ್ಟವನ್ನೇ ತೋರಿಸಲಾಗುತ್ತಿದೆ. ಸಂಸ್ಥೆಯಲ್ಲಿ ರಾಜಕೀಯ ಹಸ್ತಕ್ಷೇಪ ಇರಬಾರದು. ಗ್ರಾಹಕರ ಸೆಳೆಯಲು ಖಾಸಗಿ ಕಂಪನಿಗಳಂತೆ ಮಳಿಗೆಗಳನ್ನು ಆಕರ್ಷಕವಾಗಿ ರೂಪಿಸಬೇಕು. ರೈತ ಮತ್ತು ಗ್ರಾಹಕ ಸ್ನೇಹಿ ಹಾಪ್‌ಕಾಮ್ಸ್ ಮಾಡಲು ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡಬೇಕು.

ಬಡಗಲಪುರ ನಾಗೇಂದ್ರ, ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ

ಉತ್ತಮ ಬೆಲೆ ಸಿಗಲಿ

ತೋಟಗಾರಿಕಾ ಸಹಕಾರ ಸಂಘಗಳು ಮತ್ತು ಹಾಪ್‌ಕಾಮ್ಸ್‌ಗಳು ರೈತರ ಜೀವನಾಡಿಗಳು. ಖಾಸಗಿ ಕಂಪನಿಗಳ ಪೈಪೋಟಿ ನಡುವೆ ಗ್ರಾಹಕರ ಮನೆ ಬಾಗಿಲಿಗೆ ತೋಟಗಾರಿಕಾ ಉತ್ಪನ್ನಗಳನ್ನು ತಲುಪಿಸುವ ವ್ಯವಸ್ಥೆ ರೂಪಿಸಬೇಕು. ಬೆಳೆಗಳಿಗೆ ಸೂಕ್ತ ಮಾರುಕಟ್ಟೆ, ಉತ್ತಮ ಬೆಲೆ ಸಿಗಬೇಕು.

ಜಿ.ಟಿ. ದೇವೇಗೌಡ, ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ

ಬೆಳೆಗಾರರ ಸಹಾಯಕ್ಕೆ ನಿಲ್ಲಬೇಕು

ಸಾಲ ಮಾಡಿ ಬೆಳೆ ಬೆಳೆಯುತ್ತವೆ. ಕಟಾವಿನ ಸಮಯದಲ್ಲಿ ಉತ್ತಮ ದರ ಸಿಗದಿದ್ದರೆ ಸಾಲದ ಹೊರೆ ಹೆಚ್ಚಾಗುತ್ತದೆ. ಇಂತಹ ಸಮಯದಲ್ಲಿ ಹಾಪ್‌ಕಾಮ್ಸ್ ಬೆಳೆಗಾರರ ಸಹಕಾರಕ್ಕೆ ನಿಲ್ಲಬೇಕು.

ಬಸವರಾಜ್, ಉತ್ತರ ಕನ್ನಡ ಜಿಲ್ಲೆಯ ಬನವಾಸಿಯ ರೈತ

₹ 25 ಕೋಟಿ ದುಡಿಯುವ ಬಂಡವಾಳ ನೀಡಲಿ

ಹಾಪ್‌ಕಾಮ್ಸ್‌ಗಳು ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದು, ಸಂಸ್ಥೆ ಬಲವರ್ಧನೆಗೆ ಸರ್ಕಾರ ಬಡ್ಡಿರಹಿತವಾಗಿ ₹ 25 ಕೋಟಿ ದುಡಿಯುವ ಬಂಡವಾಳ ನೀಡಬೇಕು. ಕೋಲ್ಡ್ ಸ್ಟೋರೇಜ್‌ಗಳ ಬದಲು ಫ್ರಿಜ್ ನೀಡಿದರೂ ಸಾಕು. ಮುಂದಿನ ದಿನಗಳಲ್ಲಿ ಮಳಿಗೆಗಳಲ್ಲಿ ನೀರಾ ಕೋಲ್ಡ್ ಕಾಫಿ ಮಾರಲಾಗುವುದು. ನಷ್ಟದಲ್ಲಿರುವ ಮಳಿಗೆ ಮೇಲ್ದರ್ಜೆಗೇರಿಸುವ ಸಂಬಂಧ ಕರ್ನಾಟಕ ಆಯಿಲ್ ಫೆಡರೇಷನ್ ಜತೆ ಒಪ್ಪಂದ ಆಗಿದ್ದು, ಮಳಿಗೆಗಳಿಗೆ ಪೇಂಟ್ ಮಾಡಿಕೊಡುತ್ತಿದ್ದಾರೆ. ಫೆಡರೇಷನ್‌ನ ಆಯಿಲ್, ಮೇಟಿರಿಯಲ್‌ಗಳನ್ನು ಮಾರಾಟ ಮಾಡಲಾಗುತ್ತಿದೆ.

ಎನ್.ದೇವರಾಜ್, ಬೆಂಗಳೂರು ಹಾಪ್‌ಕಾಮ್ಸ್ ಅಧ್ಯಕ್ಷ

ಬಾಳೆ ಖರೀದಿಸದ ಹಾಪ್‌ಕಾಮ್ಸ್

ಶಿವಮೊಗ್ಗದ ಮಂಡಿಗೆ ಬಾಳೆ ತೆಗೆದುಕೊಂಡು ಹೋದಾಗ ಮಧ್ಯವರ್ತಿಗಳು ಕಡಿಮೆ ದರಕ್ಕೆ ಕೇಳಿದರು. ಈಗಲೇ ಸಾಕಷ್ಟು ಸಂಗ್ರಹವಿದೆ ಎಂದು ಹೇಳಿ ಹಾಪ್‌ಕಾಮ್ಸ್‌ನವರು ಕೈಚೆಲ್ಲಿದರು. ಕೊನೆಗೆ ಕೂಲಿ ವೆಚ್ಚ, ವಾಹನದ ಬಾಡಿಗೆಯೂ ದಕ್ಕಲಿಲ್ಲ. ರೈತರು ಬೆಳೆದ ಉತ್ಪನ್ನಗಳನ್ನು ಅವರ ತೋಟಗಳಿಗೆ ಹೋಗಿ ಖರೀದಿಸುವ ಮೂಲಕ ಮಾರುಕಟ್ಟೆಯಲ್ಲಿ ಅವರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು.

ದಾನಶೇಖರ್,
ಬಾಳೆ ಬೆಳೆಗಾರ, ಸೊರಬ

ಮಡಿಕೇರಿ: ಹೈಟೆಕ್ ಮಳಿಗೆ

ಮಡಿಕೇರಿ ಬಸ್ ನಿಲ್ದಾಣ ಸಮೀಪ ಕೆಎಚ್‌ಎಫ್ ನಿಂದ ₹ 1.56 ಕೋಟಿ ವೆಚ್ಚದಲ್ಲಿ ಹೈಟೆಕ್ ಹಾಪ್‌ಕಾಮ್ಸ್ ಮಳಿಗೆ ನಿರ್ಮಿಸಲಾಗಿದೆ. ಇಲ್ಲಿ ಭರ್ಜರಿ ವ್ಯಾಪಾರವಾಗುತ್ತಿದೆ. ಹಣ್ಣು, ತರಕಾರಿ ಜೊತೆಗೆ ಸಂಬಾರ ಪದಾರ್ಥಗಳು, ಸ್ಥಳೀಯವಾಗಿ ತಯಾರಿಸಿದ ವೈನ್, ತಂಪು ಪಾನೀಯ ಮಾರಲಾಗುತ್ತಿದೆ.

‘ಸದ್ಯ ಹಣ್ಣು, ತರಕಾರಿ, ವೈನ್, ಹಣ್ಣಿನ ಜ್ಯೂಸ್, ಒಣ ಶುಂಠಿ, ಮೆಣಸು, ಏಲಕ್ಕಿ, ಚಕ್ಕೆ, ಲವಂಗ ಮಾರಲಾಗುತ್ತಿದೆ. ಸ್ಥಳೀಯವಾಗಿ ಬೆಳೆಯುವ ಸೊಪ್ಪು, ತರಕಾರಿಗಳ ಜತೆಗೆ ಮೈಸೂರು ಎಪಿಎಂಸಿಯಿಂದ ಹಣ್ಣು, ತರಕಾರಿ ತರಿಸಿ ಮಾರಾಟ ಮಾಡಲಾಗುತ್ತಿದೆ. ದಿನಕ್ಕೆ ₹ 75 ಸಾವಿರದಿಂದ ₹ 1 ಲಕ್ಷವರೆಗೂ ವ್ಯಾಪಾರವಾದರೆ, ವಾರಾಂತ್ಯದಲ್ಲಿ ₹ 1.5 ಲಕ್ಷ ವ್ಯಾಪಾರವಾಗಲಿದೆ’ ಎಂದು ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಪ್ರಮೋದ್ ತಿಳಿಸಿದರು.

ಬಿಡಿಎ ಆಯುಕ್ತರಾಗಿ ಕುಮಾರ್ ನಾಯಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 14 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಆದೇಶ ಹೊರಡಿಸಿದೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ದರ್ಜೆ ಹೊಂದಿರುವ ಜಿ. ಕುಮಾರ್ ನಾಯಕ್ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಕುಮಾರ್ ನಾಯಕ್ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯಲ್ಲಿದ್ದರು. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಎಂ.ಬಿ. ರಾಜೇಶ್ ಗೌಡ ಅವರನ್ನು ಬಿಡಿಎ ಆಯುಕ್ತರ ಹುದ್ದೆಯಿಂದ ವರ್ಗಾವಣೆ ಮಾಡಿದ ಬಳಿಕ ನಾಯಕ್ ಅವರಿಗೆ ಆ ಹುದ್ದೆಯ ಹೆಚ್ಚುವರಿ ಪ್ರಭಾರ ವಹಿಸಲಾಗಿತ್ತು. ಈವರೆಗೂ ಅವರು ಆಯುಕ್ತರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿದ್ದರು. ಈಗ ಬಿಡಿಎ ಆಯುಕ್ತರ ಹುದ್ದೆಯನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಸಮನಾಗಿ ಮೇಲ್ದರ್ಜೆಗೇರಿಸಿ ವರ್ಗಾವಣೆ ಮಾಡಲಾಗಿದೆ.

ವರ್ಗಾವಣೆಗೊಂಡ ಇತರರು: ಇ.ವಿ. ರಮಣ ರೆಡ್ಡಿ– ಅಭಿವೃದ್ಧಿ ಆಯುಕ್ತ; ಕಪಿಲ್ ಮೋಹನ್– ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಹಾಗೂ ಹೆಚ್ಚುವರಿಯಾಗಿ ಪ್ರವಾಸೋದ್ಯಮ ಇಲಾಖೆಯ ಪ್ರಭಾರ. ಜಿ. ಕುಮಾರ ನಾಯಕ್– ಆಯುಕ್ತ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಎಸ್.ಆರ್. ಉಮಾಶಂಕರ್– ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ. ರಶ್ಮಿ ವಿ. ಮಹೇಶ್– ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಕೋಪ ನಿರ್ವಹಣೆ, ಭೂಮಿ ಮತ್ತು ನಗರ ಆಸ್ತಿ ಹಕ್ಕುಗಳ ದಾಖಲೆ ವಿಭಾಗ).

ಸೆಲ್ವಕುಮಾರ್ ಎಸ್.– ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಇಲಾಖೆಯ ಹೆಚ್ಚುವರಿ ಪ್ರಭಾರ. ಮನೋಜ್ ಜೈನ್– ಕಾರ್ಯದರ್ಶಿ, ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ. ಶಿವಶಂಕರ್ ಎನ್.– ವ್ಯವಸ್ಥಾಪಕ ನಿರ್ದೇಶಕ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ; ನಳಿನಿ ಅತುಲ್– ನಿರ್ದೇಶಕ, ಸಾಮಾಜಿಕ ಲೆಕ್ಕಪರಿಶೋಧನೆ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಭಾಗ.

ಮೊಹಮ್ಮದ್ ರೋಷನ್– ವ್ಯವಸ್ಥಾಪಕ ನಿರ್ದೇಶಕ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ; ಭೋಯರ್ ಹರ್ಷಲ್ ನಾರಾಯಣರಾವ್– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯಿತಿ. ಭನ್ವಾರ್ ಸಿಂಗ್ ಮೀನಾ– ಪ್ರಧಾನ ವ್ಯವಸ್ಥಾಪಕ, ಪುನರ್ವಸತಿ ಮತ್ತು ಪರಿಹಾರ ಹಾಗೂ ಭೂಸ್ವಾಧೀನ, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ. ಪ್ರಕಾಶ್ ಜಿ. ನಿಟ್ಟಾಲಿ– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ. ನೊಂಗ್‌ಜೈ ಮೊಹಮ್ಮದ್ ಅಲಿ ಅಕ್ರಮ್ ಶಾ– ಹೆಚ್ಚುವರಿ ಮಿಷನ್ ನಿರ್ದೇಶಕ–2, ಸಕಾಲ ಮಿಷನ್.

ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಜೆ.ಸಿ. ಮಾಧುಸ್ವಾಮಿ ಅವರ ಆಪ್ತ ಕಾರ್ಯದರ್ಶಿ ಕೆಎಎಸ್ ಅಧಿಕಾರಿ ರವಿ ಎಂ. ತಿರ್ಲಾಪುರ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಯ ಹೆಚ್ಚುವರಿ ಪ್ರಭಾರ ನೀಡಲಾಗಿದೆ.

‘ಶೀಘ್ರ ಸಾರಿಗೆ ನೌಕರರ ವೇತನ ಪರಿಷ್ಕರಣೆ’

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ‘ರಾಜ್ಯ ಸಾರಿಗೆ ಸಂಸ್ಥೆ ನೌಕರರಿಗೆ 7ನೇ ವೇತನ ಆಯೋಗದ ವರದಿ ಜಾರಿಗೊಳಿಸಲು ಸಾಧ್ಯವಿಲ್ಲ. ಆದರೆ, ವೇತನ ಪರಿಷ್ಕರಣೆಗೆ ಮುಖ್ಯಮಂತ್ರಿ ಅವರು ಒಪ್ಪಿಗೆ ನೀಡಿದ್ದು, ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರಲಿದೆ’ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಭರವಸೆ ನೀಡಿದರು.

ಶನಿವಾರ ಇಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಅವರು, ‘2030ರ ವೇಳೆಗೆ ರಾಜ್ಯದೆಲ್ಲೆಡೆ ಹಳೆಯ ಬಸ್‌ಗಳ ಬದಲು ಹೊಸ ಬಸ್‌ಗಳ ಸೇವೆ ಆರಂಭಿಸಲಾಗುವುದು. ಈ ಬಗ್ಗೆ ದೂರದೃಷ್ಟಿಯ ಯೋಜನೆಯನ್ನು ರೂಪಿಸಲಾಗುತ್ತಿದೆ’ ಎಂದರು.


‘ಅಡಿಕೆ ಬೆಳೆ ಸಂಶೋಧನೆಗೆ ವಿಶೇಷ ಅನುದಾನ’

ಪುತ್ತೂರು (ದಕ್ಷಿಣ ಕನ್ನಡ): ಅಡಿಕೆ ಬೆಳೆ ಸಂಶೋಧನಾ ಕೇಂದ್ರವನ್ನು ಬಲಪಡಿಸಲು ಈ ಬಾರಿ ಬಜೆಟ್‌ನಲ್ಲಿ ವಿಶೇಷ ಅನುದಾನ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶನಿವಾರ ನಡೆದ ಕ್ಯಾಂಪ್ಕೊ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು ಖಾನ-ಬಾಣೆ ಜಮೀನು ರೈತರಿಗೆ ಸಿಗುವಂತೆ ಮಾಡಲು ಕಂದಾಯ ಇಲಾಖೆಗೆ ಸೂಚನೆ ನೀಡಲಾಗಿದೆ ಎಂದರು.

ರಾಜ್ಯದಲ್ಲಿ 6 ಲಕ್ಷ 11 ಸಾವಿರ ಎಕ್ರೆ ಪ್ರದೇಶದಲ್ಲಿ ಅಡಿಕೆ ಬೆಳೆಯುತ್ತಿದ್ದು ಬೆಳೆಗಾರರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಬಿಳಿ ಚುಕ್ಕಿ ರೋಗ ಸಮಸ್ಯೆಯ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ. ಕ್ಯಾಪಿಟಲಿಸಂ (ಬಂಡವಾಳಶಾಹಿ) ಮತ್ತು ಕಮ್ಯುನಿಸಂಗೆ (ಸಮತಾವಾದ) ಸಮರ್ಪಕ ಉತ್ತರ ಕೊಡಲು ಕೊ–ಆಪರೇಟಿಸಂಗೆ (ಸಹಕಾರ ಕ್ಷೇತ್ರ) ಸಾಧ್ಯ ಎಂಬುದನ್ನು ಕ್ಯಾಂಪ್ಕೊ ಸಾಬೀತುಪಡಿಸಿದೆ ಎಂದು ಹೇಳಿದರು.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 12-2-1998

● ಚುನಾವಣಾ ಹಿಂಸೆ ತಡೆಗೆ ಜಂಟಿ ಕಾರ್ಯಾಚರಣೆ

ನವದೆಹಲಿ, ಫೆ. 11 (ಪಿಟಿಐ)– ಮತಗಟ್ಟೆಗಳನ್ನು ವಶಪಡಿಸಿಕೊಳ್ಳುವುದೂ ಸೇರಿದಂತೆ ಚುನಾವಣಾ ಸಂಬಂಧಿತ ಹಿಂಸಾಚಾರಗಳನ್ನು ತಡೆಗಟ್ಟಲು ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರ ಜಂಟಿ ಕಾರ್ಯ ಯೋಜನೆಯೊಂದನ್ನು ರೂಪಿಸಿವೆ.

ಅತಿ ಸೂಕ್ಷ್ಮ ಮತ್ತು ಉದ್ವಿಗ್ನ ಪ್ರದೇಶಗಳಲ್ಲಿ ಭಾರೀ ಪ್ರಮಾಣದ ಭದ್ರತಾ ಪಡೆಗಳನ್ನು ನಿಯೋಜಿಸಲು ತೀರ್ಮಾನಿಸಲಾಗಿದೆ. ಎಂದು ಮುಖ್ಯ ಚುನಾವಣಾ ಆಯುಕ್ತ ಎಂ.ಎಸ್. ಗಿಲ್ ಅವರು ತಿಳಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 12-2-1973

● ಹತ್ತನೇ ತರಗತಿವರೆಗೆ ವಾರ್ಷಿಕ ಪರೀಕ್ಷೆಗಳ ರದ್ದಿಗೆ ನೂರುಲ್ ಹಸನ್ ಕರೆ

ಇಂದೂರು, ಫೆ. 11– ಶಿಕ್ಷಣ ಕುರಿತ ಕೇಂದ್ರ ಸಲಹಾ ಮಂಡಳಿಯ ಇತ್ತೀಚಿನ ನಿರ್ಧಾರದ ಪ್ರಕಾರ, ರಾಜ್ಯಗಳು 10ನೇ ತರಗತಿಯವರೆಗೆ ನಡೆಯುವ ವಾರ್ಷಿಕ ಪರೀಕ್ಷೆಗಳನ್ನು ಶೀಘ್ರವಾಗಿ ರದ್ದುಗೊಳಿಸುವುದೆಂಬ ನಂಬಿಕೆಯನ್ನು ಕೇಂದ್ರ ಶಿಕ್ಷಣ ಸ್ಟೇಟ್ ಸಚಿವ ಪ್ರೊ. ನೂರುಲ್‌ಹಸನ್ ಅವರು ವ್ಯಕ್ತಪಡಿಸಿದರು.

ಪ್ರೊ. ಹಸನ್ ಅವರು ಇಂದೂರು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಡನೆ ಮಾತನಾಡುತ್ತ ಈ ರೀತಿ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಫೆಬ್ರುವರಿ 12, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಷಷ್ಠಿ ಗಂ. 09-46 ನಕ್ಷತ್ರ: ಸ್ವಾತಿ ಗಂ. 26-27 ಯೋಗ: ಗಂಡ ಗಂ. 15-34, ಕರಣ: ವಣಿಜ ಗಂ. 09-46, ಮಕರ ಮಾಸದ 29 ನೇ ದಿನ.
ರಾಹುಕಾಲ : ಸಾಯಂಕಾಲ 04-30–06-00
ಸೂರ್ಯೋದಯ : 06-58 ಸೂರ್ಯಾಸ್ತ : 06-31
ಮುಸ್ಲಿಂ ದಿನಾಂಕ : 20 ರಜಬ್
ಅದೃಷ್ಟ ಸಂಖ್ಯೆ : 5, 9

ಮೇಷ: ದಾಂಪತ್ಯದಲ್ಲಿ ಉತ್ತಮ ಅನ್ಯೋನ್ಯತೆ ವೃದ್ಧಿಯಾಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣವಿರುತ್ತದೆ. ಹೈನುಗಾರಿಕೆಯಲ್ಲಿ ಆದಾಯದ ಹೆಚ್ಚಳ. ಅವಿವಾಹಿತರಿಗೆ ಕಂಕಣ ಭಾಗ್ಯ ದೊರೆಯುವುದು.

ವೃಷಭ: ಕಾರ್ಯಕ್ಷೇತ್ರದಲ್ಲಿ ಹಿಡಿತಕ್ಕೆ ಸಿಕ್ಕದೆ ಇರುವ ಕೆಲಸಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುವಿರಿ. ಹಣಕಾಸಿನ ಸಮಸ್ಯೆಗಳು ಹಂತ ಹಂತವಾಗಿ ಪರಿಹಾರ ಕಾಣಲಿದೆ.

ಮಿಥುನ: ಭೂಸಂಬಂಧದ ವ್ಯವಹಾರದಲ್ಲಿ ಅಧಿಕ ಆದಾಯ. ಗೃಹ ನಿರ್ಮಾಣದ ಯೋಚನೆಯು ಕಾರ್ಯರೂಪಕ್ಕೆ ಬರಲಿದೆ. ರಾಜಕೀಯ ವ್ಯಕ್ತಿಗಳಿಗೆ ಓಡಾಟ ಹೆಚ್ಚಲಿದೆ. ವೈದ್ಯ ವೃತ್ತಿಯವರಿಗೆ ಒಳ್ಳೆಯ ದಿನ.

ಕರ್ಕಾಟಕ: ನಿರುದ್ಯೋಗಿಗಳಿಗೆ ಸಾಮಾಜಿಕ ಬದುಕಿನಲ್ಲಿ ಹೊಸ ತಿರುವು ಮೂಡುತ್ತದೆ. ಮನೋಬಲದಿಂದ ಕೆಲಸಕಾರ್ಯಗಳು ಚುರುಕಾಗಿ ನಡೆಯುವುವು. ಯಾವುದೇ ಕೆಲಸಗಳಿಗೆ ಹಣದ ಅಡಚಣೆ ಇರುವುದಿಲ್ಲ.

ಸಿಂಹ: ಸಂತೋಷದ ಸಮಯದಲ್ಲೂ ಒತ್ತಡದಿಂದಿರುವುದು ನಿಮ್ಮ ಜಾಯಮಾನದಂತಾಗಲಿದೆ. ಕಾರ್ಯ ರಂಗದಲ್ಲಿ ಅನುಭವಸ್ಥರ ಸಹಯೋಗದಿಂದ ಪ್ರಗತಿ ಕಾಣಬಹುದು. ಯೋಗಾಭ್ಯಾಸದಿಂದ ಅರೋಗ್ಯ ವೃದ್ಧಿ.

ಕನ್ಯಾ: ನಾಟಕ ಕಲಾವಿದರಿಗೆ ಹೆಚ್ಚಿನ ಮನ್ನಣೆ ಸಿಗುವುದು. ಮಕ್ಕಳ ಜೊತೆ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಕುಟುಂಬದ ಮಾರ್ಗಸೂಚಕರ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳೂ ಸಹ ಪತ್ತೆಯಾಗುವುವು.

ತುಲಾ: ಅಧಿಕಾರದಲ್ಲಿ ಸ್ಥಾನಮಾನದ ಬಯಕೆಯಿಂದಾಗಿ ದೇವರ ಸೇವೆಯಂಥ ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಒಳ್ಳೆಯದು. ಸಂಸಾರದಲ್ಲಿ ಅಂತಃಕಲಹಗಳು ನಡೆದು, ಅಸಮಾಧಾನಕ್ಕೆ ಕಾರಣವಾಗಬಹುದು.

ವೃಶ್ಚಿಕ: ನಿಧಾನಗತಿಯ ಕೆಲಸಕಾರ್ಯಗಳು ಚುರುಕಾಗಿ ಮನಸ್ಸಿಗೆ ನೆಮ್ಮದಿ ಬರುವುದು. ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಮುಂದುವರಿಸುವಿರಿ.

ಧನು: ನಿಮ್ಮ ಉದ್ಯೋಗಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕಾನುಕೂಲದ ಜೊತೆಗೆ ಸಾಮಾಜಿಕವಾಗಿ ತೂಕದ ವ್ಯಕ್ತಿಯಾಗುವಿರಿ. ಮನೆಯಲ್ಲಿ ಸಂತಾನದ ಶುಭ ಸುದ್ದಿಯನ್ನು ಕೇಳುವಿರಿ.

ಮಕರ: ಸ್ಪಷ್ಟ ನಿರ್ಧಾರವನ್ನು ಮಾಡಿದ ವಿಚಾರವನ್ನು ಪುನಃ ಮತ್ತೊಮ್ಮೆ ಯೋಚಿಸಲು ಅವಕಾಶಗಳು ಒದಗಿ ಬರುತ್ತದೆ. ಆದರೆ ಹಿಂದೆ ತೆಗೆದುಕೊಂಡ ನಿಲುವು ಬದಲಾಯಿಸಬೇಡಿ. ಬಂಗಾರವನ್ನು ಜಾಗ್ರತೆ ಮಾಡುವುದು ಉತ್ತಮ.


ಕುಂಭ: ಕುಟುಂಬದ ಸದಸ್ಯರ ಜೊತೆಗಿನ ಪ್ರವಾಸ ಸಂತೋಷ ಉಂಟುಮಾಡಲಿದೆ. ಕರ್ತವ್ಯದ ಬಗ್ಗೆ ಗಮನಹರಿಸುವುದನ್ನು ಮರೆಯದಿರಿ. ಕಣ್ಣಿಗೆ ಸಂಬಂಧಿಸಿದ ಅನಾರೋಗ್ಯಗಳು ಎದುರಾಗಬಹುದು.

ಮೀನ: ವೃತ್ತಿರಂಗದಲ್ಲಿ ನಿಮಗಾಗಿ ಅದೃಷ್ಟದ ಬಾಗಿಲು ತೆರೆಯುವುದು. ವ್ಯಾಪಾರ ವ್ಯವಹಾರಗಳು ಸರಾಗವಾಗಿ ನಡೆಯಲಿದೆ. ಆಟಿಕೆ ವ್ಯಾಪಾರದಿಂದ ಅಧಿಕ ಲಾಭ ಪಡೆಯಬಹುದು. ಮನೆಯವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

ಪದಬಂಧ 5228 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ಕೊನೆಗೆ ಅಂತರ ಕಾಯ್ದುಕೊಂಡೇ ಮಾಡಿದ ತರ್ಜುಮೆ! (4)
6.ಮಲಯದಲ್ಲಿರುವ ಶ್ರೀಗಂಧ (4)
7.ಯಮನಿದ್ದಾಗಿನ ಸೂತ್ರ! (3)
10.ಜನರೊಳಗೆ ಕಾಣಿಸಿದ ಆಳು (3)
11.ಅಶ್ವದ ಮುಖವಿದು (5)
12.ಎರವಲು ಪಡೆದು ನೋಡುತ್ತಿರುವ ಸಮುದ್ರ (3)
13.ಕರದಿಂದ ಪ್ರಾರಂಭಿಸಿದ ಉತ್ಸವ (3)
15.ಕನ್ನ ಹಾಕಿ ಕದ್ದೊಯ್ದ ಚಾಳೀಸು (4)
17.ರಕ್ತ ವರ್ಣದ ಗುಲಾಬಿ (4)

ಮೇಲಿಂದ ಕೆಳಕ್ಕೆ
1.ಈಕೆ ನಿರ್ಭಾಗ್ಯ ಹೆಂಗಸು (4)
2.ದುಸ್ತರದಲ್ಲೇ ಮಡಿಕೆ ಇದೆ! (2)
3.ಪಂಚಪಾಂಡವರಲ್ಲಿ ಎರಡನೆಯವನು (2)
4.ಜಯವನ್ನು ಗಳಿಸಿರುವ ಒಡೆಯ (4)
8. ಭವ್ಯವಾದ ಸೌಧವಿದು (3)
9.ಕಳವಳಪಟ್ಟು ತಿಂದಿರುವ ತುತ್ತು (3)
10.ಸೀತೆಯ ತಂದೆ (3)
12.ಕರುವಿಗೆ ತೋರಿದ ದಯೆ (4)
14.ಎಲ್ಲೆಯ ಬಳಿ ತೋರಿದ ಅವಸರ (4)
16.ಕಡಲ ಹತ್ತಿರ ಪಡೆದುಕೊಂಡ ಸಾಲ (2)
17.ಉರಿಯುತ್ತಿರುವ ಇದ್ದಿಲು (2)



5227ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲವಿ 3.ಉಪವಾಸ 5.ಕರಡು 6.ಅನುಮತಿ 8.ತಾತಾ 9.ಉಮೇದು 10.ವಧು 11.ವನವಾಸ 12.ಲವಂಗ 15.ನದೀತೀರ 16.ಗೆದ್ದಲು

ಮೇಲಿಂದ ಕೆಳಕ್ಕೆ:
1.ಪಕ್ಷಿ 2.ವಿಧುರ 4.ಸದ್ಗತಿ 5.ಕರತಾಡನ 6.ಆಮದು 7.ಮದುವಣಿಗ 9.ಉಬ್ಬಸ 11.ವದನ 13.ವಂತಿಗೆ 14.ಹಾಲು

ಸುಡೊಕು 5614

		5	6		2			3
	3				4	6		
6				1			5	9
	8	3		6				4
1				4				8
2			8		1	5	6	
					3			
4		2		9			3	1
	1		4		6		7	5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5613 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೆಂಗಳೂರಿನ ಜೈನ್ ವಿ.ವಿ: ಪ್ರಾಂಶುಪಾಲ ಸೇರಿ ಹಲವರ ವಿರುದ್ಧ ಎಫ್‌ಐಆರ್ • ಮಹಾರಾಷ್ಟ್ರದಲ್ಲೂ ಪ್ರಕರಣ ದಾಖಲು

ಅಂಬೇಡ್ಕರ್ ಅವಹೇಳನ: ವಿದ್ಯಾರ್ಥಿಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರದರ್ಶಿಸಿದ ಕಿರುನಾಟಕದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವಹೇಳನ ಮಾಡಿ, ಜಾತಿ ನಿಂದಿಸಿದ್ದಕ್ಕೆ ರಾಜ್ಯದ ಎಲ್ಲೆಡೆ ಆಕ್ರೋಶ ವ್ಯಕ್ತವಾಗಿದೆ.

ಈ ನಡುವೆ ನಾಟಕದಲ್ಲಿ ಅಭಿನಯಿಸಿದ ಎಲ್ಲ ವಿದ್ಯಾರ್ಥಿಗಳನ್ನು ಅಮಾನತುಗೊಳಿಸಿರುವ ವಿಶ್ವವಿದ್ಯಾಲಯವು ತನಿಖೆಗೆ ಶಿಸ್ತು ಸಮಿತಿ ರಚಿಸಿದೆ.

ಫೆ.6ರಂದು ವಿಶ್ವವಿದ್ಯಾಲಯದ ಸಿಎಂಎಸ್ (ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್) ವಿಭಾಗವು 'ಯುವಜನೋತ್ಸವ' ಆಯೋಜಿಸಿತ್ತು. ಅಲ್ಲಿ ಪ್ರದರ್ಶಿಸಿದ್ದ ಕಿರುನಾಟಕದಲ್ಲಿ ಅಂಬೇಡ್ಕರ್ ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿ ದಸಂಸ ಮುಖಂಡರು ರಾಜ್ಯದ ಹಲವು ಠಾಣೆಗಳಿಗೆ ದೂರು ನೀಡಿದ್ದಾರೆ. ದೂರಿನೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ನೀಡಿ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ನೀಡಿದ್ದ ದೂರಿನ ಅನ್ವಯ ವಿಶ್ವವಿದ್ಯಾಲಯದ ಪ್ರಾಂಶುಪಾಲ, ವಿಭಾಗದ ಮುಖ್ಯಸ್ಥ, ಕಾರ್ಯಕ್ರಮ ಸಂಘಟಕ, ಕಿರುನಾಟಕದ ರಚನೆಕಾರ, ಅಭಿನಯಿಸಿದ ವಿದ್ಯಾರ್ಥಿಗಳ ವಿರುದ್ಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಬಿಎಸ್‌ಪಿ ಹಾಗೂ ಸಾಮಾಜಿಕ ಹೋರಾಟಗಾರರು ಮಹಾರಾಷ್ಟ್ರದ ಕೆಲವು ಪೊಲೀಸ್ ಠಾಣೆಗಳಿಗೂ ದೂರು ನೀಡಿದ್ದಾರೆ.

'ರಾಷ್ಟ್ರ ನಾಯಕರಿಗೆ ಅವಮಾನ ಎಸಗಿದ್ದು, ಉದ್ದೇಶಪೂರ್ವಕವಾಗಿ ಜಾತಿನಿಂದನೆ ಮಾಡಲಾಗಿದೆ. ಆಡಳಿತ ಮಂಡಳಿ ಹಾಗೂ ನಾಟಕ ಪ್ರದರ್ಶಿಸಿದ ವಿದ್ಯಾರ್ಥಿಗಳ ವಿರುದ್ಧ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯೇ ಕ್ರಮ ಆಗಬೇಕು' ಎಂದು ದಸಂಸ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಆಗ್ರಹಿಸಿದ್ದಾರೆ.

'ನಾಟಕ ಪ್ರದರ್ಶನಕ್ಕೂ ಮುನ್ನ ವಿದ್ಯಾರ್ಥಿಗಳು ಹಲವು ದಿನ ಅಭ್ಯಾಸ ನಡೆಸಿದ್ದಾರೆ. ನಂತರವೂ ಅನುಮತಿ ನೀಡಲಾಗಿದೆ. ಇದರ ಅರ್ಥ ಏನು? ಅಂಬೇಡ್ಕರ್ ಅವರಿಗೆ ಅವಮಾನ ಆಗುವಂತೆ ಎಲ್ಲರೂ ನಗುತ್ತಾರೆ. ಅದು ವಿಡಿಯೊದಲ್ಲಿ ಸೆರೆಯಾಗಿದೆ. ಸರ್ಕಾರಕ್ಕೂ ಈ ರೀತಿಯ ಮನಸ್ಥಿತಿಗಳೇ ಬೇಕಾಗಿವೆ. ಸಂಘಟನೆಗಳು ದೂರು ನೀಡಿದ್ದರೂ ಎಫ್‌ಐಆರ್ ದಾಖಲಿಸದೇ ಎನ್‌ಸಿಆರ್ ಮಾತ್ರ ಮಾಡಲಾಗಿದೆ' ಎಂದು ಶಂಕರ್ ದೂರಿದ್ದಾರೆ.

'ಪ್ರಕರಣದಲ್ಲಿ ಎಲ್ಲ ತಪ್ಪಿತಸ್ಥರ ವಿರುದ್ಧ ಕ್ರಮ ಆಗಬೇಕು' ಎಂದು ಸಮಿತಿ ಪ್ರಧಾನ ಕಾರ್ಯದರ್ಶಿ ಮಾವಳ್ಳಿ ವೆಂಕಟೇಶ್ ಆಗ್ರಹಿಸಿದ್ದಾರೆ.

ಜೈನ್ ವಿವಿ ಸ್ಪಷ್ಟನೆ

'ಸಮಾಜದಲ್ಲಿರುವ ತಪ್ಪು ಕಲ್ಪನೆ ತೊಲಗಿಸಿ ಅರಿವು ಮೂಡಿಸುವ ಉದ್ದೇಶದಿಂದ ಈ ಕಿರುನಾಟಕ ಪ್ರದರ್ಶಿಸಲಾಗಿತ್ತು. ನಾಟಕದ ಕೊನೆಯಲ್ಲಿ ಎಲ್ಲರ ಜತೆಗೆ ಸಂವೇದನೆಯಿಂದ ನಡೆದುಕೊಳ್ಳಬೇಕು ಎಂಬ ಸಂದೇಶವಿದೆ. ಆದರೂ ಕುಲಸಚಿವರ ನೇತೃತ್ವದಲ್ಲಿ ತನಿಖೆಗೆ ಶಿಸ್ತು ಸಮಿತಿ ರಚಿಸಲಾಗಿದೆ. ಎಲ್ಲ ವಿದ್ಯಾರ್ಥಿಗಳ ಪೋಷಕರನ್ನೂ ಶನಿವಾರ ಕರೆಸಿ ವಿಚಾರಣೆ ನಡೆಸಲಾಗಿದೆ' ಎಂದು ಹೆಸರು ಹೇಳಲು ಇಚ್ಛಿಸದ ವಿಶ್ವವಿದ್ಯಾಲಯದ ಸಿಬ್ಬಂದಿ ತಿಳಿಸಿದ್ದಾರೆ.

14ಕ್ಕೆ ಬೆಂಗಳೂರು ವಿ.ವಿ ಬಂದ್

'ಅವಹೇಳನ ಖಂಡಿಸಿ ಇದೇ 14ರಂದು ಬೆಂಗಳೂರು ವಿಶ್ವವಿದ್ಯಾಲಯದ ಬಂದ್‌ಗೆ ಹಲವು ಸಂಘಟನೆಗಳು ಕರೆ ನೀಡಿವೆ. ರಾಜ್ಯದ ಇತರೆ ಜಿಲ್ಲೆಗಳಿಂದಲೂ ಪ್ರತಿಭಟನಕಾರರು ಬರಲಿದ್ದಾರೆ. ಜೈನ್ ವಿಶ್ವವಿದ್ಯಾಲಯದ ಎದುರೂ ಪ್ರತಿಭಟನೆ ನಡೆಸಲಾಗುವುದು' ಎಂದು ದಲಿತ ಸಂಘಟನೆಗಳ ಮುಖಂಡರು ತಿಳಿಸಿದ್ದಾರೆ.

ಪಿಎಫ್‌ಐ ಸಂಚು: 3ನೇ ಆರೋಪಿ ಬಂಧನ

ನವದೆಹಲಿ (ಪಿಟಿಐ): ರಾಜಸ್ಥಾನದಲ್ಲಿ ಶಾಂತಿ ಕದಡಲು ಮತ್ತು ಕೋಮು ದ್ವೇಷ ಹರಡಲು ನಿಷೇಧಿತ ಪಿಎಫ್‌ಐ ಸಂಚು ರೂಪಿಸಿದ್ದ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಪ್ರಕರಣದ ಮೂರನೇ ಆರೋಪಿಯನ್ನು ಬಂಧಿಸಿದೆ ಎಂದು ಅಧಿಕಾರಿ ಯೊಬ್ಬರು ಶನಿವಾರ ತಿಳಿಸಿದ್ದಾರೆ. ಉದಯಪುರದ ಮುರ್ಶಿದ್ ನಗರದ ನಿವಾಸಿ ಮೊಹಮ್ಮದ್ ಸೊಹೈಲ್ ಬಂಧಿತ. ಈತನನ್ನು ಜೈಪುರದಲ್ಲಿ ಶುಕ್ರವಾರ ಬಂಧಿಸಲಾಗಿದೆ ಎಂದು ಎನ್‌ಐಎ ವಕ್ತಾರರು ಮಾಹಿತಿ ನೀಡಿದ್ದಾರೆ.

'ಬೊಬ್ಬೆಯಲ್ಲ, ನಾದದ ಸಂಸ್ಕೃತಿಯತ್ತ ಹೊರಳಲಿ

ಸುಧಾ ಓದಿರಿ

• ಪ್ರವೀಣಕುಮಾರ್ ಪಿ.ವಿ./ ಬಾಲಚಂದ್ರ ಎಚ್.

ಉಡುಪಿ: 'ಯಕ್ಷಗಾನವು ಸ್ವರದ ವಿಚಾರದಲ್ಲಿ ಬೊಬ್ಬೆಯ ಸಂಸ್ಕೃತಿಯಿಂದ ನಾದದ ಸಂಸ್ಕೃತಿಯತ್ತ ಸಾಗಬೇಕಿದೆ' ಎಂಬ ಆಶಯವನ್ನು 'ರಾಜ್ಯಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನ 2023'ರ ಸರ್ವಾಧ್ಯಕ್ಷ ಡಾ.ಎಂ.ಪ್ರಭಾಕರ ಜೋಶಿ ಶನಿವಾರ ವ್ಯಕ್ತಪಡಿಸಿದರು.

2ದಿನಗಳ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಯಕ್ಷಗಾನ ರಂಗಕ್ಕೆ ಒಪ್ಪುವ, ಒಂದು ಸಮಗ್ರ ರಂಗ ರೂಪ, ಪೀಠ, ಆಕಾರ, ಧ್ವನಿ-ಬೆಳಕು-ಚೌಕಿ-ವ್ಯವಸ್ಥೆಗಳನ್ನು ತಜ್ಞರ ನೇತೃತ್ವದಲ್ಲಿ ರೂಪಿಸಿ, ಎಲ್ಲರ ಮನವೊಲಿಸಿ ಅಳವಡಿಸಬೇಕು' ಎಂದು ಸಲಹೆ ನೀಡಿದರು.

'ರಂಗಸ್ಥಳ, ಅದರ ರಚನೆ, ವಿಭಾಗ, ಆಸನ ಸ್ವರೂಪಗಳು, ಹಿಮ್ಮೇಳ, ಉಡುಪು ಅಸಮರ್ಪಕವಾಗಿವೆ. ಧ್ವನಿ, ಬೆಳಕುಗಳು ಭೀಕರವಾಗಿವೆ. ಯಾವುದೇ ಪ್ರಬುದ್ಧ ರಂಗವ್ಯವಸ್ಥೆ ಇವನ್ನು ಒಪ್ಪುವಂತಿಲ್ಲ. ವಿಶ್ವಮಟ್ಟದ ರಂಗಭೂಮಿಯಲ್ಲಿ ಸ್ವೀಕಾರ ಯೋಗ್ಯವಾದ ರೀತಿ ಕಲಾ ಪ್ರದರ್ಶನ ನೀಡಬೇಕು' ಎಂದರು.

'ಮಹಿಳಾ ಯಕ್ಷಗಾನವು ಮಹಿಳೆಯರು ಆಡುವ ಯಕ್ಷಗಾನವಷ್ಟೇ ಆಗದೆ, ಮಹಿಳಾ ಭಾವದ ಯಕ್ಷಗಾನ ಆಗಬೇಕು. ಸ್ತ್ರೀವಾದಿ ಆವೇಶ, ವ್ಯಾವಹಾರಿಕ ಬಳಕೆ ಆಗಲೆಂಬುದು ಇದರ ಅರ್ಥ ಅಲ್ಲ' ಎಂದರು.

ಯಕ್ಷಗಾನದ ಅಪಬಳಕೆಗೆ ಆಕ್ಷೇಪ: 'ಕ್ರೀಡಾಂಗಣ, ಸ್ತಬ್ಧಚಿತ್ರಗಳಲ್ಲಿ ಯಕ್ಷಗಾನದ ವೇಷ ಧರಿಸಿ ನಿಲ್ಲುವುದು, ಟಿ.ವಿ. ವಾಹಿನಿಗಳ ರಿಯಾಲಿಟಿ ಶೋಗಳಲ್ಲಿ ಅಲಂಕಾರಕ್ಕಾಗಿ ಯಕ್ಷಗಾನದ ಬಳಕೆ, ಸಿನಿಮಾ ಪದ್ಯಗಳಿಗೆ ಯಕ್ಷಗಾನ ವೇಷಗಳ ಕುಣಿತದ ಅಪಕ್ವ ಅನ್ವಯಗಳು ಸರಿಯಲ್ಲ. ಸಭೆಗಳಲ್ಲಿ ರಂಗಾಲಂಕಾರವಾಗಿ, ಸ್ವಾಗತಕಾರರಾಗಿ ವೇಷ ಹಾಕಿಸುವುದು ಅಥವಾ ಹಿಮ್ಮೇಳ ಬಳಸುವುದು ಕಲೆಗೆ ಅಗೌರವ' ಎಂದು ಜೋಶಿ ಆಕ್ಷೇಪ ವ್ಯಕ್ತಪಡಿಸಿದರು.

'ಯಕ್ಷಗಾನ ಕುರಿತು ಪ್ರೀತಿ, ಕಾಳಜಿಯಿಲ್ಲದೇ ಆಕರ್ಷಕ ಸಿದ್ಧ ಹಣೆಪಟ್ಟಿಗಳಿಂದ ಯಕ್ಷಗಾನದ ಅಧ್ಯಯನ ಅಪಾಯಕಾರಿ. ಇಂತಹ ಅಧ್ಯಯನಕಾರರ, ಉದ್ದೇಶ, ಧೋರಣೆ ತಿಳಿಯದೇ ಕಲಾವಿರು, ಮೇಳದಯಜಮಾನರು, ನೋಡುಗರು ಇಂತಹ ಅಧ್ಯಯನಕ್ಕೆ ಸಹಕರಿಸಬಾರದು' ಎಂದು ಮನವಿ ಮಾಡಿದರು.

'ಪೌರಾಣಿಕ ಪಾತ್ರಕ್ಕೆ ಒತ್ತು ಸಿಗಲಿ'

'ಸಾಮಾಜಿಕ ಯಕ್ಷಗಾನ ಪ್ರಸಂಗಗಳಲ್ಲಿ ಬಳಸುವ ಭಾಷೆ ಬೇಸರ ತರಿಸುವಂತಿರುತ್ತದೆ. ಸಾಮಾಜಿಕ ವಿಷಯಗಳನ್ನು ನಾಟಕ, ಸಿನಿಮಾಗಳ ಮೂಲಕ ಅಭಿವ್ಯಕ್ತಗೊಳಿಸಲಿ. ಯಕ್ಷಗಾನದಲ್ಲಿ ಪೌರಾಣಿಕ ಪಾತ್ರಗಳಿಗೆ ಮಾತ್ರ ಒತ್ತು ಸಿಗಬೇಕು' ಎಂದು ಸಮ್ಮೇಳನ ಉದ್ಘಾಟಿಸಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ರತಿಪಾದಿಸಿದರು.

ಮುಖ್ಯಮಂತ್ರಿ ಗೈರು

ಸಮ್ಮೇಳನ ಉದ್ಘಾಟಿಸಬೇಕಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗೈರಾಗಿದ್ದರು. ಅಮಿತ್ ಶಾ ಅವರನ್ನು ಸ್ವಾಗತಿಸಲು ಅವರು ಕೇರಳದ ಕಣ್ಣೂರಿಗೆ ತೆರಳಿದ್ದರು.



ಸಮ್ಮೇಳನದ ಸರ್ವಾಧ್ಯಕ್ಷ ಡಾ.ಎಂ.ಪ್ರಭಾಕರ ಜೋಶಿ ಅವರನ್ನು ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಯಿತು. ಜಿಲ್ಲಾಧಿಕಾರಿ ಕೂರ್ಮಾ ರಾವ್, ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಡಾ.ಜಿ.ಎಲ್.ಹೆಗಡೆ, ಸುಚೇತಾ ಪ್ರಭಾಕರ ಜೋಶಿ, ಸಚಿವ ಸುನಿಲ್ ಕುಮಾರ್, ಶಾಸಕ ರಘುಪತಿ ಭಟ್ ಇದ್ದರು —ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ರೋಹಿತ್ ಚಕ್ರತೀರ್ಥಗೆ ಕಪ್ಪುಬಾವುಟ ಪ್ರದರ್ಶನ

ಉಡುಪಿ: ಯಕ್ಷಗಾನ ಸಮ್ಮೇಳನದ ಗೋಷ್ಠಿಗಳ ಉದ್ಘಾಟನೆ ಹಾಗೂ ದಿಕ್ಸೂಚಿ ಭಾಷಣ ಮಾಡಲು ಬಂದಿದ್ದ ಲೇಖಕ ರೋಹಿತ್ ಚಕ್ರತೀರ್ಥ ವಿರುದ್ಧ ಬಿಲ್ಲವ ಸಂಘಟನೆಗಳ ಮುಖಂಡರು ಶನಿವಾರ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸಿದರು.

ನಾರಾಯಣ ಗುರುಗಳ ಪಠ್ಯವನ್ನು ಕೈಬಿಟ್ಟು ಗುರುಗಳಿಗೆ ಹಾಗೂ ಬಿಲ್ಲವ ಸಮಾಜಕ್ಕೆ ಚಕ್ರತೀರ್ಥ ಅವಮಾನಿಸಿದ್ದು, ಅವರ ಭಾಷಣ ಮಾಡಲು ಅವಕಾಶ ನೀಡಬಾರದು ಎಂದು ಘೋಷಣೆ ಕೂಗಿದರು. ಸಮ್ಮೇಳನ ನಡೆಯುವ ಸ್ಥಳದ ಕಡೆಗೆ ಹೊರಟಿದ್ದ ಪ್ರತಿಭಟನಕಾರರನ್ನು ರಾಷ್ಟ್ರೀಯ ಹೆದ್ದಾರಿಯಲ್ಲಿ ಪೊಲೀಸರು ತಡೆದರು. ಗೆಜ್ಜೆಗಿರಿ ಮೇಳದ ಜಿಲ್ಲಾ ಸಂಚಾಲಕ ನವೀನ್ ಅಮೀನ್, ಬಿಲ್ಲವ ಯುವ ವೇದಿಕೆ ಅಧ್ಯಕ್ಷ ಪ್ರವೀಣ್ ಪೂಜಾರಿ, ಮುಖಂಡರಾದ ಸುನೀಲ್ ಬಂಗೇರ, ಮಾಧವ ಬನ್ನಂಜೆ, ದೀಪಕ್ ಕೋಟ್ಯಾನ್ ಸೇರಿದಂತೆ ಸಮಾಜದ ಹಲವು ಮುಖಂಡರು ಇದ್ದರು.

ಯಕ್ಷಗಾನ, ಪುರಾಣದ ವಿರುದ್ಧ ಹುನ್ನಾರ: ಚಕ್ರತೀರ್ಥ

'ನಿರಂತರ ದಾಳಿಯಮೂಲಕ ಯಕ್ಷಗಾನ ಕಲೆಯನ್ನು ಒಡೆಯುವ ಹಾಗೂ ಪುರಾಣಗಳು ಗೊಡ್ಡು ಸಂಪ್ರದಾಯವಾಗಿದ್ದು, ಆಧುನಿಕ ಕಾಲಕ್ಕೆ ಅದರ ಅಗತ್ಯ ಇಲ್ಲ ಎಂದು ಬಿಂಬಿಸುವ ಹುನ್ನಾರ ನಡೆಯುತ್ತಿದೆ' ಎಂದು ಲೇಖಕ ರೋಹಿತ್ ಚಕ್ರತೀರ್ಥ ಆರೋಪಿಸಿದರು. ಯಕ್ಷಗಾನ ಸಮ್ಮೇಳನದ ಗೋಷ್ಠಿಗಳ ಉದ್ಘಾಟನೆ ಸಮಾರಂಭದಲ್ಲಿ ದಿಕ್ಸೂಚಿ ಭಾಷಣದಲ್ಲಿ ಅವರು, 'ಪುರಾಣದಲ್ಲಿ ಕಪೋಲಕಲ್ಪಿತ ಸುಳ್ಳುಗಳು ಕತೆಗಳೇ ತುಂಬಿವೆ. ಅವುಗಳಿಂದ ಮೌಲ್ಯ ಹಾಗೂ ಚಿಂತನೆ ಪಡೆಯಲು ಸಾಧ್ಯವಿಲ್ಲ ಎಂದು ಬಿಂಬಿಸುವ ಯತ್ನ ನಡೆದಿದೆ' ಎಂದರು.

ಲಿಂಗಾಯತ 'ಸ್ವತಂತ್ರ ಧರ್ಮ' ಬೆಂಬಲಿಸುವ ಪಕ್ಷಕ್ಕೆ ಮತ: ಚನ್ನಬಸವಾನಂದ ಸ್ವಾಮೀಜಿ

ಹುಬ್ಬಳ್ಳಿ: 'ಲಿಂಗಾಯತ ಸ್ವತಂತ್ರ ಧರ್ಮವಾಗಲು ಕೇಂದ್ರಕ್ಕೆ ಶಿಫಾರಸು ಸಲ್ಲಿಸುವುದಾಗಿ ಪ್ರಣಾಳಿಕೆಯಲ್ಲಿ ದಾಖಲಿಸುವ ಪಕ್ಷಕ್ಕೆ ಮತ ಹಾಕುತ್ತೇವೆ' ಎಂದು ಅಖಿಲ ಭಾರತ ಲಿಂಗಾಯತ ಸಮನ್ವಯ ಸಮಿತಿಯ ಗೌರವಾಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ, 'ವೀರಶೈವ ಲಿಂಗಾಯತರು ಮಹಾರಾಷ್ಟ್ರದಲ್ಲಿ ಹೋಗಿ ತಾವು 'ಹಿಂದೂಗಳು' ಎಂದು ಹೇಳಿಕೊಳ್ಳುತ್ತಾರೆ. ಆದರೆ ನಾವು ಹಿಂದೂಗಳಲ್ಲ' ಹಿಂದೂ ಎಂಬುದು ಧರ್ಮ ಅಲ್ಲ, ಜೀವನಶೈಲಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ, ಪ್ರಧಾನಿ ಮೋದಿಯವರೂ ಹೇಳಿದ್ದಾರೆ. 500 ವರ್ಷಗಳ ಇತಿಹಾಸ ಇರುವ ಸಿಖ್ ಸಮಾಜ ಪ್ರತ್ಯೇಕ ಧರ್ಮ ಎನಿಸಿಕೊಂಡಿದೆ. ಜೈನರದ್ದೂ ಪ್ರತ್ಯೇಕ ಧರ್ಮ ಆಗಿರುವಾಗ 900 ವರ್ಷಗಳ ಹಿಂದಿನ ಲಿಂಗಾಯತ ಸಮುದಾಯ ಏಕೆ ಸ್ವತಂತ್ರ ಧರ್ಮ ಆಗಬಾರದು ಎಂದರು.

ಬ್ರಾಹ್ಮಣ ಸಿ.ಎಂ ಚರ್ಚೆಯಾಗಿಲ್ಲ: ಮಾಧುಸ್ವಾಮಿ

ತುಮಕೂರು: 'ಬ್ರಾಹ್ಮಣರನ್ನು ಮುಖ್ಯಮಂತ್ರಿ ಮಾಡುವ ವಿಷಯ ನಮ್ಮ ಪಕ್ಷದಲ್ಲಿ ಚರ್ಚೆಯೇ ಆಗಿಲ್ಲ' ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಶನಿವಾರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿಯಲ್ಲಿ ಯಾರನ್ನು ಮುಖ್ಯಮಂತ್ರಿ ಮಾಡಬೇಕು ಎನ್ನುವುದು ಕುಮಾರಸ್ವಾಮಿ ಅವರಿಗೆ ಸಂಬಂಧಿಸಿದ್ದಲ್ಲ. ಅವರ ಪಕ್ಷದ್ದು ಅವರು ನೋಡಿಕೊಳ್ಳಲಿ' ಎಂದು ಕುಟುಕಿದರು.

ವೈಎಸ್‌ಆರ್ ಕಾಂಗ್ರೆಸ್ ಸಂಸದನ ಪುತ್ರ ಬಂಧನ

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸಂಸದ ಶ್ರೀನಿವಾಸುಲು ರೆಡ್ಡಿ ಅವರ ಪುತ್ರ ರಾಘವ್ ಮಗುಂಟ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಮಗುಂಟ ಅವರನ್ನು ಬಂಧಿಸಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣದಡಿ 9 ಜನರನ್ನು ಬಂಧಿಸಿದಂತಾಗಿದೆ. ಇದೇ ವಾರದಲ್ಲಿ ಶಿರೋಮಣಿ ಅಕಾಲಿದಳ ಶಾಸಕ ದೀಪ್ ಮಲ್ಹೋತ್ರಾ ಅವರ ಪುತ್ರ ಗೌತಮ್ ಮತ್ತು ಚಾರಿಯಟ್ ಪ್ರೊಡಕ್ಷನ್ಸ್ ಮೀಡಿಯಾ ಲಿಮಿಟೆಡ್‌ನ ನಿರ್ದೇಶಕ ರಾಜೇಶ್ ಜೋಶಿ ಅವರನ್ನು ಬಂಧಿಸಲಾಗಿತ್ತು.

ಮೈತ್ರಿ: ಜನಾರ್ದನ ರೆಡ್ಡಿ ಸುಳಿವು

ರಾಮದುರ್ಗ (ಬೆಳಗಾವಿ ಜಿಲ್ಲೆ): 'ಚುನಾವಣೆ ಬಳಿಕ ರಾಜ್ಯದಲ್ಲಿ ಅಧಿಕಾರಕ್ಕೇರುತ್ತೇನೆ. ಇಲ್ಲದಿದ್ದರೆ ಅಧಿಕಾರಕ್ಕೆ ಬರುವವರ ಕೈ ಹಿಡಿದಾದರೂ ಅಧಿಕಾರ ಮಾಡುತ್ತೇನೆ' ಎಂದು ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸ್ಥಾಪಕ ಗಾಲಿ ಜನಾರ್ದನ ರೆಡ್ಡಿ ಶನಿವಾರ ಹೇಳಿದರು.

ಇಲ್ಲಿ ರೆಡ್ಡಿ ಸಮಾಜ ಹಮ್ಮಿಕೊಂಡಿದ್ದ ವೇಮನರ 611ನೇ ಜಯಂತ್ಯುತ್ಸವ ಸಮಾರಂಭ ಉದ್ಘಾಟಿಸಿದ ಅವರು, 'ನನ್ನ ಕೈ ಯಾರು ಹಿಡಿಯುತ್ತಾರೆ, ನಾನು ಯಾರ ಕೈಹಿಡಿಯುತ್ತೇನೆ ಎನ್ನುವುದು ಚುನಾವಣೆ ಬಳಿಕ ಗೊತ್ತಾಗಲಿದೆ' ಎನ್ನುವ ಮೂಲಕ ಮೈತ್ರಿಯ ಸುಳಿವು ನೀಡಿದರು. ನೀಡಿದ್ದಾರೆ.

'ಕಲ್ಯಾಣ ಕರ್ನಾಟಕದ 13 ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ರೆಡ್ಡಿ ಜನಾಂಗವಿದೆ. ಅಧಿಕಾರ ಹಿಡಿಯುವ ಸಾಮರ್ಥ್ಯ ಹೊಂದಿದೆ' ಎಂದು ಅಭಿಪ್ರಾಯಪಟ್ಟರು.

ದಾನ ಮಾಡಿರುವ ಕೈ ಅಧಿಕಾರಕ್ಕೆ ಬರಲಿ, ನಮಗೆ ಅವಕಾಶ ಕೊಡಿ– ಕವನ ವಾಚಿಸಿ ಡಿಕೆಶಿ ಮನವಿ

'ಕಮಲ ಕೆರೆಯಲ್ಲಿ, ತೆನೆ ಹೊಲದಲ್ಲಿರಲಿ..'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ ಚೆಂದ. ದಾನ, ಧರ್ಮ ಮಾಡಿರುವ ಕೈ ಅಧಿಕಾರಕ್ಕೆ ಬಂದರೆ ಚೆಂದ...'

–ಜಿಲ್ಲೆಯ ಮದ್ದೂರು ಪಟ್ಟಣದಲ್ಲಿ ಶನಿವಾರ ನಡೆದ ಪ್ರಜಾಧ್ವನಿ ಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೀಗೆ ಕವಿತೆ ಓದಿ ಗಮನ ಸೆಳೆದರು.

'ಎಚ್.ಡಿ. ಕುಮಾರಸ್ವಾಮಿಗೆ ಅಧಿಕಾರ ಕೊಟ್ಟಿದ್ದೀರಿ, ನಾನೂ ನಿಮ್ಮ ಮನೆಯ ಮಗ. ಒಮ್ಮೆ ಅಧಿಕಾರ ಕೊಡಿ, ನನ್ನ ಅಧಿಕಾರವನ್ನೂ ನೋಡಿ' ಎಂದು ಪರೋಕ್ಷವಾಗಿ ಮುಖ್ಯಮಂತ್ರಿಯಾಗುವ ಅಭಿಲಾಷೆ ವ್ಯಕ್ತಪಡಿಸಿದರು.

'ನಾವು ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ನಡೆಸುತ್ತೇವೆ. ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಹಾಗೂ ನನ್ನ ನಾಯಕತ್ವಕ್ಕೆ ಆಶೀರ್ವಾದ ಮಾಡಬೇಕು. ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ, ಬಿಜೆಪಿಯಿಂದ ರಾಜ್ಯ, ರಾಷ್ಟ್ರವನ್ನು ಕಾಪಾಡಬೇಕಾದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು. ನಮ್ಮ ಮನೆಯಲ್ಲಿ ನನ್ನನ್ನು ಬಿಟ್ಟು ಬೇರೆ ಯಾರೂ ವಿಧಾನಸಭೆಗೆ ಸ್ಪರ್ಧಿಸುವುದಿಲ್ಲ. ಸಂಸದರನ್ನು ನಿಲ್ಲಿಸುವ ತೀರ್ಮಾನಿಸಿಲ್ಲ. ಬೇರೆ ಪಕ್ಷಗಳ ತೀರ್ಮಾನಗಳಿಗೂ ನಮಗೂ ಸಂಬಂಧವಿಲ್ಲ' ಎಂದರು.

'ಬಿಜೆಪಿಯವರು ಪ್ರಚಾರಕ್ಕೆ ಪ್ರಧಾನಿ ಕರೆತಂದರೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನರ ತೀರ್ಮಾನವೇ ಅಂತಿಮ. ರಾಜಕೀಯ ಮಾಡಬೇಕು ಅಷ್ಟೇ, ಯಾರನ್ನೂ ಕಟ್ಟಿ ಹಾಕಲು ಸಾಧ್ಯವಿಲ್ಲ' ಎಂದರು.


'ಕರಾವಳಿಯ 10 ಕ್ಷೇತ್ರಗಳಲ್ಲಿ ಗೆಲುವು'

ಬೆಂಗಳೂರು: 'ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ಬಿಜೆಪಿಯ ಆಂತರಿಕ ಸಮೀಕ್ಷೆಯಲ್ಲಿ ಕರಾವಳಿಯಲ್ಲಿ ಕಾಂಗ್ರೆಸ್ ನಾಲ್ಕು ಕ್ಷೇತ್ರಗಳಲ್ಲಿ ಗೆಲ್ಲಲಿದೆ' ಎಂಬ ವರದಿ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಿಮಗೆ ತಪ್ಪು ಮಾಹಿತಿ ಬಂದಿದೆ. ನಮ್ಮ ಸಮೀಕ್ಷೆಯಲ್ಲಿ 10 ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ ಎಂದು ಬಂದಿದೆ' ಎಂದರು.

'ಕರಾವಳಿ ಭಾಗದಲ್ಲಿ ಕಾಂಗ್ರೆಸ್ ಪಕ್ಷ ತನ್ನದೇ ಆದ ಕಾರ್ಯಕ್ರಮ ರೂಪಿಸಿದೆ. ಈ ಭಾಗಕ್ಕೆ ಪ್ರತ್ಯೇಕ ಪ್ರಣಾಳಿಕೆ ಮಾಡಿ, ಹಿಂದುಳಿದ ಸಮುದಾಯಗಳಾದ ಮೊಗವೀರರು, ಬಂಟರು, ಬಿಲ್ಲವರು, ಕುಲಾಲ ಸಮುದಾಯಗಳಿಗೆ ಪ್ರತ್ಯೇಕ ನಿಗಮ ಸ್ಥಾಪಿಸುವ ಮತ್ತು ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವ ಬಗ್ಗೆ ಭರವಸೆ ನೀಡಲಾಗಿದೆ' ಎಂದರು.

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023



ನೆರವು ವಾಪಸ್

ಸಿಂದಗಿಯಲ್ಲಿ ಶನಿವಾರ ಕಾಂಗ್ರೆಸ್ ಆಯೋಜಿಸಿದ್ದ ಪ್ರಜಾಧ್ವನಿ ಯಾತ್ರೆ ಸಮಾವೇಶದಲ್ಲಿ ಪಟ್ಟಣದ ಇಂದಿರಾಗಾಂಧಿ ಪ್ರಾಥಮಿಕ ಶಾಲೆಯ 5ನೇ ತರಗತಿಯ ವಿದ್ಯಾರ್ಥಿನಿ ಜೀಯಾ ರಫೀಕ ಮಣೂರ ತಾನು ಕೂಡಿಟ್ಟ ₹ 5 ಸಾವಿರ ಹಣವನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರಿಗೆ ನೀಡಿದಳು. ಸಿದ್ದರಾಮಯ್ಯ ಆ ಹಣವನ್ನು ಶೈಕ್ಷಣಿಕ ವೆಚ್ಚಕ್ಕೆ ಬಳಸಿಕೊಳ್ಳುವಂತೆ ಬಾಲಕಿಗೆ ಮರಳಿ ನೀಡಿದರು

ಕ್ಷೇತ್ರ ಬದಲಿಸುವ ಮನಸ್ಸಿಲ್ಲದ ರೇವಣ್ಣ: ಅರಸೀಕೆರೆ ಸಭೆಯಲ್ಲಿ ಎಚ್‌ಡಿಕೆ ಭಾಗಿ

ಹಾಸನ: ಟಿಕೆಟ್ ಗೊಂದಲಕ್ಕೆ ಇಂದು ತೆರೆ?

ಪ್ರಜಾವಾಣಿ ವಾರ್ತೆ

ಹಾಸನ: 'ಹಾಸನ ಕ್ಷೇತ್ರಕ್ಕೆ ಭವಾನಿ ಅನಿವಾರ್ಯತೆ ಇಲ್ಲ' ಎಂದು ಮತ್ತೊಮ್ಮೆ ಹೇಳಿಕೆ ನೀಡಿರುವ ಎಚ್.ಡಿ. ಕುಮಾರಸ್ವಾಮಿ, ಜಿಲ್ಲೆಯ ಅರಸೀಕೆರೆಯಲ್ಲಿ ಭಾನುವಾರ ನಡೆಯಲಿರುವ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಲಿದ್ದು, ಅರಸೀಕೆರೆ, ಹಾಸನ ಕ್ಷೇತ್ರಗಳ ಟಿಕೆಟ್ ಗೊಂದಲಕ್ಕೆ ತೆರೆ ಬೀಳುವ ನಿರೀಕ್ಷೆ ಇದೆ.

ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಸಭೆಯಲ್ಲಿ ಪಾಲ್ಗೊಳ್ಳುತ್ತಿಲ್ಲ. 'ನನ್ನನ್ನು ಬಿಟ್ಟು ಸಭೆ ಮಾಡುತ್ತಿದ್ದಾರೆ. ನಾನ್ಯಾಕೆ ಹೋಗಲಿ' ಎಂದು ಹೇಳಿದ್ದಾರೆ.

ಅರಸೀಕೆರೆಯಲ್ಲಿ ಜೆಡಿಎಸ್ ಪರ್ಯಾಯ ಅಭ್ಯರ್ಥಿಯನ್ನು ಕಣಕ್ಕಿಳಿಸುವುದು ಖಚಿತವಾಗಿದ್ದು, ಕುರುಬ ಸಮಾಜದ ಮುಖಂಡ ಬಾಣಾವರ ಅಶೋಕ್ ಅವರಿಗೆ ಟಿಕೆಟ್ ಘೋಷಣೆಯಾಗುವ ಸಾಧ್ಯತೆ ಇದೆ.

'ಹಾಸನ ಕ್ಷೇತ್ರದ ಅಭ್ಯರ್ಥಿ ಕುರಿತು ಜಿಲ್ಲೆಯ ಶಾಸಕರು, ಸಂಸದರು, ಸ್ಥಳೀಯ ಮುಖಂಡರೊಂದಿಗೆ ಎಚ್‌ಡಿಕೆ ಚರ್ಚಿಸುವರು. ಸದ್ಯಕ್ಕೆ ಹಾಸನದ ಟಿಕೆಟ್ ಘೋಷಣೆ ಮಾಡದಿರಲು ನಿರ್ಧರಿಸಲಾಗಿದೆ.

'ಭವಾನಿ ರೇವಣ್ಣ ಸ್ಪರ್ಧೆಗೆ ಕುಮಾರಸ್ವಾಮಿ ಒಪ್ಪುತ್ತಿಲ್ಲ. ರೇವಣ್ಣ ಅವರನ್ನೇ ಅಲ್ಲಿ ಕಣಕ್ಕಿಳಿಸಬೇಕು ಎಂಬ ಆಲೋಚನೆ ಇದ್ದರೂ ರೇವಣ್ಣ ಅವರಿಗೆ ಹೊಳೆನರಸೀಪುರ ಕ್ಷೇತ್ರ ಬದಲಿಸಲು ಮನಸ್ಸಿಲ್ಲ. ಕೆ.ಆರ್. ಪೇಟೆಯಿಂದ ಸ್ಪರ್ಧಿಸುವಂತೆ ನೀಡಿದ್ದ ಸಲಹೆಯನ್ನು ರೇವಣ್ಣ ಅದೇ ಕಾರಣಕ್ಕೆ ತಿರಸ್ಕರಿಸಿದ್ದರು.

ಈ ಮಧ್ಯೆ, ಹಾಸನ ಕ್ಷೇತ್ರದ ಆಕಾಂಕ್ಷಿ ಎಚ್.ಪಿ.ಸ್ವರೂಪ್ ಅವರಿಗೆ ಜೆಡಿಎಸ್ ಟಿಕೆಟ್ ಸಿಗದಿದ್ದರೆ, ಪಕ್ಷಕ್ಕೆ ಸೆಳೆಯಲು ಕಾಂಗ್ರೆಸ್ ಯತ್ನಿಸುತ್ತಿದೆ. ಕೆಪಿಸಿಸಿ ಅಧ್ಯಕ್ಷರನ್ನು ಸ್ವರೂಪ್ ಭೇಟಿ ಮಾಡಿದ್ದಾರೆ ಎನ್ನಲಾಗಿದೆ.

ಇದನ್ನು ಸ್ವರೂಪ್ ಅಲ್ಲಗಳೆದಿದ್ದಾರೆ. 'ಬೇರೆ ಪಕ್ಷಗಳಿಗೆ ಹೋಗುವ ಪ್ರಶ್ನೆಯೇ ಇಲ್ಲ. ಟಿಕೆಟ್ ಸಿಗಲಿ, ಸಿಗದೇ ಇರಲಿ, ಜೆಡಿಎಸ್‌ನಲ್ಲಿಯೇ ಉಳಿಯುತ್ತೇನೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಎಚ್‌ಡಿಕೆ ಸೂಚಿಸಿದ ಕಡೆ ಭವಾನಿ ಸ್ಪರ್ಧೆ'

ತುರುವೇಕೆರೆ (ತುಮಕೂರು ಜಿಲ್ಲೆ): 'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಕುಟುಂಬದಲ್ಲಿ ಒಡಕಿಲ್ಲ. ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಸೂಚಿಸುವ ಕ್ಷೇತ್ರದಿಂದಲೇ ಭವಾನಿ ರೇವಣ್ಣ ಸ್ಪರ್ಧಿಸುತ್ತಾರೆ' ಎಂದು ಶಾಸಕ ಎಚ್.ಡಿ.ರೇವಣ್ಣ ಹೇಳಿದ್ದಾರೆ.

ತಾಲ್ಲೂಕಿನ ಮಾಯಸಂದ್ರ ಹೋಬಳಿಯ ಶೆಟ್ಟಿಗೊಂಡನಹಳ್ಳಿಯಲ್ಲಿ ಶನಿವಾರ ನಡೆದ ಹಳ್ಳಿಕಾರ ಮಠ ಸಮರ್ಪಣೆ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಭವಾನಿ ರೇವಣ್ಣ ಅವರ ಸ್ಪರ್ಧೆ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕೇವಲ ಭವಾನಿ ಅಷ್ಟೇ ಏಕೆ ಪಕ್ಷದ ಎಲ್ಲರೂ ಕುಮಾರಸ್ವಾಮಿ ಅವರ ಸೂಚಿಸಿದ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಾರೆ ಎಂದು ಸ್ಪಷ್ಟಪಡಿಸಿದರು.

ಕುಟುಂಬ ರಾಜಕಾರಣ ಕುರಿತ ಪ್ರಶ್ನೆಗೆ, 'ನಾಳೆಯೇ ನಾನು ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ರಾಜೀನಾಮೆ ಕೊಡಿಸುತ್ತೇನೆ. ರಾಷ್ಟ್ರೀಯ ಪಕ್ಷಗಳ ರಾಜಕಾರಣಿಗಳು ತಮ್ಮ ಕುಟುಂಬದವರಿಗೆ ಟಿಕೆಟ್ ನೀಡುವುದನ್ನು ನಿಲ್ಲಿಸುತ್ತಾರಾ? ಎಂದು ಸವಾಲೆಸೆದರು.

ಕೆಟ್ಟವನೆಂದು ಬಿಂಬಿಸಿ ಹೊರದಬ್ಬಿದರು: ರಾಮಸ್ವಾಮಿ

ಅರಕಲಗೂಡು (ಹಾಸನ): 'ಅತ್ಯಂತ ಪ್ರಾಮಾಣಿಕ ಶಾಸಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನನ್ನನ್ನು, ತಮ್ಮ ಇಚ್ಛೆಗೆ ಅನುಗುಣವಾಗಿ ನಡೆಯಲಿಲ್ಲ ಎಂಬ ಕಾರಣಕ್ಕೆ ಕೆಟ್ಟವನೆಂದು ಬಿಂಬಿಸಿ ಜೆಡಿಎಸ್‌ನಿಂದ ಹೊರದಬ್ಬಲಾಗಿದೆ' ಎಂದು ಶಾಸಕ ಎ.ಟಿ. ರಾಮಸ್ವಾಮಿ ದೂರಿದರು.

ಶನಿವಾರ ನಡೆದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ನಾನು ಇದನ್ನು ಸವಾಲಾಗಿ ಸ್ವೀಕರಿಸುತ್ತೇನೆ. ಜನಗಳ ಮುಂದೆ ಮತ ಭಿಕ್ಷೆಗೆ ಬರುತ್ತೇನೆ. ಒಳ್ಳೆಯವನಾದರೆ ನನಗೆ ಆಶೀರ್ವದಿಸಿ' ಎಂದು ಭಾವುಕರಾಗಿ ಹೇಳಿದರು.

ಕುಮಾರಸ್ವಾಮಿ ಆಂತರಿಕ ಸಮೀಕ್ಷೆ

'ಭವಾನಿ ಸ್ಪರ್ಧಿಸುವ ಅನಿವಾರ್ಯತೆ ಇಲ್ಲ' ಎಂದು ಹೇಳಿದ್ದರೂ ಎಚ್.ಡಿ. ಕುಮಾರಸ್ವಾಮಿ, ಹಾಸನ ಕ್ಷೇತ್ರದಲ್ಲಿ ಆಂತರಿಕ ಸಮೀಕ್ಷೆ ಮಾಡುತ್ತಿದ್ದಾರೆ. ಆಪ್ತರ ಮೂಲಕ ಕ್ಷೇತ್ರದ ವಾಸ್ತವ ಸ್ಥಿತಿಯ ಬಗ್ಗೆ ಮಾಹಿತಿ ಕ್ರೋಡೀಕರಿಸುತ್ತಿದ್ದಾರೆ.

'ಯಾರಿಗೆ ಟಿಕೆಟ್ ನೀಡಿದರೆ ಪಕ್ಷಕ್ಕೆ ಅನುಕೂಲವಾಗುತ್ತದೆ? ಕ್ಷೇತ್ರದಲ್ಲಿ ಯಾವ ಸಮಸ್ಯೆಗಳು ಪ್ರಮುಖವಾಗಿವೆ ಎಂಬ ಮಾಹಿತಿ ಕಲೆ ಹಾಕುತ್ತಿದ್ದಾರೆ. ಕೆಲವರಿಗೆ ಸ್ವತಃ ಅವರೇ ಕರೆ ಮಾಡಿ, ಮಾಹಿತಿ ಪಡೆದಿದ್ದಾರೆ' ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ.

ಚಿನ್ನ, ಬೆಳ್ಳಿ ಧಾರಣೆ (ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹58,850
ಒಡವೆ ಚಿನ್ನ 1ಗ್ರಾಂ	₹5,415
ಬೆಳ್ಳಿ ಕೆ.ಜಿಗೆ	₹68,600

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹448

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1640)
ಸೋಯಾ (ರಿಫೈನ್ಡ್)	₹1160 (1160)
ಸೂರ್ಯಕಾಂತಿ (ರಿಫೈನ್ಡ್)	₹1170 (1165)
ಪಾಮೋಲಿನ್	₹970 (952)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹432-689
ದ್ವಿತಳಿ (ಬಿ.ವಿ)	₹323-804

ಪರಿಷ್ಕೃತ ಅಂದಾಜಿನ ಶೇ 79ರಷ್ಟಕ್ಕೆ ನಿವ್ವಳ ತೆರಿಗೆ ಸಂಗ್ರಹ

ನೇರ ತೆರಿಗೆ ಸಂಗ್ರಹ ಶೇ 24 ಹೆಚ್ಚಳ

ನವದೆಹಲಿ (ಪಿಟಿಐ): ನೇರ ತೆರಿಗೆಯ ಸರಾಸರಿ ಸಂಗ್ರಹವು ಪ್ರಸಕ್ತ ಹಣಕಾಸು ವರ್ಷದಲ್ಲಿ ಫೆಬ್ರುವರಿ 10ರವರೆಗೆ ₹15.67 ಲಕ್ಷ ಕೋಟಿಗೆ ತಲುಪಿದ್ದು, ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 24.09ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಶನಿವಾರ ತಿಳಿಸಿದೆ.

ತೆರಿಗೆ ಮರುಪಾವತಿಯ ಬಳಿಕ ನೇರ ತೆರಿಗೆಯ ನಿವ್ವಳ ಸಂಗ್ರಹವು ₹12.98 ಲಕ್ಷ ಕೋಟಿ ಆಗಿದ್ದು, ಶೇ 18.40ರಷ್ಟು ಏರಿಕೆ ಕಂಡುಬಂದಿದೆ.

ನಿವ್ವಳ ತೆರಿಗೆ ಸಂಗ್ರಹವು ಪರಿಷ್ಕೃತ ಅಂದಾಜಿನ ಶೇ 74ರಷ್ಟು ಆಗಿದೆ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಹೇಳಿದೆ.

ಮುಖ್ಯಾಂಶಗಳು
- ಕಾರ್ಪೊರೇಟ್, ಆದಾಯ ತೆರಿಗೆ ಸಂಗ್ರಹ ಹೆಚ್ಚಳ
- ₹2.69 ಲಕ್ಷ ಕೋಟಿ ಮರುಪಾವತಿ



ಪರಿಷ್ಕೃತ ಅಂದಾಜಿನ ಪ್ರಕಾರ, ಪ್ರಸಕ್ತ ಹಣಕಾಸು ವರ್ಷಕ್ಕೆ ನೇರ ತೆರಿಗೆ ಮೂಲಕ ₹16.50 ಲಕ್ಷ ಕೋಟಿ ವರಮಾನ ಸಂಗ್ರಹ ಆಗಲಿದೆ. ಇದು ಬಜೆಟ್ ಅಂದಾಜಿಗಿಂತಲೂ (₹14.20 ಲಕ್ಷ ಕೋಟಿ) ಹೆಚ್ಚಿನದ್ದಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ, ಆದಾಯ ಮತ್ತು ಕಾರ್ಪೊರೇಟ್ ತೆರಿಗೆಗಳನ್ನು ಒಳಗೊಂಡ ನೇರ ತೆರಿಗೆ ಸಂಗ್ರಹವು ಹಿಂದಿನ ಹಣಕಾಸು ವರ್ಷಕ್ಕಿಂತಲೂ ಶೇ 17ರಷ್ಟು ಹೆಚ್ಚಿಗೆ ಇರುವ ಅಂದಾಜು ಮಾಡಲಾಗಿದೆ.

2021–22ನೇ ಹಣಕಾಸು ವರ್ಷದಲ್ಲಿ ನೇರ ತೆರಿಗೆ ಮೂಲಕ ₹14.08 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು.

ಏಪ್ರಿಲ್‌ನಿಂದ ಫೆಬ್ರುವರಿ 10ರವರೆಗಿನ ಅವಧಿಯಲ್ಲಿ ಕಾರ್ಪೊರೇಟ್ ಆದಾಯ ತೆರಿಗೆ ಮತ್ತು ವೈಯಕ್ತಿಕ ಆದಾಯ ತೆರಿಗೆಯ ಸರಾಸರಿ ಸಂಗ್ರಹದ ಬೆಳವಣಿಗೆ ಪ್ರಮಾಣವು ಕ್ರಮವಾಗಿ ಶೇ 19.33 ಮತ್ತು ಶೇ 29.63ರಷ್ಟು ಆಗಿದೆ.

ಫೆಬ್ರುವರಿ 10ರವರೆಗೆ ₹2.69 ಲಕ್ಷ ಕೋಟಿ ತೆರಿಗೆ ಮರುಪಾವತಿ ಮಾಡಲಾಗಿದೆ. ಹಿಂದಿನ ಹಣಕಾಸು ವರ್ಷದ ಫೆಬ್ರುವರಿ 10ರವರೆಗಿನ ಮರುಪಾವತಿ ಮೊತ್ತಕ್ಕೆ ಹೋಲಿಸಿದರೆ ಶೇ 61.58ರಷ್ಟು ಹೆಚ್ಚಿಗೆ ಇದೆ.

'ಸಿಮೆಂಟ್ ಮೇಲಿನ ಜಿಎಸ್‌ಟಿ ಇಳಿಕೆ: 18ರಂದು ನಿರ್ಧಾರ'

ನವದೆಹಲಿ (ರಾಯಿಟರ್ಸ್): ಸಿಮೆಂಟ್ ಮೇಲಿನ ಜಿಎಸ್‌ಟಿ ಪ್ರಮಾಣ ಕಡಿಮೆ ಮಾಡುವ ಕುರಿತು ಜಿಎಸ್‌ಟಿ ಮಂಡಳಿಯು ಇದೇ 18ರಂದು ನಡೆಯಲಿರುವ ಸಭೆಯಲ್ಲಿ ನಿರ್ಧರಿಸಲಿದೆ ಎಂದು ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಹೇಳಿದೆ.

ಸದ್ಯ ಸಿಮೆಂಟ್‌ಗೆ ಶೇ 28ರಷ್ಟು ಗರಿಷ್ಠ ಪ್ರಮಾಣದ ಜಿಎಸ್‌ಟಿ ವಿಧಿಸಲಾಗುತ್ತಿದೆ.

ತೆರಿಗೆ ತಗ್ಗಿಸುವ ಕುರಿತು ತಜ್ಞರ ಸಮಿತಿಯು ಜಿಎಸ್‌ಟಿ ಮಂಡಳಿಗೆ ವರದಿ ಸಲ್ಲಿಸಲಿದೆ. ಸಭೆಯು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಸಿಬಿಡಿಟಿ ಅಧ್ಯಕ್ಷ ವಿವೇಕ್ ಜೊಹ್ರಿ ತಿಳಿಸಿದ್ದಾರೆ. ಸಿಮೆಂಟ್‌ಗೆ ಶೇ 28ರಷ್ಟು ತೆರಿಗೆ ವಿಧಿಸುತ್ತಿರುವ ಕುರಿತು ಪರಿಶೀಲಿಸುವ ಅಗತ್ಯ ಇದೆ ಎಂದು ಹಣಕಾಸು ಸಚಿವೆ ಹೇಳಿರುವುದಾಗಿ ಜೊಹ್ರಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಅದಾನಿ ವಿಷಯ: ನಿಯಂತ್ರಣ ಸಂಸ್ಥೆಗಳಿಂದ ಪರಿಶೀಲನೆ'

ನವದೆಹಲಿ (ಪಿಟಿಐ): ದೇಶದ ನಿಯಂತ್ರಣ ಸಂಸ್ಥೆಗಳು ಉತ್ತಮ ಅನುಭವ ಹೊಂದಿದ್ದು, ಅದಾನಿ ಸಮೂಹಕ್ಕೆ ಸಂಬಂಧಿಸಿದ ವಿಷಯಗಳ ಪರಿಶೀಲನೆ ನಡೆಸುತ್ತಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ಹೇಳಿದ್ದಾರೆ.

ಅದಾನಿ ಸಮೂಹದ ಷೇರುಗಳ ಮೌಲ್ಯವು ಕೃತಕವಾಗಿ ಕುಸಿಯುವಂತೆ ಮಾಡಿ ಮುಗ್ಧ ಹೂಡಿಕೆದಾರರನ್ನು ಶೋಷಿಸಲಾಗಿದೆ ಎಂದು ಆರೋಪಿಸಿ ಸಲ್ಲಿಕೆ ಆಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಹೂಡಿಕೆದಾರರ ಹಿತರಕ್ಷಣೆ ಮಾಡುವ ಸಂಬಂಧ ಕೇಂದ್ರ ಮತ್ತು ಸೆಬಿ ಅಭಿಪ್ರಾಯ ಕೇಳಿದೆ. ಈ ಕುರಿತು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವೆ, ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಏನನ್ನು ಹೇಳಲಿದೆ ಎಂದು ನಾನು ಬಹಿರಂಗಪಡಿಸುವುದಿಲ್ಲ ಎಂದಿದ್ದಾರೆ. ದೇಶದ ನಿಯಂತ್ರಣ ಸಂಸ್ಥೆಗಳಿಗೆ ಉತ್ತಮ ಅನುಭವ ಇದ್ದು ತಮ್ಮ ಕಾರ್ಯ ಕ್ಷೇತ್ರದಲ್ಲಿ ಪರಿಣತಿಯನ್ನೂ ಹೊಂದಿವೆ ಎಂದು ಹೇಳಿದ್ದಾರೆ.

ಷೇರು ಅಡಮಾನ: ಅದಾನಿ ಪೋರ್ಟ್ಸ್, ಅದಾನಿ ಟ್ರಾನ್ಸ್‌ಮಿಷನ್ ಮತ್ತು ಅದಾನಿ ಗ್ರೀನ್ ಎನರ್ಜಿ ಕಂಪನಿಗಳು ಎಸ್‌ಬಿಐಕ್ಯಾಪ್ ಟ್ರಸ್ಟೀ ಕಂಪನಿಯಲ್ಲಿ ತಮ್ಮ ಷೇರುಗಳನ್ನು ಅಡಮಾನವಾಗಿ ಇಟ್ಟಿವೆ.

ಅದಾನಿ ಎಂಟರ್‌ಪ್ರೈಸಸ್‌ಗೆ ಸಾಲ ನೀಡಿರುವ ಸಂಸ್ಥೆಗಳ 'ಸೆಕ್ಯುರಿಟಿ ಟ್ರಸ್ಟೀ' ಆಗಿ ಅದಾನಿ ಸಮೂಹದ ಕಂಪನಿಗಳಿಂದ ಷೇರುಗಳನ್ನು ಅಡಮಾನ ಇಟ್ಟುಕೊಂಡಿರುವುದಾಗಿ ಅದು ಹೇಳಿದೆ.

'ಜನವರಿಯಲ್ಲಿ ₹ 6,085 ಕೋಟಿ ಜಿಎಸ್‌ಟಿ ಸಂಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಜನವರಿ ತಿಂಗಳಲ್ಲಿ ₹ 6,085 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವಾಗಿದ್ದು, ಇದೊಂದು ದಾಖಲೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಜಿಎಸ್‌ಟಿ ಸಂಗ್ರಹದಲ್ಲಿ ಶೇ 30ರಷ್ಟು ಅತ್ಯಧಿಕ ಬೆಳವಣಿಗೆ ಹೊಂದಿರುವ ರಾಜ್ಯವಾಗಿ ಕರ್ನಾಟಕ ಮುಂದುವರಿದಿದೆ' ಎಂದಿದ್ದಾರೆ.

'ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆ, ಹೆಚ್ಚಿನ ಕಣ್ಗಾವಲು, ಆರ್ಥಿಕತೆಯಲ್ಲಿ ಚೇತರಿಕೆ ಹಾಗೂ ತೆರಿಗೆದಾರರಲ್ಲಿ ಹೆಚ್ಚಿರುವ ಅನುಸರಣೆಯಿಂದಾಗಿ ಈ ಸಾಧನೆ ಸಾಧ್ಯವಾಗಿದೆ. ಈ ಆದಾಯದ ಬೆಳವಣಿಗೆಯಿಂದಾಗಿ ಸರ್ಕಾರವು ಈ ವರ್ಷ ಉತ್ತಮ ಬಜೆಟ್ ಮಂಡಿಸಲು ಅವಕಾಶ ಸಿಗಲಿದೆ' ಎಂದೂ ಹೇಳಿದ್ದಾರೆ.

ಮಲಬಾರ್‌ನಿಂದ ಜೆಮ್‌ಸ್ಟೋನ್ ಜುವೆಲರಿ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯ ಜೆಮ್‌ಸ್ಟೋನ್ ಜುವೆಲರಿ ಉತ್ಸವವು ರಾಜ್ಯದಾದ್ಯಂತ ಇದೇ 20ರವರೆಗೆ ನಡೆಯಲಿದೆ.

ಬೆಲೆಬಾಳುವ ಜೆಮ್‌ಸ್ಟೋನ್‌ಗಳು ಮತ್ತು ಅನ್‌ಕಟ್ ವಜ್ರಗಳೊಂದಿಗೆ ಅತ್ಯಾಕರ್ಷಕ ಮತ್ತು ಸುಂದರವಾದ ಆಭರಣಗಳ ಪ್ರದರ್ಶನ ನಡೆಯಲಿದೆ.

ಈ ಉತ್ಸವದಲ್ಲಿ ಉತ್ತಮ ಗುಣಮಟ್ಟದ, ಶುದ್ಧವಾದ ಆಭರಣಗಳು ನ್ಯಾಯುತವಾದ ಬೆಲೆಗೆ ಮತ್ತು ಮರುಖರೀದಿ ಖಾತರಿಯೊಂದಿಗೆ ಲಭ್ಯವಿರಲಿವೆ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಅವರು ಪ್ರಕಟಣೆಯಲ್ಲಿ ತಿಳಿಸಿದರು.

500 ವಿಮಾನ ಖರೀದಿ: ಏರ್ ಇಂಡಿಯಾ ಒಪ್ಪಂದ

ಬೆಂಗಳೂರು/ಪ್ಯಾರಿಸ್ (ರಾಯಿಟರ್ಸ್): ಏರ್ ಇಂಡಿಯಾ ಕಂಪನಿಯು 500 ವಿಮಾನಗಳನ್ನು ಖರೀದಿಸಲು ಬೋಯಿಂಗ್ ಮತ್ತು ಏರ್‌ಬಸ್ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಏರ್‌ಬಸ್‌ನಿಂದ 250 ವಿಮಾನಗಳನ್ನು ಖರೀದಿಸುವ ಒಪ್ಪಂದಕ್ಕೆ ಶುಕ್ರವಾರ ಕಂಪನಿಯು ಒಪ್ಪಂದ ಮಾಡಿಕೊಂಡಿದೆ. ಬೋಯಿಂಗ್ ಕಂಪನಿಯೊಂದಿಗೆ ಜನವರಿ 27ರಂದು ಒಪ್ಪಂದ ನಡೆದಿತ್ತು ಎಂದು ತಿಳಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	1150-1200
ಹೆರಕಿದ್ದು	1150-1200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1350-1450
ಕಾಳು ಮೆಣಸು	485

ತಿಪಟೂರು ಕೊಬ್ಬರಿ

ಕನಿಷ್ಠ	9300
ಗರಿಷ್ಠ	10512
ಮಾದರಿ	10300

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ: ಮುದ್ರಮನೆ	ಹಾಸನ: ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	15000	14900	173.70 ಸೆಂಟ್ಸ್
ಎಸಿ	7280	7250	6700	
ಆರ್‌ಪಿ	10250	10000	9900	ಲಂಡನ್
ಆರ್‌ಸಿ	5100	185 on OT	4900	2037 ಡಾಲರ್ಸ್

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹141
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹130.50

ಮುಂಬೈ ಧಾರಣೆ

ಶೇಂಗಾ 11–2–2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1650)
ಒಂದು ವಾರದ ಡೆಲಿವರಿ	1655 (1645)
ಸೋಯಾ ಕಚ್ಚಾ	1070 (1070)
ಪಾಮ್ ವಾರದ ಡೆಲಿವರಿ	968 (950)
ಸೂರ್ಯಕಾಂತಿ ಎಣ್ಣೆ ಕಚ್ಚಾ	1070 (1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	56,900 (56,850)
ಬೆಳ್ಳಿ ಕೆ.ಜಿ	66,500 (66,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚುನಾವಣಾ ರ್‍ಯಾಲಿಯಲ್ಲಿ ಸಿಪಿಎಂ–ಕಾಂಗ್ರೆಸ್ ಮೈತ್ರಿಗೆ ಪ್ರಧಾನಿ ನರೇಂದ್ರ ಮೋದಿ ವ್ಯಂಗ್ಯ

ಕೇರಳದಲ್ಲಿ ‘ಕುಸ್ತಿ’, ತ್ರಿಪುರಾದಲ್ಲಿ ‘ದೋಸ್ತಿ’

ಪ್ರಜಾ ಮತ ಜನತಂತ್ರದ ಹಬ್ಬ | ತ್ರಿಪುರಾ ವಿಧಾನಸಭಾ ಚುನಾವಣೆ - 2023

ಪ್ರಜಾವಾಣಿ ವಾರ್ತೆ

ರಾಧಾಕಿಶೋರ್‌ಪುರ್ (ತ್ರಿಪುರಾ): ತ್ರಿಪುರಾ ವಿಧಾನಸಭಾ ಚುನಾವಣೆಯಲ್ಲಿ ಸಿಪಿಎಂ ಹಾಗೂ ಕಾಂಗ್ರೆಸ್ ಪಕ್ಷಗಳ ಮೈತ್ರಿಯನ್ನು ಲೇವಡಿ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಈ ಪಕ್ಷಗಳು ಕೇರಳದಲ್ಲಿ ‘ಕುಸ್ತಿ’ಗೆ ಇಳಿದಿದ್ದರೆ, ತ್ರಿಪುರಾದಲ್ಲಿ ‘ದೋಸ್ತಿ’ ಮಾಡಿಕೊಂಡಿವೆ ಎಂದಿದ್ದಾರೆ.

ತ್ರಿಪುರಾ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಗೋಮತಿ ಜಿಲ್ಲೆಯ ರಾಧಾಕಿಶೋರ್‌ಪುರದಲ್ಲಿ ಶನಿವಾರ ನಡೆದ ಬಿಜೆಪಿ ಸಭೆಯಲ್ಲಿ ಭಾಗಿಯಾಗಿದ್ದ ಪ್ರಧಾನಿ, ‘ಟಿಪ್ರಮೋಥಾ’ ವಿರುದ್ಧವೂ ವಾಗ್ದಾಳಿ ನಡೆಸಿದರು. ‘ಪ್ರತಿಪಕ್ಷಗಳ ಮೈತ್ರಿಕೂಟಕ್ಕೆ ಕೆಲವರು ಹಿಂದಿನಿಂದ ನೆರವು ನೀಡುತ್ತಿದ್ದಾರೆ. ಅವರಿಗೆ ಮತ ನೀಡಿದರೆ, ರಾಜ್ಯವು ಹಲವು ವರ್ಷಗಳ ಕಾಲ ಅಭಿವೃದ್ಧಿಯಿಂದ ವಂಚಿತವಾಗಲಿದೆ’ ಎಂದು ಎಚ್ಚರಿಸಿದರು.

‘ಎಡಪಕ್ಷಗಳ ಆಡಳಿತದ ರಾಜ್ಯದಲ್ಲಿ ಕೋವಿಡ್‌ನಿಂದ ಜನರು ಸಾಕಷ್ಟು ಕಷ್ಟ ಅನುಭವಿಸಿದರು. ಆದರೆ, ತ್ರಿಪುರಾದಲ್ಲಿ ಜನರು ಸುರಕ್ಷಿತವಾಗಿದ್ದರು. ಎರಡೂ ಪಕ್ಷಗಳು ಬಡವರ ಪರ ಸಾಕಷ್ಟು ಘೋಷಣೆ ಮಾಡಿವೆಯೇ ಹೊರತು, ಅವರ ನೈಜ ಸಮಸ್ಯೆ ಅರಿತುಕೊಳ್ಳಲಿಲ್ಲ’ ಎಂದು ಪ್ರಧಾನಿ ಆರೋಪಿಸಿದರು.



ತ್ರಿಪುರಾದ ಅಂಬಾಸಾದಲ್ಲಿ ಶನಿವಾರ ನಡೆದ ಬಿಜೆಪಿ ಚುನಾವಣಾ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿಯಾಗಿದ್ದರು –ಪಿಟಿಐ ಚಿತ್ರ

ಇದಕ್ಕೂ ಮುನ್ನ, ಧಲಾಲಿ ಜಿಲ್ಲೆಯ ಅಂಬಾಸಾದಲ್ಲಿ ಶನಿವಾರ ಬೆಳಿಗ್ಗೆ ನಡೆದ ಪಕ್ಷದ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಬುಡಕಟ್ಟು ಸಮುದಾಯದ ನಡುವೆ ಎಡಪಕ್ಷಗಳು ಹಾಗೂ ಕಾಂಗ್ರೆಸ್ ಒಡಕು ಸೃಷ್ಟಿಸುತ್ತಿವೆ ಎಂದು ಆರೋಪಿಸಿದರು. ಬುಡಕಟ್ಟು ಸಮುದಾಯದ ಸಮಸ್ಯೆಗಳನ್ನು ಪರಿಹರಿಸಲು ಬಿಜೆಪಿ ಕೆಲಸ ಮಾಡುತ್ತಿದ್ದು, ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಗೆ ಕೇಂದ್ರ ಬಜೆಟ್‌ನಲ್ಲಿ ₹1 ಲಕ್ಷ ಕೋಟಿ ಮೀಸಲಿರಿಸಲಾಗಿದೆ ಎಂದು ಹೇಳಿದರು. ಟಿಪ್ರಮೋಥಾ ಪ್ರಾಬಲ್ಯದ ಅಂಬಾಸಾ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿರುವ ಬುಡಕಟ್ಟು ಅಭ್ಯರ್ಥಿ ಸುಚಿತ್ರ ದೇಬ್ ಬರ್ಮಾ ಪರವಾಗಿ ಪ್ರಧಾನಿ ಪ್ರಚಾರ ನಡೆಸಿದರು.

> **ಭಯದ ವಾತಾವರಣದಿಂದ ಹಾಗೂ ಚಂದಾ ವಸೂಲಿಯ ಸಂಸ್ಕೃತಿಯಿಂದ ತ್ರಿಪುರಾವನ್ನು ಬಿಜೆಪಿ ಮುಕ್ತ ಮಾಡಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಸಿಪಿಎಂ–ಕಾಂಗ್ರೆಸ್‌ಗೆ ಅನುಕೂಲ: ಯೆಚೂರಿ

ತ್ರಿಪುರಾದಲ್ಲಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಬುಡಕಟ್ಟು ಪ್ರದೇಶದಲ್ಲಿ ಬಲ ಕಳೆದುಕೊಳ್ಳಲಿದೆ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ಹೇಳಿದ್ದಾರೆ.

2018ರ ಚುನಾವಣೆಯಲ್ಲಿ ಬಿಜೆಪಿ ಹಾಗೂ ಐಪಿಎಫ್‌ಟಿ ಮೈತ್ರಿಕೂಟವು 36 ಕ್ಷೇತ್ರಗಳಲ್ಲಿ ಗೆದ್ದು ಅಧಿಕಾರಕ್ಕೆ ಬಂದಿತ್ತು. ಇದರಲ್ಲಿ ಅರ್ಧದಷ್ಟು ಕ್ಷೇತ್ರಗಳು ಬುಡಕಟ್ಟು ಪ್ರದೇಶಗಳ ವ್ಯಾಪ್ತಿಲ್ಲಿದ್ದವು. ಆದರೆ, ಈ ಬಾರಿ ಐಪಿಎಫ್‌ಟಿಗೆ ಬಿಜೆಪಿ 5 ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದೆ. ಬುಡಕಟ್ಟು ಪ್ರದೇಶಗಳಲ್ಲಿ ಪ್ರಾಬಲ್ಯ ಹೊಂದಿರುವ ‘ಟಿಪ್ರಮೋಥಾ’ ಚುನಾವಣಾ ಕಣಕ್ಕೆ ಧುಮುಕಿದೆ. ಕಳೆದ ಬಾರಿ ಸಿಕ್ಕಿದ್ದ ಬುಡಕಟ್ಟು ಪ್ರದೇಶಗಳ ಬೆಂಬಲ ಈ ಬಾರಿ ಬಿಜೆಪಿಗೆ ಸಿಗುವ ಸಾಧ್ಯತೆ ಕಡಿಮೆ. ಇದು ಸಿಪಿಎಂ-ಕಾಂಗ್ರೆಸ್ ಮೈತ್ರಿಕೂಟಕ್ಕೆ ನೆರವಾಗಲಿದೆ’ ಎಂದು ಯೆಚೂರಿ ಹೇಳಿದ್ದಾರೆ.

2013ರಲ್ಲಿ ಕಾಂಗ್ರೆಸ್ ಶೇ 37ರಷ್ಟು ಹಾಗೂ ಸಿಪಿಎಂ ಶೇ 48ರಷ್ಟು ಮತಗಳನ್ನು ಗಳಿಸಿದ್ದವು. 2018ರಲ್ಲಿ ಬಿಜೆಪಿ ಶೇ 43.59ರಷ್ಟು ಮತಗಳನ್ನು ಪಡೆದು ಅಧಿಕಾರಕ್ಕೆ ಬಂದಿತ್ತು. ಆದರೆ ಈ ಬಾರಿ ಸಿಪಿಎಂ ಹಾಗೂ ಕಾಂಗ್ರೆಸ್ ಒಟ್ಟಾಗಿ ಕಣಕ್ಕಿಳಿದಿದ್ದು, ಕಳೆದು ಹೋಗಿರುವ ಮತಗಳನ್ನು ಬಿಜೆಪಿಯಿಂದ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲಿವೆ ಎಂದು ಯೆಚೂರಿ ಆಶಾಭಾವ ವ್ಯಕ್ತಪಡಿಸಿದ್ದಾರೆ.

ವಾಕ್ ಸ್ವಾತಂತ್ರ್ಯವೇ ಇಲ್ಲ: ಖರ್ಗೆ

‘ಹಾತ್ ಸೇ ಹಾತ್ ಜೋಡೊ’ ಕಾರ್ಯಕ್ರಮಕ್ಕೆ ಚಾಲನೆ

ರಾಂಚಿ (ಪಿಟಿಐ): ಕೇಂದ್ರ ಸರ್ಕಾರದ ಕಾರ್ಯವೈಖರಿ ವಿರುದ್ಧ ಹರಿಹಾಯ್ದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ದೇಶದಲ್ಲಿ ವಾಕ್ ಸ್ವಾತಂತ್ರ್ಯವೇ ಇಲ್ಲ’ ಎಂದು ಆರೋಪಿಸಿದ್ದಾರೆ. ಜಾರ್ಖಂಡ್‌ನ ಸಾಹೇಬ್‌ಗಂಜ್ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿದ್ದ ‘ಹಾತ್ ಸೇ ಹಾತ್ ಜೋಡೊ‘ ಕಾರ್ಯಕ್ರಮಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಸಂಸತ್ತಿನಲ್ಲಿ ನನ್ನ ಭಾಷಣದ ಕೆಲವು ಭಾಗಗಳನ್ನು ತೆಗೆದುಹಾಕಲಾಗಿದೆ. ಸಂಸತ್ತಿನ ಒಳಗೂ, ಹೊರಗೂ ವಾಕ್ ಸ್ವಾತಂತ್ರ್ಯ ಇಲ್ಲವಾಗಿದೆ. ಯಾರಾದರೂ ಸತ್ಯ ಹೇಳಿದರೆ, ಸತ್ಯವನ್ನು ಬರೆದರೆ ಅವರನ್ನು ಜೈಲಿಗೆ ಹಾಕಲಾಗುತ್ತಿದೆ’ ಎಂದು ಅವರು ಬಿಜೆಪಿ ವಿರುದ್ಧ ಹರಿಹಾಯ್ದರು.

‘ಪ್ರಧಾನಿ ನರೇಂದ್ರ ಮೋದಿ ಅವರ ಸ್ನೇಹಿತ ಅದಾನಿ ಅವರ ಆಸ್ತಿ ಮೌಲ್ಯ 2019ರಲ್ಲಿ ₹1 ಲಕ್ಷ ಕೋಟಿ ಇತ್ತು. ಈಗ ಅದು ₹13 ಲಕ್ಷ ಕೋಟಿಗೆ ಏರಿಕೆಯಾಗಿದೆ. ಪ್ರಧಾನಿಯವರು ಸ್ನೇಹಿತನಿಗಾಗಿ ಕೆಲಸ ಮಾಡುತ್ತಿದ್ದಾರೆಯೇ ವಿನಾ ಬಡವರಿಗಾಗಿ ಅಲ್ಲ. ರಾಹುಲ್ ಗಾಂಧಿ ಅವರು ಈ ವಿಚಾರಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದರೆ, ಅವರ ಮಾತುಗಳನ್ನು ಕಡತದಿಂದ ತೆಗೆದುಹಾಕಲಾಗುತ್ತಿದೆ’ ಎಂದು ಆರೋಪಿಸಿದರು.

‘ಸಿಬಿಐ, ಆದಾಯ ತೆರಿಗೆ, ಜಾರಿ ನಿರ್ದೇಶನಾಲಯದ ತನಿಖೆ ಎದುರಿಸುತ್ತಿರುವ ಹಲವು ಶಾಸಕರನ್ನು ಬಿಜೆಪಿ ಸೇರಿಸಿಕೊಂಡಿದೆ. ಮೋದಿ ಹಾಗೂ ಅಮಿತ್ ಶಾ ಅವರು ಖರೀದಿಸಿರುವ ವಾಷಿಂಗ್ ಮಷಿನ್‌ನಿಂದಾಗಿ, ಈ ಶಾಸಕರು ತಮ್ಮ ಮೇಲಿನ ಆರೋಪಗಳ ಕೊಳೆ ತೊಳೆದುಕೊಂಡು ಹೊರಬರುತ್ತಿದ್ದಾರೆ’ ಎಂದು ಖರ್ಗೆ ಹೇಳಿದರು.

ಹಣದುಬ್ಬರ ತಡೆಯುವ ಭರವಸೆಯೊಂದಿಗೆ ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದಲೂ ಅಗತ್ಯ ವಸ್ತುಗಳ ಬೆಲೆ ನಿರಂತರವಾಗಿ ಏರಿಕೆಯಾಗಿದೆ ಎಂದರು. ದೇಶದ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ್ದು ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದು ಕಾಂಗ್ರೆಸ್ ಪಕ್ಷ ಎಂದು ಖರ್ಗೆ ಹೇಳಿದರು.



‘ಹಾತ್ ಸೇ ಹಾತ್ ಜೋಡೊ’ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು –ಪಿಟಿಐ ಚಿತ್ರ

ಮುಖ್ಯಾಂಶಗಳು

- 60 ದಿನಗಳ ‘ಹಾತ್ ಸೇ ಹಾತ್ ಜೋಡೊ’ ಕಾರ್ಯಕ್ರಮ
- ಕಾಂಗ್ರೆಸ್ ಕಾರ್ಯಕರ್ತರಿಂದ ಮನೆಮನೆಗೆ ಭೇಟಿ

> **ಚುನಾಯಿತ ಸರ್ಕಾರಗಳನ್ನು ಬುಡಮೇಲು ಮಾಡುವ ವಿಚಾರದಲ್ಲಿ ಮೋದಿ ಹಾಗೂ ಶಾ ಪರಿಣತರಾಗಿದ್ದಾರೆ. ಹೀಗಿದ್ದೂ, ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ**
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

ದೇಶದಲ್ಲಿ ಇದೇ ಮೊದಲ ಬಾರಿಗೆ ಜಮ್ಮುವಿನಲ್ಲಿ ದೊರೆತ ಖನಿಜ

‘ಪತ್ತೆಯಾಗಿರುವ ಲೀಥಿಯಂ ಗುಣಮಟ್ಟದ್ದು’

ಜಮ್ಮು (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ಸಲಾಲ್ ಗ್ರಾಮದ ಬಳಿ 59 ಲಕ್ಷ ಟನ್‌ಗಳಷ್ಟು ಲೀಥಿಯಂ ನಿಕ್ಷೇಪ ಪತ್ತೆಯಾಗಿದ್ದು, ಇದು ಉತ್ಕೃಷ್ಟ ಗುಣಮಟ್ಟದಿಂದ ಕೂಡಿದೆ’ ಎಂದು ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ಶನಿವಾರ ಹೇಳಿದ್ದಾರೆ.

ಎಲೆಕ್ಟ್ರಿಕ್ ವಾಹನದ ಬ್ಯಾಟರಿ ಹಾಗೂ ಸೌರ ಫಲಕಗಳ ತಯಾರಿಕೆಯಲ್ಲಿ ಲೀಥಿಯಂ ಅನ್ನು ಪ್ರಮುಖವಾಗಿ ಬಳಸಲಾಗುತ್ತದೆ. ಇಂತಹ ಅಮೂಲ್ಯ ಖನಿಜದ ನಿಕ್ಷೇಪವು ಭಾರತದಲ್ಲಿ ಪತ್ತೆಯಾಗಿರುವುದು ಇದೇ ಮೊದಲು.

‘ಲೀಥಿಯಂ ಅತ್ಯಂತ ನಿರ್ಣಾಯಕ ಖನಿಜ ಸಂಪನ್ಮೂಲ. ಈವರೆಗೆ ದೇಶದ ಯಾವ ಭಾಗದಲ್ಲೂ ಇದು ಪತ್ತೆಯಾಗಿರಲಿಲ್ಲ. ಲೀಥಿಯಂಗಾಗಿ ನಾವು ಇತರ ದೇಶಗಳನ್ನು ಅವಲಂಬಿಸಬೇಕಾಗಿತ್ತು. ಈ ಖನಿಜವನ್ನು ಶೇ 100ರಷ್ಟು ಆಮದು ಮಾಡಿಕೊಳ್ಳುತ್ತಿದ್ದೆವು. ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಯು (ಜಿಎಸ್‌ಐ) ಉನ್ನತ ಮಟ್ಟದ ಅಧ್ಯಯನ (ಜಿ–3) ಕೈಗೊಂಡಿತ್ತು. ಈ ವೇಳೆ ಸಲಾಲ್ ಗ್ರಾಮದಲ್ಲಿರುವ ವೈಷ್ಣೋದೇವಿ ದೇಗುಲದ ತಪ್ಪಲಿನಲ್ಲಿ ನಿಕ್ಷೇಪ ಪತ್ತೆಯಾಗಿದೆ’ ಎಂದು ಜಮ್ಮು ಮತ್ತು ಕಾಶ್ಮೀರದ ಗಣಿ ಇಲಾಖೆಯ ಕಾರ್ಯದರ್ಶಿ ಅಮಿತ್ ಶರ್ಮಾ ಹೇಳಿದ್ದಾರೆ.



ಸಲಾಲ್ ಗ್ರಾಮದ ನಿವಾಸಿಗಳು ಲೀಥಿಯಂ ಕಲ್ಲುಗಳನ್ನು ಪ್ರದರ್ಶಿಸಿದರು –ಪಿಟಿಐ ಚಿತ್ರ

‘ಜಮ್ಮುವಿನಲ್ಲಿ ದೊರೆತಿರುವ ಲೀಥಿಯಂ ಖನಿಜವು 550 ಪಾರ್ಟ್ಸ್ ಪರ್ ಮಿಲಿಯನ್ (ಪಿಪಿಎಂ) ಗ್ರೇಡ್ ಹೊಂದಿದೆ. ಈ ಖನಿಜದ ಲಭ್ಯತೆ ವಿಚಾರದಲ್ಲಿ ಭಾರತವು ಈಗ ಚೀನಾವನ್ನೇ ಹಿಂದಿಕ್ಕಿದೆ. ಈ ನಿಕ್ಷೇಪ ಪತ್ತೆಯಾಗಿರುವ ಆಯ್ದ ಕೆಲ ರಾಷ್ಟ್ರಗಳ ಪಟ್ಟಿಯಲ್ಲಿ ಈಗ ಭಾರತವೂ ಸ್ಥಾನ ಗಳಿಸಿದೆ’ ಎಂದು ಮಾಹಿತಿ ನೀಡಿದ್ದಾರೆ.

ಖನಿಜ ಹೊರತೆಗೆಯುವ ಕಾರ್ಯ ಯಾವಾಗ ಆರಂಭವಾಗಲಿದೆ ಎಂಬ ಪ್ರಶ್ನೆಗೆ, ‘ನಾವು ಜಿ–3 ಹಂತದ ಅಧ್ಯಯನ ಕೈಗೊಂಡಿದ್ದೆವು. ಮುಂದಿನ ದಿನಗಳಲ್ಲಿ ಜಿ–2 ಮತ್ತು ಜಿ–1 ಅಧ್ಯಯನ ಕೈಗೊಳ್ಳಲಾಗುತ್ತದೆ. ಈ ಪ್ರಕ್ರಿಯೆ ಮುಗಿದ ನಂತರವೇ ಖನಿಜ ಹೊರತೆಗೆಯುವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತದೆ’ ಎಂದಿದ್ದಾರೆ.

‘ಈ ನಿಕ್ಷೇಪವು ಸ್ಥಳೀಯರ ಬದುಕನ್ನು ಹಸನಾಗಿಸಲಿದೆ. ಈ ಯೋಜನೆಯಲ್ಲಿ ಸ್ಥಳೀಯ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಈ ಯೋಜನೆಗಾಗಿ ಭೂಮಿ ಹಾಗೂ ಮನೆ ಕಳೆದುಕೊಳ್ಳುವವರಿಗೆ ನಿಯಮದ ಅನುಸಾರವಾಗಿ ಪರಿಹಾರ ಒದಗಿಸಲಾಗುತ್ತದೆ. ಅವರಿಗೆ ಪುನರ್ವಸತಿ ಕಲ್ಪಿಸಲಾಗುತ್ತದೆ’ ಎಂದೂ ತಿಳಿಸಿದ್ದಾರೆ.

ಸ್ಥಳೀಯರಲ್ಲಿ ಹರ್ಷ

ಲೀಥಿಯಂ ನಿಕ್ಷೇಪ ಪತ್ತೆಯು ಸ್ಥಳೀಯರ ಸಂತಸಕ್ಕೆ ಕಾರಣವಾಗಿದೆ. ತಮ್ಮ ಬದುಕು ಹಸನಾಗಬಹುದೆಂಬ ಆಶಾ ಭಾವನೆಯೂ ಅವರಲ್ಲಿ ಚಿಗುರೊಡೆಯುವಂತೆ ಮಾಡಿದೆ.

‘ನಮ್ಮ ಪಾಲಿಗೆ ಇದು ಅತ್ಯಂತ ಸಂತಸದ ವಿಚಾರ. ಜೊತೆಗೆ ಹೆಮ್ಮೆ ಪಡುವಂತಹದ್ದು. ಈ ಯೋಜನೆಯು ನಮ್ಮ ಬದುಕಿನ ದಿಕ್ಕನ್ನೇ ಬದಲಿಸಬಹುದೆಂಬ ನಿರೀಕ್ಷೆ ಇದೆ’ ಎಂದು ಸಲಾಲ್‌ನ ಉಪ ಸರ್‌ಪಂಚ್ ರಾಜೀಂದರ್ ಸಿಂಗ್ ಹೇಳಿದ್ದಾರೆ.

‘ಗುಡ್ಡಗಾಡು ಪ್ರದೇಶದಲ್ಲಿ ಕಳೆದ ಎರಡು ವರ್ಷಗಳಿಂದ ಅಧ್ಯಯನ ನಡೆಸಿದ್ದೆವು. ಸರ್ವೆ ಕಾರ್ಯದ ಅವಧಿಯಲ್ಲಿ ನಮ್ಮ ತಂಡದ ಸದಸ್ಯರೊಬ್ಬರು ಮೃತಪಟ್ಟಿದ್ದರು. ಈ ಯೋಜನೆಯ ಭಾಗವಾಗಿರುವುದಕ್ಕೆ ಖುಷಿಯಾಗುತ್ತಿದೆ. ಈ ಯೋಜನೆಯಿಂದ ಸ್ಥಳೀಯರಿಗೆ ದೊಡ್ಡ ಸಂಖ್ಯೆಯಲ್ಲಿ ಉದ್ಯೋಗ ಲಭಿಸಲಿದೆ’ ಎಂದು ಸ್ಥಳೀಯ ನಿವಾಸಿ, ಜಿಎಸ್‌ಐ ಸರ್ವೆ ತಂಡದ ನೌಕರ ಜಸ್ಪಾಲ್ ಸಿಂಗ್ ತಿಳಿಸಿದ್ದಾರೆ.

ಏರ್ ಏಷ್ಯಾ ಇಂಡಿಯಾಗೆ ₹ 20 ಲಕ್ಷ ದಂಡ

ಮುಂಬೈ (ಪಿಟಿಐ): ಪೈಲಟ್‌ಗಳ ತರಬೇತಿಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಟಾಟಾ ಗ್ರೂಪ್ ಒಡೆತನದ ಬಜೆಟ್ ಕ್ಯಾರಿಯರ್ ಏರ್‌ಏಷ್ಯಾ ಇಂಡಿಯಾಗೆ ಡಿಜಿಸಿಎ ಶನಿವಾರ ₹20 ಲಕ್ಷ ದಂಡ ವಿಧಿಸಿದೆ.

ಡಿಜಿಸಿಎ ವಿಮಾನಯಾನದ ತರಬೇತಿ ಮುಖ್ಯಸ್ಥರನ್ನು ಮೂರು ತಿಂಗಳ ಅವಧಿಗೆ ಹುದ್ದೆಯಿಂದ ತೆಗೆದು ಹಾಕಲು ಆದೇಶಿಸಿದೆ ಮತ್ತು ಎಂಟು ನಿಯೋಜಿತ ಪರೀಕ್ಷಕರಿಗೆ (ಡಿಇ) ತಲಾ ₹ 3 ಲಕ್ಷ ದಂಡ ವಿಧಿಸಿದೆ. ಡಿಜಿಸಿಎ ಆದೇಶವನ್ನು ಪರಿಶೀಲಿಸಲಾಗುತ್ತಿದೆ ಮತ್ತು ಅದರ ವಿರುದ್ಧ ಮೇಲ್ಮನವಿ ಸಲ್ಲಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಡಿಜಿಸಿಎ ಜೊತೆಗಿನ ಸಮನ್ವಯದೊಂದಿಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಏರ್‌ಏಷ್ಯಾ ವಕ್ತಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಕರಡು ಸಮಿತಿಗೆ ಮೊಯ್ಲಿ: ಉಪ ಸಮಿತಿಗೆ ಸಿದ್ದರಾಮಯ್ಯ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷದ 85ನೇ ಮಹಾಧಿವೇಶನ ಇದೇ 24 ರಿಂದ 26ರವರೆಗೆ ಛತ್ತೀಸಗಢದ ರಾಯಪುರದಲ್ಲಿ ನಡೆಸಲು ಉದ್ದೇಶಿಸಿದ್ದು, ಇದಕ್ಕಾಗಿ ಶನಿವಾರ ಕರಡು ಸಮಿತಿ ಹಾಗೂ ವಿವಿಧ ಉಪ ಸಮಿತಿಗಳನ್ನು ರಚಿಸಲಾಗಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರನ್ನು ಕರಡು ಸಮಿತಿ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಪಿ.ಚಿದಂಬರಂ, ಭೂಪಿಂದರ್ ಸಿಂಗ್ ಹೂಡಾ, ಎಂ.ವೀರಪ್ಪ ಮೊಯ್ಲಿ, ಅಶೋಕ್ ಚೌಹಾಣ್, ಶಶಿ ತರೂರ್, ಪೃಥ್ವಿರಾಜ್ ಚೌಹಾಣ್ ಮತ್ತು ಮುಕುಲ್ ವಾಸ್ನಿಕ್ ಅವರು ಸಮಿತಿಯ ಸದಸ್ಯರಾಗಿದ್ದಾರೆ.

ರಾಜಕೀಯ ವ್ಯವಹಾರಗಳ ಉಪ ಸಮಿತಿಗೆ ವೀರಪ್ಪ ಮೊಯ್ಲಿ ಅವರು ಮುಖ್ಯಸ್ಥರಾಗಿದ್ದಾರೆ. ಪಿ.ಚಿದಂಬರಂ ಅವರು ಮುಖ್ಯಸ್ಥರಾಗಿರುವ ಆರ್ಥಿಕ ವ್ಯವಹಾರಗಳ ಉಪ ಸಮಿತಿಯಲ್ಲಿ ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸದಸ್ಯರಾಗಿದ್ದಾರೆ.

ಯುವ, ಶಿಕ್ಷಣ ಮತ್ತು ಉದ್ಯೋಗ ಸಮಿತಿಗೆ ಅಮರಿಂದರ್ ಸಿಂಗ್ ರಾಜಾ ಬ್ರಾರ್ ಅವರು ಮುಖ್ಯಸ್ಥರಾಗಿದ್ದು, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಅವರು ಸದಸ್ಯರಾಗಿದ್ದಾರೆ.

ಬಿಡಿಎ: ಇಬ್ಬರು ದಲ್ಲಾಳಿಗಳ ಬಂಧನ

ಒಂದನೇ ಪುಟದಿಂದ...

ದಲ್ಲಾಳಿಗಳು ಬಿಡಿಎ ಕೆಲಸಗಳಿಗೆ ಸಂಬಂಧಿಸಿದಂತೆ ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಿಕೊಂಡು ಚರ್ಚಿಸಿರುವುದು ಮೊಬೈಲ್ ಪರಿಶೀಲನೆ ವೇಳೆ ಪತ್ತೆಯಾಗಿದೆ. ಅಂತಹ ಗುಂಪುಗಳಲ್ಲಿ ವಿನಿಮಯ ಮಾಡಿಕೊಂಡಿದ್ದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಬಂಧಿತ ವ್ಯಕ್ತಿಗಳ ಜತೆ ನಂಟು ಹೊಂದಿದ್ದ ಬಿಡಿಎ ಅಧಿಕಾರಿಗಳ ಮಾಹಿತಿಯನ್ನೂ ಕಲೆಹಾಕಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಇಡೀ ರಾತ್ರಿ ಶೋಧ: ಬಿಡಿಎ ಕೇಂದ್ರ ಕಚೇರಿ ಆವರಣದಲ್ಲಿರುವ ಆರು ಕಚೇರಿಗಳಲ್ಲಿ ಶುಕ್ರವಾರ ಮಧ್ಯಾಹ್ನ ಆರಂಭವಾಗಿದ್ದ ಶೋಧ ಶನಿವಾರ ಬೆಳಿಗ್ಗೆವರೆಗೂ ಮುಂದುವರಿದಿತ್ತು. ಕೆಲವು ಕಚೇರಿಗಳಲ್ಲಿ ಶೋಧ ಕಾರ್ಯಾಚರಣೆ ಅಂತ್ಯಗೊಳ್ಳುವಾಗ ಬೆಳಿಗ್ಗೆ 9 ಗಂಟೆ ಸಮೀಪಿಸಿತ್ತು ಎಂದು ತನಿಖಾ ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವು ಪ್ರಮುಖ ಕಡತಗಳನ್ನು ವಶಕ್ಕೆ ಪಡೆಯಲಾಗಿದೆ. ಉಳಿದಂತೆ ಹೆಚ್ಚಿನ ಕಡತಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪದಲ್ಲಿ ಸಾಕ್ಷ್ಯ ಸಂಗ್ರಹಿಸಲಾಗಿದೆ. ಎಲ್ಲ ದಾಖಲೆಗಳನ್ನೂ ಪರಿಶೀಲಿಸಿ ಲೋಕಾಯುಕ್ತರಿಗೆ ವರದಿ ಸಲ್ಲಿಸಲಾಗುತ್ತದೆ. ಅವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ವಿಚಾರಣೆ ನಡೆಸಿ ಮುಂದಿನ ಕ್ರಮದ ಕುರಿತು ನಿರ್ಧರಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತದ ಅಧಿಕಾರಿಗಳ ವಿರುದ್ಧ 12 ದೂರು

ಬೆಂಗಳೂರು: ಲೋಕಾಯುಕ್ತದ ಅಧಿಕಾರಿಗಳ ವಿರುದ್ಧವೇ ಸಂಸ್ಥೆಗೆ 12 ದೂರುಗಳು ಸಲ್ಲಿಕೆಯಾಗಿವೆ. ಹೆಚ್ಚಿನ ದೂರುಗಳು ಕರ್ತವ್ಯಲೋಪ ಹಾಗೂ ತನಿಖೆಯಲ್ಲಿ ಲೋಪಗಳ ಆರೋಪಗಳನ್ನು ಒಳಗೊಂಡಿವೆ.

ಈ ಹಿಂದೆ ಅಸ್ತಿತ್ವದಲ್ಲಿದ್ದ ಭ್ರಷ್ಟಾಚಾರ ನಿಗ್ರಹ ದಳದಲ್ಲಿದ್ದ (ಎಸಿಬಿ) ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ದಾಖಲಾಗಿದ್ದ 32 ದೂರುಗಳೂ ಬಾಕಿ ಇವೆ.

‘ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧದ ದೂರುಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ದೂರುಗಳ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ, ಕೆಲವರು ಗಾಳಿಯಲ್ಲಿ ಗುಂಡು ಹೊಡೆದಂತೆ ಆಧಾರರಹಿತ ದೂರು ಸಲ್ಲಿಸುವುದೂ ಇದೆ. ಅಂತಹ ಪ್ರಕರಣಗಳಲ್ಲಿ ಕ್ರಮ ಅಸಾಧ್ಯ’ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿ ನಾಯಕರಿಗೆ ಶಾ ಗಡುವು

ಒಂದನೇ ಪುಟದಿಂದ...

ಇದಕ್ಕೂ ಮೊದಲು ಪುತ್ತೂರು ಸಮೀಪದ ಶ್ರೀ ಕ್ಷೇತ್ರ ಹನುಮಗಿರಿಯಲ್ಲಿ ‘ಅಮರಗಿರಿ’ ಭಾರತ ಮಾತೆ ಮಂದಿರವನ್ನು ಲೋಕಾರ್ಪಣೆ ಮಾಡಿದ ಅವರು, ಅಲ್ಲಿಯ ಪಂಚಮುಖಿ ಆಂಜನೇಯ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಬೆಳ್ಳಿ ಗದೆಯನ್ನು ಸಮರ್ಪಿಸಿದರು.

ಸಂಜೆ ಮಂಗಳೂರಿಗೆ ಬಂದು, ವಿಮಾನ ನಿಲ್ದಾಣದಿಂದ ಅರ್ಧ ಕಿಮೀ ರೋಡ್‌ಶೋ ನಡೆಸಿದರು. ನಂತರ ಇಲ್ಲಿನ ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜೀಸ್ ಸಭಾಂಗಣದಲ್ಲಿ ಶಿವಮೊಗ್ಗ ಮತ್ತು ಮಂಗಳೂರು ವಿಭಾಗಗಳ ಪಕ್ಷದ ಮುಖಂಡರ ಜೊತೆ ಒಂದೂವರೆ ಗಂಟೆ ಸಭೆ ನಡೆಸಿದರು. ಆದರೆ, ಇಲ್ಲಿ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಬಗ್ಗೆ ಚಕಾರ ಎತ್ತಲಿಲ್ಲ.

‘ಈ ಭಾಗದ ಆರು ಜಿಲ್ಲೆಗಳ 33 ವಿಧಾನಸಭಾ ಕ್ಷೇತ್ರಗಳಲ್ಲಿ 29 ಬಿಜೆಪಿ ಶಾಸಕರು ಇದ್ದಾರೆ. ಮುಂದಿನ ಚುನಾವಣೆಯಲ್ಲಿ ಇಷ್ಟಕ್ಕೇ ಸಂತುಷ್ಟರಾಗದೆ, ಉಳಿದಿರುವ ನಾಲ್ಕು ಕ್ಷೇತ್ರಗಳನ್ನೂ ಗೆಲ್ಲಬೇಕು’ ಎಂದು ಕಟ್ಟಪ್ಪಣೆ ಮಾಡಿದರು.

ಮುಂಬರುವ ಚುನಾವಣೆಯಲ್ಲಿ ಟಿಕೆಟ್ ನೀಡಿಕೆಯ ಬಗ್ಗೆಯಾಗಲಿ, ಹಾಲಿ ಶಾಸಕರ ಕಾರ್ಯವೈಖರಿಯ ಬಗ್ಗೆಯಾಗಲಿ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸದ ಅವರು, ‘ಎಲ್ಲರ ಬಗ್ಗೆಯೂ ನಾವು ಮಾಹಿತಿ ಸಂಗ್ರಹಿಸಿದ್ದೇವೆ. ವರದಿ ನಮ್ಮ ಕೈಯಲ್ಲಿದೆ. ಶಾಸಕರ ಕಾರ್ಯವೈಖರಿ, ಆಯಾ ಪ್ರದೇಶದ ರಾಜಕೀಯ ಪರಿಸ್ಥಿತಿ, ಜಾತಿ ಲೆಕ್ಕಾಚಾರ ಎಲ್ಲವನ್ನೂ ಅಳೆದೂ ತೂಗಿ ಟಿಕೆಟ್ ಹಂಚಿಕೆ ಮಾಡುತ್ತೇವೆ. ಸೂಕ್ತ ಸಮಯದಲ್ಲಿ ಸರಿಯಾದ ನಿರ್ಧಾರ ಕೈಗೊಳ್ಳುತ್ತೇವೆ’ ಎಂದು ಎಚ್ಚರಿಕೆಯ ಮಾತುಗಳನ್ನಾಡಿದರು.

‘ಟಿಕೆಟ್ ಘೋಷಣೆಯಾಗುವವರೆಗಿನ ಪ್ರಚಾರ ಹಾಗೂ ಪಕ್ಷದ ಚಟುವಟಿಕೆಗಳಿಗೆ ಹಾಲಿ ಶಾಸಕರೇ ಹಣ ಹೊಂದಿಸಿಕೊಳ್ಳಬೇಕು. ಟಿಕೆಟ್ ಘೋಷಣೆಯ ನಂತರದ ಖರ್ಚುವೆಚ್ಚಗಳನ್ನು ಅಭ್ಯರ್ಥಿ ನೋಡಿಕೊಳ್ಳಬೇಕಾಗುತ್ತದೆ ಎಂದರು’ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮೊದಲಾದವರು ಇದ್ದರು.



ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ಸಮೀಪದ ಈಶ್ವರಮಂಗಲ ಶ್ರೀ ಕ್ಷೇತ್ರ ಹನುಮಗಿರಿಯ ಪಂಚಮುಖಿ ಆಂಜನೇಯ ದೇವಸ್ಥಾನಕ್ಕೆ ಶನಿವಾರ ಭೇಟಿ ನೀಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ದೇವಸ್ಥಾನಕ್ಕೆ ಬೆಳ್ಳಿಯ ಗದೆಯನ್ನು ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ಅವರು ‘ಅಮರಗಿರಿ’ ಭಾರತ ಮಾತೆ ಮಂದಿರ ಲೋಕಾರ್ಪಣೆ ಮಾಡಿದರು

> **ಬಿಜೆಪಿ ಸ್ಪಷ್ಟ ಬಹುಮತ ಪಡೆದು ಸರ್ಕಾರ ರಚಿಸಬೇಕು. ಅದಕ್ಕಾಗಿ ಮುಂದಿನ 30 ದಿನಗಳಲ್ಲಿ ನಾಯಕರು ಏನೇನು ಮಾಡಬೇಕೆಂದು ಅಮಿತ್ ಶಾ ಸೂಚಿಸಿದ್ದಾರೆ**
> **ಬಿ.ಎಸ್. ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಸಂಕ್ಷಿಪ್ತ ಸುದ್ದಿ

ಫೆ.18ರಂದು ಭಾರತಕ್ಕೆ 12 ಚೀತಾಗಳ ಆಗಮನ?

ಶಿಯೋಪುರ್, ಮಧ್ಯಪ್ರದೇಶ (ಪಿಟಿಐ): ದಕ್ಷಿಣ ಆಫ್ರಿಕಾದಿಂದ ಇಲ್ಲಿನ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಎರಡನೇ ತಂಡದಲ್ಲಿ ಒಟ್ಟು 12 ಚೀತಾಗಳು ಇದೇ 18ರಂದು ಬರುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸದ್ಯದ ಯೋಜನೆಯಂತೆ 12 ಚೀತಾಗಳು ಬರಲಿವೆ. ಇವುಗಳಲ್ಲಿ ಎಷ್ಟು ಗಂಡು, ಎಷ್ಟು ಹೆಣ್ಣು ಎಂಬುದರ ಮಾಹಿತಿ ಇಲ್ಲ‘ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಜೆ.ಎಸ್. ಚೌಹಾಣ್ ಅವರು ತಿಳಿಸಿದರು.

ನಿಯಮಾನುಸಾರ, ಈ ಚೀತಾಗಳನ್ನು ಪ್ರತ್ಯೇಕವಾಗಿ ಒಂದು ತಿಂಗಳು ನಿಗಾದಲ್ಲಿ ಇಡಲಾಗುವುದು ಎಂದು ತಿಳಿಸಿದರು.

ಮೊದಲ ತಂಡದಲ್ಲಿ ಕಳೆದ ಸೆಪ್ಟೆಂಬರ್ 17ರಂದು ಐದು ಹೆಣ್ಣು ಚೀತಾಗಳು ಸೇರಿದಂತೆ ಎಂಟು ಚೀತಾಗಳನ್ನು ನಮೀಬಿಯಾದಿಂದ ಕರೆತರಲಾಗಿದ್ದು, ಕುನೊ ಉದ್ಯಾನವನ್ನು ಸೇರಿದ್ದವು.

ಭಾರತದ ಪರಿಸರದಿಂದ ಚೀತಾಗಳ ಸಂತತಿ ನಶಿಸಿಹೋಗಿದ್ದ ಏಳು ದಶಕದ ನಂತರ, ವಿದೇಶದಿಂದ ಇವುಗಳನ್ನು ತರಿಸಿಕೊಂಡು ಮರುಪರಿಚಯಿಸಲಾಗಿತ್ತು. ದೇಶದಲ್ಲಿನ ಚೀತಾಗಳಲ್ಲಿ ಕೊನೆಯದು 1947ರಲ್ಲಿ ಛತ್ತೀಸಗಢದ ಕೊರಿಯಾ ಜಿಲ್ಲೆಯಲ್ಲಿ ಅಸುನೀಗಿತ್ತು. ಇವುಗಳ ಸಂತತಿ ದೇಶದಲ್ಲಿ ನಶಿಸಿಹೋಗಿದೆ ಎಂದು 1952ರಲ್ಲಿ ಘೋಷಿಸಲಾಗಿತ್ತು.

ಹೆಸರು ಬದಲಾವಣೆ: ಆಯೋಗ ರಚನೆಗೆ ಕೋರಿ ‘ಸುಪ್ರೀಂ’ಗೆ ಅರ್ಜಿ

ನವದೆಹಲಿ: ವಿದೇಶಿ ಆಕ್ರಮಣಕಾರರಿಂದ ಹೆಸರಿಸಲ್ಪಟ್ಟಿರುವ ಪ್ರಾಚೀನ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ಥಳಗಳ ಮೂಲ ಹೆಸರುಗಳನ್ನು ಪತ್ತೆ ಹಚ್ಚಲು ‘ಮರುನಾಮಕರಣ ಆಯೋಗ’ವನ್ನು ರಚಿಸುವಂತೆ ಕೇಂದ್ರ ಗೃಹ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ಮೊಘಲ್ ಗಾರ್ಡನ್ ಅನ್ನು 'ಅಮೃತ್ ಉದ್ಯಾನ್' ಎಂದು ಮರುನಾಮಕರಣ ಮಾಡಿದ ಕೆಲವೇ ದಿನಗಳಲ್ಲಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಎಂಬುವವರು ಈ ಅರ್ಜಿ ಸಲ್ಲಿಸಿದ್ದಾರೆ.

‘ಸಾರ್ವಭೌಮತ್ವವನ್ನು ಕಾಪಾಡಲು ಮತ್ತು ಸಂವಿಧಾನದ 21,25 ಮತ್ತು 29ನೇ ವಿಧಿಯ ಅಡಿಯಲ್ಲಿ ಖಾತರಿಪಡಿಸಿರುವ ಘನತೆಯ ಹಕ್ಕು, ಧಾರ್ಮಿಕ ಹಕ್ಕು ಮತ್ತು ಸಂಸ್ಕೃತಿಯ ಹಕ್ಕನ್ನು ಪಡೆಯಲು ಹೆಸರು ಬದಲಾವಣೆ ಅವಶ್ಯಕವಾಗಿದೆ’ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ.

ನೂರಾರು ನಗರಗಳ ಮತ್ತು ಸ್ಥಳಗಳ ಹೆಸರುಗಳನ್ನು ಉದಾಹರಿಸಿರುವ ಅರ್ಜಿದಾರರು, ಸಂವಿಧಾನದ 19ನೇ ವಿಧಿಯ ಅಡಿಯಲ್ಲಿ ನಾಗರಿಕರ ‘ತಿಳಿಯುವ ಹಕ್ಕ’ನ್ನು ರಕ್ಷಿಸುವ ಸಲುವಾಗಿ ಐತಿಹಾಸಿಕ ಸ್ಥಳಗಳ ಮೂಲ ಹೆಸರುಗಳನ್ನು ಸಂಶೋಧಿಸಲು ಮತ್ತು ಪ್ರಕಟಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ನಿರ್ದೇಶನ ನೀಡಬೇಕೆಂದು ಕೋರಿದ್ದಾರೆ.

‘ಬಾಬರ್ ರಸ್ತೆ, ಹುಮಾಯೂನ್ ರಸ್ತೆ, ಅಕ್ಬರ್ ರಸ್ತೆ, ಜಹಾಂಗೀರ್ ರಸ್ತೆ, ತುಘಲಕ್ ರಸ್ತೆ, ಸಫ್ದರ್‌ಜಂಗ್ ರಸ್ತೆ ಮೊದಲಾದವುಗಳ ಮರುನಾಮಕರಣಕ್ಕೆ ಸರ್ಕಾರ ಏನೂ ಮಾಡಿಲ್ಲ’ ಎಂದೂ ಅರ್ಜಿಯಲ್ಲಿ ಹೇಳಲಾಗಿದೆ.

ಟರ್ಕಿ–ಸಿರಿಯಾ ಭೂಕಂಪ: ಮೃತರ ಸಂಖ್ಯೆ 25 ಸಾವಿರಕ್ಕೆ ಏರಿಕೆ

ನಾಗರಿಕರ ನೋವು ಹೆಚ್ಚಿಸಿದ ಕೊರೆವ ಚಳಿ

ಕಹ್ರಮನ್ಮರಸ್, ಟರ್ಕಿ (ಎಎಫ್‌ಪಿ): ಭೂಕಂಪದಿಂದಾಗಿ ತತ್ತರಿಸಿರುವ ಟರ್ಕಿ ಹಾಗೂ ಸಿರಿಯಾದ ನಾಗರಿಕರು ಈಗ ಕೊರೆಯುವ ಚಳಿಯಿಂದಾಗಿ ಮತ್ತಷ್ಟು ನಲುಗಿ ಹೋಗಿದ್ದಾರೆ. ಅಗೆದಷ್ಟು ಆಳದಲ್ಲಿ ಶವಗಳು ಪತ್ತೆಯಾಗುತ್ತಿದ್ದು, ಈವರೆಗೆ ಸುಮಾರು 25 ಸಾವಿರ ಮಂದಿ ಅಸುನೀಗಿದ್ದಾರೆ.

ಉಭಯ ದೇಶಗಳ ಕನಿಷ್ಠ 8.70 ಲಕ್ಷ ಮಂದಿಗೆ ತುರ್ತಾಗಿ ಆಹಾರ ಒದಗಿಸಬೇಕಾಗಿದೆ. ಭೂಕಂಪದಿಂದಾಗಿ ಸಿರಿಯಾವೊಂದರಲ್ಲೇ 53 ಲಕ್ಷ ಜನ ನಿರಾಶ್ರಿತರಾಗಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ.

ಟರ್ಕಿಯ ಭೂಕಂಪ ಪೀಡಿತ ಪ್ರದೇಶದಿಂದ ಹೊಸದಾಗಿ 5.90 ಲಕ್ಷ ಹಾಗೂ ಸಿರಿಯಾದಿಂದ 2.84 ಲಕ್ಷ ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಇವರಿಗೆ ಆಹಾರ ಧಾನ್ಯ ಪೂರೈಸುವುದಕ್ಕಾಗಿಯೇ ₹635.21 ಕೋಟಿ ನೆರವು ಒದಗಿಸುವಂತೆ ವಿಶ್ವಸಂಸ್ಥೆಯ ‘ವಿಶ್ವ ಆಹಾರ ಕಾರ್ಯಕ್ರಮ’ ಮನವಿ ಮಾಡಿದೆ.

ಕೊರೆಯುವ ಚಳಿಯು ಭೂಕಂಪ ಪೀಡಿತ ಪ್ರದೇಶದಲ್ಲಿನ ಜನರ ನೋವನ್ನು ಹೆಚ್ಚಿಸಿದೆ. ಚಳಿಯಿಂದ ರಕ್ಷಣೆ ಪಡೆಯಲು ಸಾವಿರಾರು ಮಂದಿ ತಮ್ಮ ಕಾರುಗಳಲ್ಲೇ ರಾತ್ರಿ ಕಳೆಯುವಂತಾಗಿದೆ. ಬೆಂಕಿ ಕಾಯಿಸುವುದೂ ಸಾಮಾನ್ಯವಾಗಿದೆ.



ಸಂತ್ರಸ್ತರು ಚಳಿಯಿಂದ ರಕ್ಷಣೆ ಪಡೆಯಲು ಬೆಂಕಿ ಕಾಯಿಸುತ್ತಿರುವುದು – ಎಎಫ್‌ಪಿ ಚಿತ್ರ

‘ಭೂಕಂಪನದಿಂದ ಜೀವ ಉಳಿಸಿಕೊಂಡಿರುವವರು ಈಗ ಚಳಿಯಿಂದ ಪ್ರಾಣ ಬಿಡುವಂತಾಗಿದೆ’ ಎಂದು ಟರ್ಕಿಯ ಅದಿಯಾಮನ್ ಪ್ರಾಂತ್ಯದ ನಿವಾಸಿ ಹಕನ್ ತನ್ರಿವರ್ದಿ ಎಂಬುವರು ನೋವು ವ್ಯಕ್ತಪಡಿಸಿದ್ದಾರೆ.

ದಶಕಗಳಿಂದ ನಡೆದ ನಾಗರಿಕ ದಂಗೆ ಹಾಗೂ ತನ್ನ ನಿಯಂತ್ರಣಕ್ಕೆ ಒಳಪಡದ ಪ್ರದೇಶಗಳಲ್ಲಿನ ವೈದ್ಯಕೀಯ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಸಿರಿಯಾ–ರಷ್ಯಾ ಜಂಟಿಯಾಗಿ ನಡೆಸಿದ ವೈಮಾನಿಕ ಬಾಂಬ್ ದಾಳಿಯಿಂದಾಗಿ ಈಗಾಗಲೇ ಹಲವು ಆಸ್ಪತ್ರೆಗಳು ಧ್ವಂಸಗೊಂಡಿದ್ದು, ಸಿರಿಯಾದಲ್ಲಿ ವಿದ್ಯುತ್ ಹಾಗೂ ನೀರಿನ ಅಭಾವವೂ ಸೃಷ್ಟಿಯಾಗಿದೆ.

ಕಟ್ಟಡಗಳ ಕಳಪೆ ಕಾಮಗಾರಿ ಹಾಗೂ ತಮ್ಮ ಕಷ್ಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸದ ಟರ್ಕಿ ಸರ್ಕಾರದ ನಡೆ ನಾಗರಿಕರನ್ನು ಕೆರಳುವಂತೆ ಮಾಡಿದೆ.

‘ನಿರೀಕ್ಷಿಸಿದಷ್ಟು ತ್ವರಿತವಾಗಿ ನೆರವು ಒದಗಿಸುವಲ್ಲಿ ಹಾಗೂ ನಾಗರಿಕರ ನೋವಿಗೆ ಸ್ಪಂದಿಸುವಲ್ಲಿ ನಮ್ಮ ಸರ್ಕಾರ ವಿಫಲವಾಗಿದೆ’ ಎಂದು ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಹೇಳಿದ್ದಾರೆ. ಭೂಕಂಪನದಿಂದಾಗಿ 12,141 ಕಟ್ಟಡಗಳು ಧ್ವಂಸಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

110 ಗಂಟೆ ಅವಶೇಷಗಳಡಿ ಸಿಲುಕಿದ್ದ ಮೂವರ ರಕ್ಷಣೆ

ಬೈರೂತ್ (ರಾಯಿಟರ್ಸ್): ಸಿರಿಯಾ ನಗರದ ಜಬಲೆಹ್ ಎಂಬಲ್ಲಿ 110 ಗಂಟೆಗಳವರೆಗೆ ಕಟ್ಟಡವೊಂದರ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ ಮೂವರನ್ನು ರಕ್ಷಿಸಲಾಗಿದೆ.

ಸಿರಿಯಾ ಹಾಗೂ ಲೆಬನಾನ್‌ನ ರಕ್ಷಣಾ ಪಡೆಗಳ ಸದಸ್ಯರು ತಾಯಿ ಮತ್ತು ಮಗು ಸೇರಿದಂತೆ ಮೂವರನ್ನು ಅವಶೇಷಗಳ ಅಡಿಯಿಂದ ಹೊರ ತೆಗೆಯುತ್ತಿದ್ದಂತೆ ನೆರೆದಿದ್ದರು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು. ‘ದೇವರು ದೊಡ್ಡವನು’ ಎಂಬ ಘೋಷಣೆ ಕೂಗಿದರು.

ರಕ್ಷಿಸಲ್ಪಟ್ಟಿದ್ದ ಮಹಿಳೆ ಸಾವು

ಕಿರಿಖಾನ್, ಟರ್ಕಿ (ರಾಯಿಟರ್ಸ್): ‘ದಕ್ಷಿಣ ಟರ್ಕಿಯಲ್ಲಿ 104 ಗಂಟೆವರೆಗೆ ಕಟ್ಟಡವೊಂದರ ಅವಶೇಷಗಳ ಅಡಿ ಸಿಲುಕಿದ್ದ ಮಹಿಳೆಯೊಬ್ಬರನ್ನು ಶುಕ್ರವಾರ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಕೆ ಶನಿವಾರ ಆಸ್ಪತ್ರೆಯಲ್ಲಿ ಅಸುನೀಗಿದ್ದಾಳೆ’ ಎಂದು ರಕ್ಷಣಾ ಪಡೆಯವರು ಹೇಳಿದ್ದಾರೆ.

‘40 ವರ್ಷದ ಝೆಯನೆಪ್ ಕಹ್ರಮನ್ ಎಂಬುವರನ್ನು ನಾವು ರಕ್ಷಿಸಿದ್ದೆವು. ಅವರು ಮೃತಪಟ್ಟಿರುವುದು ದುರದೃಷ್ಟಕರ’ ಎಂದು ಜರ್ಮನಿಯ ಅಂತರರಾಷ್ಟ್ರೀಯ ಶೋಧ ಮತ್ತು ರಕ್ಷಣಾ ತಂಡದ ಮುಖ್ಯಸ್ಥ ಸ್ಟೀವನ್ ಬೇಯರ್ ತಿಳಿಸಿದ್ದಾರೆ.

ಪ್ರತಿಭಟನೆಗಳ ಮಧ್ಯೆ ‘ಇಸ್ಲಾಮಿಕ್ ಕ್ರಾಂತಿ’ ವಾರ್ಷಿಕೋತ್ಸವ

ದುಬೈ, ಯುಎಇ (ಎಪಿ): ರಾಷ್ಟ್ರವ್ಯಾಪಿ ನಡೆದ ಸರ್ಕಾರ ವಿರೋಧಿ ಪ್ರತಿಭಟನೆಗಳ ನಡುವೆಯೇ, 1979ರ ‘ಇಸ್ಲಾಮಿಕ್ ಕ್ರಾಂತಿ’ಯ 44ನೇ ವಾರ್ಷಿಕೋತ್ಸವವನ್ನು ಇರಾನ್ ಶನಿವಾರ ಆಚರಿಸಿತು.

ಸಾವಿರಾರು ಇರಾನಿಯರು ಕ್ರಾಂತಿಕಾರಿ ಮತ್ತು ಧಾರ್ಮಿಕ ಘೋಷಣೆಗಳನ್ನು ಕೂಗುತ್ತಾ, ಧ್ವಜಗಳು, ಬಲೂನ್‌ಗಳು ಮತ್ತು ಫಲಕಗಳಿಂದ ಅಲಂಕರಿಸಲ್ಪಟ್ಟ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಸೇನೆಯು ತನ್ನ ಕ್ರೂಸ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಪ್ರದರ್ಶಿಸಿತು.

ಟೆಹರಾನ್‌ನ ಆಜಾದಿ ಸ್ಕ್ವೇರ್‌ನಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷ ಇಬ್ರಾಹಿಂ ರೈಸಿ, ‘ದೇಶದ ಅಭಿವೃದ್ಧಿಗೆ ತಡೆಯೊಡ್ಡುವ ಉದ್ದೇಶದಿಂದ ಇರಾನ್‌ನ ಶತ್ರು ರಾಷ್ಟ್ರಗಳ ಕುತಂತ್ರದ ಭಾಗವಾಗಿ ಈ ಪ್ರತಿಭಟನೆಗಳು ನಡೆಯುತ್ತಿವೆ’ ಎಂದರು.

ವಸ್ತ್ರಸಂಹಿತೆ ಉಲ್ಲಂಘಿಸಿದ ಆರೋಪದ ಮೇರೆಗೆ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಮಹ್ಸಾ ಅಮಿನಿ ಎಂಬ ಕುರ್ದಿಷ್ ಯುವತಿಯ ಬಂಧನ ಹಾಗೂ ಸಾವಿನ ಬಳಿಕ ಇರಾನ್‌ನಲ್ಲಿ ವ್ಯಾಪಕ ಪ್ರತಿಭಟನೆ ನಡೆದಿತ್ತು, ಶನಿವಾರವೂ, ಜನರು ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟಿಸಿದರು.

ಅಲಾಸ್ಕ: ಅಪರಿಚಿತ ವಸ್ತು ಹೊಡೆದುರುಳಿಸಿದ ಅಮೆರಿಕ

ವಾಷಿಂಗ್ಟನ್ (ಪಿಟಿಐ): ಅಲಾಸ್ಕದ ಉತ್ತರ ಕರಾವಳಿಯ ಆಗಸದಲ್ಲಿ 40 ಸಾವಿರ ಅಡಿ ಎತ್ತರದಲ್ಲಿ ಹಾರಾಡುತ್ತಿದ್ದ ಅಪರಿಚಿತ ವಸ್ತುವನ್ನು ಅಮೆರಿಕದ ಯುದ್ಧ ವಿಮಾನ ಹೊಡೆದುರುಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಈ ವಸ್ತುವನ್ನು ಹೊಡೆದುರುಳಿಸಲು ಆದೇಶಿಸಿದ್ದರು ಎಂದೂ ಹೇಳಿದ್ದಾರೆ.

‘ಅಪರಿಚಿತ ವಸ್ತು ಕಾರಿನ ಗಾತ್ರದಲ್ಲಿತ್ತು ಮತ್ತು ಅಮೆರಿಕದ ವಾಯು ಪ್ರದೇಶವನ್ನು ಪ್ರವೇಶಿಸಿದ ಈ ವಸ್ತುವಿನ ಮೂಲ ತಿಳಿದುಬಂದಿಲ್ಲ. ಇದು ನಾಗರಿಕ ವಿಮಾನ ಸಂಚಾರಕ್ಕೂ ತೊಂದರೆಯೊಡ್ಡುವ ಸಾಧ್ಯತೆ ಇತ್ತು’ ಎಂದು ಪೆಂಟಗನ್ ಪತ್ರಿಕಾ ಕಾರ್ಯದರ್ಶಿ ಬ್ರಿಗೇಡಿಯರ್ ಜನರಲ್ ಪ್ಯಾಟ್ ರೈಡರ್ ವಿವರಿಸಿದ್ದಾರೆ.



ಪ್ಯಾಟ್ ರೈಡರ್

ಎಫ್–22 ಯುದ್ಧ ವಿಮಾನವು ‘ಎಐಎಂ–9ಎಕ್ಸ್’ ಕ್ಷಿಪಣಿ ಮೂಲಕ ಈ ವಸ್ತುವನ್ನು ಹೊಡೆದುರುಳಿಸಿದೆ. ಅದರ ಅವಶೇಷಗಳನ್ನು ಪತ್ತೆ ಹಚ್ಚಲು ಸೇನೆಯು ಕಾರ್ಯಾಚರಣೆ ಆರಂಭಿಸಿದೆ ಎಂದೂ ಹೇಳಿದ್ದಾರೆ.

ಅಮೆರಿಕದ ವಾಯು ಪ್ರದೇಶದಲ್ಲಿ ಹಾರಾಡುತ್ತಿದ್ದ ಚೀನಾದ ಶಂಕಿತ ಬೇಹುಗಾರಿಕಾ ಬಲೂನು ಅನ್ನು ಈಚೆಗೆ ಯುದ್ಧವಿಮಾನವೊಂದು ಹೊಡೆದುರಳಿಸಿತ್ತು.

‘ಜಾಫ್ನಾ ಸಾಂಸ್ಕೃತಿಕ ಕೇಂದ್ರ’ ಉದ್ಘಾಟನೆ

ಕೊಲಂಬೊ (ಪಿಟಿಐ): ಭಾರತದ ನೆರವಿನೊಂದಿಗೆ ನಿರ್ಮಿಸಲಾದ ಅತ್ಯಾಧುನಿಕ ‘ಜಾಫ್ನಾ ಸಾಂಸ್ಕೃತಿಕ ಕೇಂದ್ರ’ವನ್ನು ಶನಿವಾರ ಲೋಕಾರ್ಪಣೆ ಮಾಡಲಾಯಿತು.

ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ, ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಎಲ್.ಮುರುಗನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಸಾಂಸ್ಕೃತಿಕ ಕೇಂದ್ರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು 2015ರ ಮಾರ್ಚ್‌ನಲ್ಲಿ ಶಿಲಾನ್ಯಾಸ ನೆರವೇರಿಸಿದ್ದರು.

ಈ ಕೇಂದ್ರದಲ್ಲಿ 600ಕ್ಕೂ ಹೆಚ್ಚು ಜನರಿಗೆ ಆಸನ ವ್ಯವಸ್ಥೆ ಇದ್ದು, ವಸ್ತುಸಂಗ್ರಹಾಲಯವೂ ಇದೆ.

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 12 ಫೆಬ್ರುವರಿ 2023


ಗಟ್ಟಿಯಾಗಿ 'ನಿಂತ' ಸಾಧಕ 9


ದಣಿವರಿಯದ ದುಡಿಮೆಗಾರ 10


ಪ್ರೀತಿ - ಸ್ಮೃತಿ ಮತ್ತು ಸ್ಮಾರಕ! 11

ಒಲವೇ ನಮ್ಮ ಬದುಕು

ಮತ್ತೊಂದು 'ಪ್ರೇಮಿಗಳ ದಿನ' ಬಂದಿದೆ. ಗುಲಾಬಿಗಳ ಬಿಕರಿಯೂ ಜೋರಾಗಿಯೇ ನಡೆಯುತ್ತಿದೆ. 'ಒಂದು ಹೆಣ್ಣಿಗೊಂದು ಗಂಡು ಹೇಗೊ ಸೇರಿ ಹೊಂದಿಕೊಂಡು, ಕಾಣದೊಂದ ಕನಸ ಕಂಡು, ಮಾತಿಗೊಲಿಯದಮೃತವುಂಡು, ದುಃಖ ಹಗುರುವೆನುತಿರೆ ಪ್ರೇಮವೆನಲು ಹಾಸ್ಯವೇ' ಎಂದು ದಾಂಪತ್ಯ ಕವಿ ಕೆಎಸ್‌ನ ಬಲು ಹಿಂದೆಯೇ ಹಾಡಿದ್ದಾರಲ್ಲವೇ? ಅಂತಹ ಪ್ರೇಮಕ್ಕೆ ದೇಶ, ಭಾಷೆ ಗಡಿಗಳ ಹಂಗಿಲ್ಲ ಎನ್ನುತ್ತವೆ ಇಲ್ಲಿನ ಎರಡು ಪ್ರೇಮ ಬರಹಗಳು. ಈ ವಿಶಿಷ್ಟ ದಾಂಪತ್ಯ ಗೀತಗಳನ್ನು ಗುನುಗುನಿಸೋಣ ಬನ್ನಿ...

ಹರಿಯುತ್ತಿದೆ ಅನುರಾಗದ ನದಿ

ಮೀನಾ ಮೈಸೂರು

ಪ್ರೀತಿ, ಪ್ರೇಮ, ಪ್ರಣಯ, ಎಂಬ ಪದಗಳು ಎಂದಿಗೂ ಅಪ್ಯಾಯಮಾನವೇ. ಕೆಲವೊಮ್ಮೆ ಅರ್ಥಹೀನವೆನಿಸಿದರೂ ಪ್ರೀತಿ, ವಿಶ್ವಾಸ, ನಂಬಿಕೆಗಳಿಲ್ಲದೆ ಬದುಕು ಅರ್ಥಹೀನ. 'ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ' ಎಂಬ ಕವಿವಾಣಿ ಅಕ್ಷರಶಃ ಸತ್ಯ. ಕೆಲವರ ಪ್ರೀತಿ ಬದುಕನ್ನು ಅರಳಿಸುತ್ತದೆ. ಕೆಲವರನ್ನು ಮುರುಟಿಸುತ್ತದೆ. ಮತ್ತೆ ಕೆಲವರನ್ನು ಪ್ರೀತಿಯ ಹೆಸರಲ್ಲಿ ಬಂಧಿಸಿ, ಸೆರೆಯಲ್ಲಿರಿಸುತ್ತದೆ.

ಪ್ರೀತಿಯೇ ಹಾಗೆ. ಹದಿಹರೆಯದ ಕನಸುಗಳು ಹುಚ್ಚಾಟಗಳು, ಭ್ರಮೆಗಳು... ಇವೆಲ್ಲಾ 'ಸವಿ ನೆನಪುಗಳು ಬೇಕು ಸವಿಯಲೀ ಬದುಕು' ಈಸ್ಟ್‌ಮನ್ ಬಣ್ಣಗಳ ಕನಸುಗಳಲ್ಲಿ, ಗಾಳಿಯಲಿ ತೇಲುತ್ತಾ, ಜೋಕಾಲಿಯಲಿ ಜೀಕುತ್ತಾ, ಚಂದ್ರ ತಾರೆಗಳ ಬಳಿ ಸಾರುತ್ತಾ, ಬೆಳದಿಂಗಳಲಿ ಮೈಮರೆಯುತ್ತಾ... ಧ್ಯಾನಿಸುತ್ತಿರುವಾಗಲೇ ಅರೆ ಯೌವ್ವನವೆಂಬ ಮಾಂತ್ರಿಕ ಆತುರಾತುರವಾಗಿ ಓಡೇ ಬಿಡುತ್ತಾನೆ, ನಮ್ಮರಿವಿಗೆ ಬಾರದ ಹಾಗೆ.

ಬಹುಶಃ ಇದು ಎಲ್ಲರ ಬದುಕಿನ ಅನಿವಾರ್ಯ ಘಟ್ಟ. ನಾನು ಪುಟ್ಟ ಹುಡುಗಿ, ಅರಸೀಕೆರೆಯ ನಮ್ಮ ಮನೆ ತುಂಬಾ ಹುಡುಗರ ಪಾಳ್ಯ, ಆಟ ಊಟ, ತಿರುಗಾಟದ ಒಡನಾಟದಲ್ಲಿ ನಾನು ಹುಡುಗರಷ್ಟೇ ನಿರ್ಭೀತಿ, ನಿರ್ಭೀಡೆಗಳಿಂದಿದ್ದು ಗಂಡುಬೀರಿ, ಅಮೇಜಾನ್ ಎಂದೆಲ್ಲಾ ಕರೆಸಿಕೊಳ್ಳುತ್ತಿದ್ದೆ, ಹೀಗಾಗಿ ಲಿಂಗಭೇದವಿಲ್ಲದೆ ಎಲ್ಲರೊಂದಿಗೆ ಬೆರೆಯುವುದರಲ್ಲಿ ಯಾವ ದಿಗಿಲು, ಮುಜುಗರ, ಸಂಕೋಚಗಳು ನನಗೆ ಇರಲಿಲ್ಲ. ಈಗಲೂ ಇಲ್ಲ. ಅದಕ್ಕೆ ಬೆಂಬಲ ದೊರೆತದ್ದು ರಂಗಭೂಮಿಯ ನಂಟಿನಿಂದ.



ಮದುವೆಯ ಬಗ್ಗೆ ನನಗೆಂದೂ ಒಲವಿರಲಿಲ್ಲ. ನನ್ನ ಸ್ನೇಹದ ಚೌಕಟ್ಟಿನಲ್ಲಿದ್ದವರ ಬಗ್ಗೆ ಒಲವು ಮೂಡಲೇ ಇಲ್ಲ. ನನ್ನೊಳಗಿನ ಸಾಂಪ್ರದಾಯಿಕ ಮನಸು ಮುಕ್ತವಾಗಿರಲಿಲ್ಲ. ಹಾಗಂತ ನನ್ನ ಮನಸು ಮಡಿ ಮಡಿಯೂ ಅಲ್ಲ. ಆದರೆ ನಾನೆಂದೂ ಸ್ವೇಚ್ಛಾಚಾರಿಯೂ ಅಲ್ಲ, ಅದನ್ನು ಬಯಸಿದವಳೂ ಅಲ್ಲ. ಆದರೆ ನನ್ನ ಸಹಜ ಸಲಿಗೆಯ ವರ್ತನೆಯನ್ನು ತುಂಬಾ ಜನ ತಪ್ಪು ತಿಳಿದದ್ದುಂಟು. ಅವರು ತಪ್ಪು ತಿಳಿದಿದ್ದಾರೆ ಎಂಬುದು ಕೂಡ ನನಗೆ ಅರ್ಥವಾಗುತ್ತಿರಲಿಲ್ಲ. ಅವರವರ ಭಾವಕ್ಕೆ ನಾನೆಂದೂ ತಲೆ ಕೆಡಿಸಿಕೊಳ್ಳಲಿಲ್ಲ. ಯಾವ ಮುಚ್ಚುಮರೆಯಿಲ್ಲದೆ ಎಲ್ಲರೊಂದಿಗೂ ಆರೋಗ್ಯಕರ ಸಂಬಂಧವಿದ್ದು ಸುಖವಾಗಿದ್ದೇನೆ.

ತಂಗಿಯರ ಮದುವೆಯೂ ಆಯಿತು. ನನಗೆ ಮದುವೆಯಲ್ಲಿ ಆಸಕ್ತಿಯೇ ಇರಲಿಲ್ಲ. ಮನೆಯಲ್ಲಿ ಒತ್ತಾಯ, ಹಿತೈಷಿಗಳ ಬುದ್ಧಿಮಾತು ಯಾವುದಕ್ಕೂ ಜಗ್ಗದೆ, ನನ್ನಷ್ಟಕ್ಕೆ ನಾನು ಕೆಲಸ, ನಾಟಕ ಅನ್ನುತ್ತಾ, ಅವರಿವರ ಸಂಕಷ್ಟಗಳಿಗೆ ಸ್ಪಂದಿಸುತ್ತಾ, ಆಹಾ ಅದೆಷ್ಟು ಖುಷಿಯಾಗಿದ್ದೆ. ದುಡಿಯುತ್ತಿದ್ದೆ, ಬೇಕಾದಂಗೆ ಖರ್ಚು ಮಾಡುತ್ತಿದ್ದೆ, ಭವಿಷ್ಯದ ಬಗ್ಗೆ ಖಬರೇ ಇಲ್ಲದವಳಂತೆ.

ಇಂತಿರಲು ಏಳು ಪರ್ವತಗಳ ದಾಟಿಕೊಂಡು ವಾಯು ಕುದುರೆಯನ್ನೇರಿ ಶ್ವೇತವರ್ಣದ ರಾಜಕುಮಾರ ಧುತ್ತನೆ ನನ್ನೆದುರು ಪ್ರತ್ಯಕ್ಷನಾಗಿಬಿಟ್ಟ. ಎಲ್ಲಾ ಗಂಡಸರಂತೆ 'ಚೆಲುವೆ ನೀನು, ನಂಬು ನನ್ನ' ಎಂದು ಬಿಟ್ಟ. ಅಷ್ಟಕ್ಕೆ ನಾನೇನು ಮರುಳಾಗಲಿಲ್ಲ. ಮೈಸೂರಿನಲ್ಲಿ ನನ್ನ ಫ್ರೆಂಚ್ ಗೆಳತಿ ಜೋಸಿ 'ಎನೆಡ್ಸಾ' ಎಂಬ ಸಂಸ್ಥೆಯೊಂದನ್ನು ಸೌಲಭ್ಯವಂಚಿತ ಕೆಳವರ್ಗದ ಜನರಿಗಾಗಿ ನಡೆಸುತ್ತಿದ್ದಳು. ಆ ಸಂಸ್ಥೆಯ ಮೂಲಕ ಬಡ ಮುಸ್ಲಿಂ ಕುಟುಂಬವೊಂದನ್ನು ದತ್ತು ತೆಗೆದುಕೊಂಡು ಆ ಮನೆಯ ಮಕ್ಕಳನ್ನು ಓದಿಸಿ, ನಿವೇಶನ ಖರೀದಿಸಿ ಅವರಿಗೆ ಮನೆಕಟ್ಟಿಸಿಕೊಟ್ಟು... ಆರು ಹೆಣ್ಣು ಮಕ್ಕಳ ಮದುವೆಗೂ ಸಹಾಯ ಮಾಡಿ, ಗಂಡುಮಕ್ಕಳಿಗೆ ಅಂಗಡಿ ತೆರೆದುಕೊಟ್ಟು ನೋಡಿಕೊಳ್ಳುತ್ತಿದ್ದವನೇ ಆ ರಾಜಕುಮಾರ ಫ್ರಾನ್ಸೀಸ್.

ಫ್ರಾನ್ಸೀಸ್‌ನ ಸಾಮಾಜಿಕ ಕಾಳಜಿ, ತನ್ನವರಲ್ಲದ ಜನರಿಗೆ ಮಿಡಿಯುತ್ತಿದ್ದ ಅವನ ಹೃದಯ ವೈಶಾಲ್ಯ ಮೆಲ್ಲನೆ ನನ್ನನ್ನು ಕರಗಿಸತೊಡಗಿತು ಅನ್ನಿಸುತ್ತದೆ. ಅದಕ್ಕೆ ಮುನ್ನ ಅವ ಮದುವೆಯ ಪ್ರಸ್ತಾಪ ಮಾಡಿದಾಗ ಮುಲಾಜಿಲ್ಲದೆ ತಿರಸ್ಕರಿಸಿ ಬಂದಿದ್ದೆ. ನಿರಾಶೆಯಿಂದ ಫ್ರಾನ್ಸ್‌ಗೆ ಹಿಂದಿರುಗಿದ ಅವ ಇಡೀ ಒಂದು ವರ್ಷ ಪತ್ರ ಬರೆದ.

9ನೇ ಪುಟಕ್ಕೆ...

ಅಲೆಗಳ ನಡುವೆ ಅಲೆದಾಡಿದ ಮನಗಳು

ಡಿ. ಸುಮನ್ ಕಿತ್ತೂರು

ನಮ್ಮಿಬ್ಬರ ಏಕಾಂತದ ಮಾತುಗಳನ್ನು ಹೆಚ್ಚು ಕೇಳಿಸಿಕೊಂಡಿದ್ದು ಪಾಂಡಿಚೆರಿಯ ಕಡಲ ಅಲೆಗಳು. ನನಗೆ ಈಗಲೂ ಅನಿಸುತ್ತಿದೆ. ನಮ್ಮ ಮಾತುಗಳನ್ನು ಆ ಅಲೆಗಳು, ಅವುಗಳ ಮೇಲೆ ಬೀಸಿದ ಗಾಳಿಯ ಮೂಲಕ ಎಲ್ಲೆಲ್ಲಿಗೆ ತಲುಪಿಸಿವೆಯೋ ಏನೋ ಎಂದು.

ಹೌದು, ಅದೊಂದು ಸುಂದರ ಕಥೆ. ನಾನು ಹೇಳಲು ಹೊರಟಿದ್ದು ಬಯಲು ಸೀಮೆಯ ಹುಡುಗಿ ಮತ್ತು ಬಿಸಿಲು ಸೀಮೆಯ ಹುಡುಗನ ಕಥೆ. ಇದು ಸಿನಿಮಾ ಕಥೆ ಅಲ್ಲ. ಆದರೆ, ಅದರಷ್ಟೇ ರಮ್ಯವಾಗಿದೆ. ಈ ಕಥೆಯ ಪಾತ್ರಧಾರಿಗಳಾಗಿರುವ ನನ್ನ ಮತ್ತು ಶ್ರೀನಿವಾಸ್ ಬದುಕು ಕೂಡ ಸುಂದರವಾಗಿದೆ. ಈ ಪೀಠಿಕೆ ಓದಿದ ಮೇಲೆ ನಿಮಗೂ ಈ ಕಥೆ ಕೇಳುವ ಹಂಬಲ ಆಗಿದೆಯಲ್ವೆ?



ಅದು 2017ರಿಂದ 2019ರ ಅವಧಿ. ಗ್ರಾಮೀಣ ಮಹಿಳೆಯರಿಗೆ ಸಂಬಂಧಿಸಿದ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಫ್ರೆಂಚ್ ಕಂಪನಿಯೊಂದರಿಂದ ಆಹ್ವಾನ ಬಂದಿತ್ತು. ಕೆಲದಿನಗಳ ಮಟ್ಟಿಗೆ ಎಂದು ಹೋದವಳಿಗೆ ಅಲ್ಲಿ ಸುಮಾರು ಆರು ತಿಂಗಳು ಉಳಿದುಕೊಳ್ಳಬೇಕಾಗಿ ಬಂತು. ಅಲ್ಲಿನ ಚಿತ್ರೋತ್ಸವದಲ್ಲಿ ತೀರ್ಪುಗಾರಳಾಗಿ ಪಾಲ್ಗೊಂಡಿದ್ದೆ. ನಮ್ಮ ಕಚೇರಿ ಇದ್ದದ್ದು ಪಾಂಡಿಚೆರಿಯ ಕಡಲ ತಡಿಯ ಹತ್ತಿರದಲ್ಲೇ. ಹೀಗೆ ತಿರುಗಿ ನೋಡಿದರೆ ಸಮುದ್ರ. ಅಲೆಗಳ ಮೇಲೆ ಅಲೆಗಳು ತೀರಕ್ಕೆ ಬಂದು ಅಪ್ಪಳಿಸುತ್ತಿದ್ದುದು ಕಾಣುತ್ತಿತ್ತು.

ಒಮ್ಮೆ ನನಗೆ ಯಾವುದೋ ಲೊಕೇಷನ್‌ನ ಫೋಟೊ ತೆಗೆಯಬೇಕಿತ್ತು. ನನಗೊಬ್ಬರು ಫೋಟೊಗ್ರಾಫರ್ ಬೇಕಿತ್ತು. ತಕ್ಷಣಕ್ಕೆ ಯಾರೂ ಸಿಗಲಿಲ್ಲ. ಒಬ್ಬರು ಹವ್ಯಾಸಿ ಛಾಯಾಗ್ರಾಹಕರಿದ್ದಾರೆ, ಆಗಬಹುದೇ ಎಂದು ನನ್ನ ಸಹೋದ್ಯೋಗಿ ಕೇಳಿದರು. ಹಾಗೆ ಪರಿಚಯವಾದವರೇ ಶ್ರೀನಿವಾಸ್.

ಈಗ ನನ್ನ-ಶ್ರೀನಿವಾಸ್ ಪರಿಚಯದ ಕುರಿತು ಹೇಳುತ್ತೇನೆ ಕೇಳಿ. ಶ್ರೀನಿವಾಸ್ ಅವರ ತಂದೆ ಆಂಧ್ರಪ್ರದೇಶದವರು. ತಾಯಿ ಕರ್ನಾಟಕದವರು. ಶ್ರೀನಿವಾಸ್ ಹುಟ್ಟಿ ಬೆಳೆದದ್ದು ಪಾಂಡಿಚೆರಿಯಲ್ಲಿ. ಅವರು ಓದಿದ್ದು ಪ್ರವಾಸೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ. ಅವರು ಅದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವುದು. ಸಂಪ್ರದಾಯಸ್ಥ ಕುಟುಂಬ ಅವರದ್ದು. ಇರಲಿ, ಈಗ ನನ್ನ ಅವರ ನಂಟು ಬೆಳೆದ ಸಂಗತಿಯನ್ನು ಹೇಳಬೇಕು.

ಒಮ್ಮೆ ಫೋಟೊಗ್ರಫಿಗೆಂದು ಹೋದಾಗ ಶ್ರೀನಿವಾಸ್ ಯಾರ ಜೊತೆಗೋ ಕನ್ನಡದಲ್ಲಿ ಮಾತನಾಡುವುದು ಕೇಳಿಸಿತು. ಅದು ತಮಿಳ್ಗನ್ನಡ. ನನಗೋ ಅಲ್ಲಿ ಕನ್ನಡ ಕೇಳಿ ಖುಷಿಯೋ ಖುಷಿ. ಆಗ ಶ್ರೀನಿವಾಸ್ ಅವರಲ್ಲಿ ವಿವರ ಕೇಳಿದಾಗ ಅವರ ಕುಟುಂಬದ ಬಗ್ಗೆ ಹೇಳಿದರು. ನೋಡಿ ಭಾಷೆ ಹೇಗೆ ಮನಸ್ಸು, ಸಂಬಂಧಗಳನ್ನು ಬೆಸೆಯುತ್ತದೆ. ನೆನಪಿಸಿಕೊಂಡರೆ ಈಗಲೂ ಆಹ್ಲಾದದ ಸುಳಿಯೊಂದು ಹಾದು ಹೋಗುತ್ತದೆ. ಹೀಗೆ ನಮ್ಮ ಶುದ್ಧ ಸ್ನೇಹ ಸಾಗಿತ್ತು.


ನನಗೆ ಮದುವೆ ಬಗ್ಗೆ ಅಂಥ ಆಸಕ್ತಿ ಇರಲೇ ಇಲ್ಲ. ವೃತ್ತಿ, ಪ್ರವಾಸ ಇತ್ಯಾದಿಗಳಲ್ಲೇ ಮುಂದುವರಿಯಬೇಕು ಅಂತಿದ್ದವಳು ನಾನು. ಹೀಗಿರಬೇಕಾದರೆ, ಒಂದು ದಿನ ಶ್ರೀನಿವಾಸ್, ನಾನು ನಿಮಗೆ ಪ್ರಪೋಸ್ ಮಾಡ್ತಿದ್ದೀನಿ' ಅಂತ ಹೇಳಿದರು. ನಾನು ನಕ್ಕು ಸುಮ್ಮನಾದೆ. ಅರೇ ಈ ಹುಡುಗ ಪರ್ವಾಗಿಲ್ಲ ಅಂತ ಒಳಮನಸ್ಸು ಹೇಳಿತ್ತು.

9ನೇ ಪುಟಕ್ಕೆ...

ಕಲೆ, ಚಿತ್ರಪಟಗಳ 'ಜ್ಯೂಯೆಲ್ ಬಾಕ್ಸ್'

2015ರಲ್ಲಿ ಡಿಜಿಟಲ್ ವೇದಿಕೆಯಲ್ಲಿ ಆರಂಭಗೊಂಡ ಕಲೆ ಮತ್ತು ಚಿತ್ರಪಟಗಳ ವಸ್ತುಸಂಗ್ರಹಾಲಯ (ಮ್ಯಾಪ್) ಇದೀಗ ಆಫ್‌ಲೈನ್ ರೂಪ ಪಡೆಯುತ್ತಿದೆ. ಫೆ.18ರಿಂದ ಜನರು ಮ್ಯಾಪ್‌ಗೇ ಭೇಟಿ ನೀಡಿ ಕಲಾಭಂಡಾರದ ಸಾಗರದಲ್ಲಿ ಈಜಬಹುದಾಗಿದೆ. ಹಾಗಾದರೆ ಈ ಮ್ಯಾಪ್ ವಿಶೇಷವೇನು?

ಅಭಿಲಾಷ್ ಪಿ.ಎಸ್.


ಕಂಚಿನಲ್ಲಿ ಅರಳಿದ ಶಿಲ್ಪ
ಕಲೆ: ಎಲ್.ಎನ್.ತಲ್ಲೂರು

ಅದೊಂದು ಕಲಾಭಂಡಾರ! ಹೆಜ್ಜೆ ಹೆಜ್ಜೆಗೂ ಎದುರಾಗುವ ಕಲೆ, ಚಿತ್ರಪಟಗಳ ಲೋಕ. 'Birth of a sculpture' ಎನ್ನುವ ಬರಹವಿರುವ ಕ್ಯಾನ್ವಾಸ್‌ನಲ್ಲಿ ಎಂ.ಎಫ್. ಹುಸೇನ್ ರೇಖೆಗಳ ಮೂಲಕವೇ ಮಾತನಾಡುತ್ತಾ ಅಲ್ಲಿಗೆ ಸ್ವಾಗತ ಕೋರುತ್ತಾರೆ. ನಂದಿಗಳ ನಡುವೆ, ಸರ್ಪಲೋಕದಲ್ಲಿ ಕುಳಿತಾಗ ಆಕಾಶದಲ್ಲಿ ನೀಲಹಕ್ಕಿಗಳು ಸುರುಳಿಯಾಡುತ್ತಾ ಚಿಂವ್‌ಗುಟ್ಟುತ್ತವೆ...

ಇದು ಬೆಂಗಳೂರಿನ ಕಸ್ತೂರ್‌ಬಾ ರಸ್ತೆಯಲ್ಲಿರುವ ಕಲೆ ಮತ್ತು ಚಿತ್ರಪಟಗಳ ವಸ್ತುಸಂಗ್ರಹಾಲಯ (ಮ್ಯಾಪ್-ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ) ಪರಿಕಲ್ಪನೆ ಹುಟ್ಟುಹಾಕಿದ ಅಭಿಷೇಕ್ ಪೊದ್ದಾರ್ ಕಚೇರಿಯ ಹೊರನೋಟ. ಕಚೇರಿಯ ಕೊಠಡಿಯೂ ಒಂದು ಮಿನಿ ಮ್ಯೂಸಿಯಂ. ಅಲ್ಲಿಯೂ ಹಲವು ಚಿತ್ರಕಲೆಗಳು, ಶಿಲ್ಪಕಲಾಕೃತಿಗಳು...ಇವೆಲ್ಲಾ ನೋಡಿದ ಬಳಿಕ ಹೊರಳಿದ ಪ್ರಶ್ನೆ, 'ಉದ್ಯಮದ ಕುಟುಂಬದಿಂದ ಬಂದ ನಿಮಗೆ ಈ ಆಸಕ್ತಿ ಹುಟ್ಟಿದ್ದು ಹೇಗೆ' ಎನ್ನುವುದು.

'ನಾನ್ಯಾವಾಗ ಸಂಗ್ರಹಕಾರನಾದೆ ಎಂದು ನನಗೇ ತಿಳಿದಿಲ್ಲ. ನಾನು ಮೂಲತಃ ರಾಜಸ್ಥಾನದವನು. ಕೋಲ್ಕತ್ತದಲ್ಲಿ ಓದಿ ಬೆಳೆದ ನಾನು ಬೆಂಗಳೂರಿಗೆ 1990ರಲ್ಲಿ ಬಂದೆ. ನಾನು ಬೆಳೆದಂತಹ ವಾತಾವರಣ ಕಲೆ ಮತ್ತು ಸಂಸ್ಕೃತಿಯತ್ತ ನನ್ನ ಆಸಕ್ತಿ ಹೊರಳಲು ಪೂರಕವಾಗಿತ್ತು. ನನ್ನ ತಂದೆ, ತಾಯಿ ಇಬ್ಬರೂ ಕಲೆಗಳ ಸಂಗ್ರಹದಲ್ಲಿ ಆಸಕ್ತಿ ಹೊಂದಿದವರಾಗಿದ್ದರು. ಮನೆಯ ಪ್ರತಿ ಹೆಜ್ಜೆಯಲ್ಲೂ ಕಲೆ, ಚಿತ್ರಕಲೆಗಳ ಓಘವಿತ್ತು. ಜೊತೆಗೆ ಈ ಕ್ಷೇತ್ರದತ್ತ ಆಸಕ್ತಿಯನ್ನೂ ಪ್ರೋತ್ಸಾಹಿಸಲಾಗುತ್ತಿತ್ತು. ಡೆಹರಾಡೂನ್‌ನ ಡೂನ್ ಶಾಲೆಯಲ್ಲಿನ ಶಿಕ್ಷಣ ಈ ಕ್ಷೇತ್ರದತ್ತ ಇದ್ದ ನನ್ನ ಒಲವು ರೂಪ ಪಡೆಯಲು ಕಾರಣವಾಯಿತು. ಕಲೆ, ರಂಗಭೂಮಿ, ಸಂಗೀತ ಹೀಗೆ ಹಲವು ಕ್ಷೇತ್ರದತ್ತ ಡೂನ್ ಗಮನಹರಿಸುತ್ತಿತ್ತು. ಇಂತಹ ವಾತಾವರಣವಿದ್ದ ಶಾಲೆಯೇ ನನ್ನೊಳಗಿದ್ದ ಕಲೆಯ ಆಸಕ್ತಿ ಮತ್ತಷ್ಟು ಬೇರೂರಲು ಕಾರಣವಾಯಿತು. ಶಾಲೆಯಲ್ಲಿ ಚಿತ್ರಕಲೆಯಷ್ಟೇ ಅಲ್ಲ, ಆವೆ ಮಣ್ಣು, ಲೋಹ, ಮರ, ಸಿರಾಮಿಕ್ ಮತ್ತು ಪ್ಲಾಸ್ಟರ್ ಆಫ್ ಪ್ಯಾರೀಸ್(ಪಿಒಪಿ)ನಿಂದ ಕಲಾಕೃತಿಗಳನ್ನು ರಚಿಸುವ ಕೌಶಲ ಕಲಿಸಲಾಗುತ್ತಿತ್ತು. ಈ ಒಡ್ಡಿಕೆ ನನ್ನ ಮೇಲೆ ಬೀರಿದ ಪ್ರಭಾವ ಅಗಾಧ' ಎಂದು ಬಾಲ್ಯಕ್ಕೊಮ್ಮೆ ಹೊರಳಿದರು ಅಭಿಷೇಕ್.

ಸಂಗ್ರಹಗಳು ಹೇಳುವ ಕಥೆ ಕೇಳಿ

ಹೀಗೆ 'ಮ್ಯಾಪ್' ಒಳಗೆ ಅಭಿಷೇಕ್ ಅವರ ಜೊತೆ ಹೆಜ್ಜೆ ಹಾಕುತ್ತಲೇ ಸ್ವಾಗತಿಸಿದ್ದು, ಅಂತರರಾಷ್ಟ್ರೀಯ ಮಟ್ಟದ ಖ್ಯಾತ ಶಿಲ್ಪಿ ಸ್ಟೀಫನ್ ಕಾಕ್ಸ್ ಅವರ 'ಖುಷೀಸ್' ಕಲಾಕೃತಿಗಳು. ಅಗ್ನಿಶಿಲೆಯಿಂದ ಕೆತ್ತಲಾದ ಇವುಗಳು ಪೌರಾಣಿಕ ವ್ಯಕ್ತಿಗಳ ಮೂರ್ತರೂಪವಾಗಿವೆ. ಒಳಹೆಜ್ಜೆ ಇಡುತ್ತಿದ್ದಂತೆಯೇ ಕಲಾಲೋಕವೊಂದು ತೆರೆದುಕೊಳ್ಳುತ್ತದೆ. ಕಲೆಯಲ್ಲಿ ಮಹಿಳೆಯ ಪ್ರತಿರೂಪವನ್ನು ಮ್ಯಾಪ್‌ನಲ್ಲಿರುವ ಸಂಗ್ರಹಗಳ ಮೂಲಕ ಇಲ್ಲಿ ಕಾಣಬಹುದಾಗಿದೆ. ಸ್ತ್ರೀತ್ವ ಹಾಗೂ ಲಿಂಗದ ಬಗ್ಗೆ ಇರುವ ಪೂರ್ವಗ್ರಹವನ್ನು ಪುನರ್ ವ್ಯಾಖ್ಯಾನಿಸುವತ್ತ ಇವುಗಳ ಚಿತ್ತವಿದೆ. ದೇವತೆಗಳು ಹಾಗೂ ಮರ್ತ್ಯ, ಲೈಂಗಿಕತೆ ಹಾಗೂ ಅಭಿಲಾಷೆ, ಶಕ್ತಿ ಹಾಗೂ ಹಿಂಸೆ ಹಾಗೂ ಸಂಘರ್ಷ ಮತ್ತು ಪ್ರತಿರೋಧ ಎಂಬ ನಾಲ್ಕು ಪ್ರಮುಖ ಕಥನರೂಪದ ಮಸೂರಗಳಿಂದ ಈ ಕಲಾಕೃತಿಗಳನ್ನು ನೋಡಿ ವಿಶ್ಲೇಷಿಸಬಹುದಾಗಿದೆ. 10ನೇ ಶತಮಾನದಿಂದ ಹಿಡಿದು ಪ್ರಸ್ತುತ ಕಾಲದವರೆಗಿನ ಕಲಾವಿದರು ರಚಿಸಿದ ಕಲಾಕೃತಿಗಳನ್ನು ಇಲ್ಲಿ ವಿಷಯಾಧಾರಿತವಾಗಿ ಪ್ರದರ್ಶಿಸಲಾಗಿದೆ.

ಇವುಗಳ ವೀಕ್ಷಣೆಯ ನಡುವೆಯೇ ಮ್ಯಾಪ್ ರಚನೆಯ ಉದ್ದೇಶ ವಿವರಿಸಿದ ಅಭಿಷೇಕ್, 'ಕಲೆ ಎನ್ನುವುದು ನಮ್ಮ ಜೀವನದ ಭಾಗ. ಆದರೆ ಈ ಬದುಕಿನ ಜಂಜಾಟದಲ್ಲಿ ಒಂದು ಕ್ಷಣವೂ ಅದನ್ನು ನಾವು ಗಮನಿಸುತ್ತಿಲ್ಲ. ಉದಾಹರಣೆಗೆ ನಿಮ್ಮ ಸುತ್ತಲೂ ಇರುವ ಮಹಿಳೆಯರು ಉಡುವ ಕೈಮಗ್ಗದ ಸೀರೆ, ಹಾಕುವ ರಂಗೋಲಿ, ಪೂಜಾ ಸ್ಥಳದ ಅಲಂಕಾರ ಹೀಗೆ ಹಲವು ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸಿ. ಭಾರತೀಯರಿಗೆ ಕಲೆಯ ಜೊತೆಗಿನ ಸಂಬಂಧ ಇಂದು ಮೊನ್ನೆಯದಲ್ಲ. ಆದರೆ ಕಳೆದ 30-40 ವರ್ಷದಿಂದ ಈ ಕೊಂಡಿ ಕಳಚುತ್ತಿದೆ. ನಾವು ಕಲೆಯನ್ನು ಒಂದು 'asset class' ಆಗಿ ನೋಡುತ್ತಿರುವುದು ಇದಕ್ಕೆ ಕಾರಣ. ಜನರನ್ನು ಮತ್ತೆ ಕಲೆಯ ಕೊಂಡಿಯಲ್ಲಿ ಜೋಡಿಸಬೇಕು' ಎಂದರು.

9ನೇ ಪುಟಕ್ಕೆ...

ಮ್ಯಾಪ್‌ನಲ್ಲಿ ಹುಸೇನ್ ಟ್ವಿನ್!

ಈ ವಸ್ತುಸಂಗ್ರಹಾಲಯದಲ್ಲಿ 10ನೇ ಶತಮಾನದಿಂದ ಹಿಡಿದು ಇಲ್ಲಿಯವರೆಗಿನ 60 ಸಾವಿರಕ್ಕೂ ಅಧಿಕ ಶಿಲ್ಪಕಲೆಗಳು, ಚಿತ್ರಕಲೆಗಳು, ಫೋಟೊಗಳ ಸಂಗ್ರಹವಿದೆ. ಮೊಘಲ್, ಜೈನ್, ರಜಪೂತರ ಕೈಬರಹಗಳಿರುವ ಚಿತ್ರಕಲೆಗಳು, ಚೋಳರ ಕಾಲದ ಕಂಚಿನ ಕೆತ್ತನೆಯ ಮೂರ್ತಿಗಳು, ದಕ್ಷಿಣ ಭಾರತದ 'ಟೆಂಪಲ್ ಆರ್ಟ್' ಇಲ್ಲಿವೆ. ಜೊತೆಗೆ ಭಾರತದ ಜವಳಿ ಸಂಪ್ರದಾಯಕ್ಕೆ ಉತ್ತಮ ಉದಾಹರಣೆಗಳಾಗಿರುವ ಕಲಂಕಾರಿ, ಪಟೋಲ ಮುಂತಾದುವುಗಳ ಸಂಗ್ರಹವಿದೆ. 19ನೇ ಶತಮಾನದಲ್ಲಿ ಆರಂಭವಾದ ಭಾರತದ ಪ್ರಿಂಟಿಂಗ್ ಮತ್ತು ಜಾಹೀರಾತು ಕೈಗಾರಿಕೆಯ ಬೆಳವಣಿಗೆಯನ್ನು ಎದುರಿಗಿರಿಸುವ ಸಂಗ್ರಹವೂ ಇಲ್ಲಿದೆ. ಜೊತೆಗೆ ಪ್ರಮುಖ ಛಾಯಾಗ್ರಾಹಕರು ತೆಗೆದ ಛಾಯಾಚಿತ್ರಗಳು, ರವಿ ವರ್ಮ, ರವೀಂದ್ರನಾಥ ಟ್ಯಾಗೋರ್, ಎಂ.ಎಫ್. ಹುಸೇನ್ ಸೇರಿದಂತೆ ಹತ್ತಾರು ಕಲಾವಿದರ ಚಿತ್ರಕಲೆಗಳ ಭಂಡಾರವೇ ಇಲ್ಲಿದೆ.

'ನನಗೆ ಎಂ.ಎಫ್. ಹುಸೇನ್ ಅವರಂಥ ಖ್ಯಾತ ಕಲಾವಿದರ ಸಂಗಡ ಹೆಜ್ಜೆ ಇಡುವ ಅವಕಾಶ ದೊರಕಿತ್ತು. ಇಂಥ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಈ ರೀತಿ ಅವಕಾಶವನ್ನು ಎಲ್ಲರಿಗೂ ಒದಗಿಸುವುದು ಹೇಗೆ? ಹುಸೇನ್ ಅವರ ಸ್ನೇಹವಿಲ್ಲದೇ ಇದ್ದರೂ ಅವರನ್ನು ನೇರವಾಗಿ ಭೇಟಿಯಾಗಿ, ಅವರ ಜೀವನದ ಬಗ್ಗೆ ತಿಳಿದುಕೊಳ್ಳುವುದು ಹೇಗೆ ಎನ್ನುವುದಕ್ಕೆ ಮ್ಯಾಪ್‌ನಲ್ಲಿ ಉತ್ತರವಿದೆ. ಇಲ್ಲಿ ಹುಸೇನ್ ಅವರ ಅವಳಿ (ಟ್ವಿನ್) ಇದೆ. ಇದರ ಜೊತೆ ಜನರು ಸಂವಾದ ನಡೆಸಬಹುದಾಗಿದೆ. ಹೊಲೊಗ್ರಫಿ ತಂತ್ರಜ್ಞಾನದಿಂದ ಇದು ಸಾಧ್ಯವಾಗಿದೆ' ಎನ್ನುತ್ತಾರೆ ಅಭಿಷೇಕ್ ಪೊದ್ದಾರ್.


ತೈಲವರ್ಣದಲ್ಲಿ ಅರಳಿದ ಹೂ ಹಿಡಿದ ಮಹಿಳೆ


ಮಕ್ಕಳ ಕೈಯಲ್ಲಿ ಮೆಹೆಂದಿ ಸಂಭ್ರಮ. ರಾಜಸ್ಥಾನದಲ್ಲಿ 1972ರಲ್ಲಿ ತೆಗೆದ ಫೋಟೊ ಚಿತ್ರ: ಜ್ಯೋತಿ ಭಟ್

ಗಟ್ಟಿಯಾಗಿ 'ನಿಂತ' ಸಾಧಕ

ಬದಲಾವಣೆ ಹರಿಕಾರನೆಂದು ಡೆಕ್ಕನ್ ಹೆರಾಲ್ಡ್‌ನಿಂದ ಗೌರವಕ್ಕೆ ಪಾತ್ರರಾಗಿರುವ ಫಕ್ಕೀರಪ್ಪ ಹರಿಜನ ಅವರ ಬದುಕು ಎಂಥವರಿಗೂ ಪ್ರೇರಣೆ

ಸಂತೋಷ ಈ. ಚಿನಗುಡಿ

ಕೀಳರಿಮೆ, ಖಿನ್ನತೆ, ಅಸಹಾಯಕ ಮನಸ್ಥಿತಿ – ಈ ಮೂರೂ ನನ್ನನ್ನು ಬಹಳ ಕಾಡಿವೆ. ಅವುಗಳ ವಿರುದ್ಧ ಹೋರಾಟಕ್ಕೆ ನಿಂತಾಗಲೇ ಗೊತ್ತಾಗಿದ್ದು; ನಾನು ಇತರರಿಗಿಂತ ಎಷ್ಟು ಗಟ್ಟಿ ಎಂದು. ಜೀವನೋತ್ಸಾಹ ಎಂಬ ಹುಟ್ಟು ನನ್ನನ್ನು ಗೆಲುವಿನ ದೋಣಿಯಲ್ಲಿ ತೇಲಿಸಿತು. ಅದೇ ಹುಟ್ಟನ್ನು ನನ್ನಂಥ ಎಲ್ಲರಿಗೂ ನೀಡಬೇಕು, ಎಲ್ಲರನ್ನೂ ದಡ ಸೇರುವಂತೆ ಮಾಡಬೇಕು ಎಂಬ ಸಂಕಲ್ಪ ಮಾಡಿದೆ. ಮನೆಯಿಂದ ಹೊರಬರಲು ಥರಗುಟ್ಟುತ್ತಿದ್ದವನು ಈಗ ದೇಶ ಸುತ್ತುತ್ತಿದ್ದೇನೆ. ತಾರತಮ್ಯ ಮೀರಿ ನಿಂತರೆ ನಮ್ಮನ್ನು ಯಾರೂ ತರಬಾಂಗಿಲ್ಲ. ಥ್ಯಾಂಕ್ಸ್ ಟು ಜಾಗೃತಿ...

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಹುಲಿಕೊತ್ತಲ ಎನ್ನುವ ಕಾಡಂಚಿನ ಗ್ರಾಮದ ಕೂಸು ಫಕ್ಕೀರಪ್ಪ ಹರಿಜನ ಅದಮ್ಯ ಉತ್ಸಾಹದಿಂದ ಹೇಳುತ್ತಲೇ ಇದ್ದರು. ಕಾಳಗತ್ತಲ ಬದುಕಿನಿಂದ ಎದ್ದುಬಂದ ಅವರೀಗ ಹಲವರಿಗೆ ಬೆಳಕು. ಅಂಗವಿಕಲರು, ಹಳ್ಳಿಗಾಡಿನ ಹೆಣ್ಣುಮಕ್ಕಳು, ಶೋಷಿತರು, ಅಸಹಾಯಕರಿಗೆ ಊರುಗೋಲು. ಗುಡಿಸಲಿನಲ್ಲಿ ಅರಳಿದ ಜೀವನಕ್ಷತ್ರ ಎನ್ನುವುದು ಅವರ ಮಾತಲ್ಲೇ ವ್ಯಕ್ತವಾಗುತ್ತದೆ.

ಶೆಟ್ಟೆಪ್ಪ- ಶಾಂತವ್ವ ಅವರ ಆರು ಮಕ್ಕಳಲ್ಲಿ ಫಕೀರಪ್ಪ ಕೂಡ ಒಬ್ಬರು. ನಾಲ್ವರು ಪುತ್ರಿಯರು, ಇಬ್ಬರು ಪುತ್ರರು. ಗಂಡುಮಕ್ಕಳಿಬ್ಬರೂ ಅಂಗವಿಕಲರು, ಆಗರ್ಭ ಬಡವರು. ಜಾತಿ ತಾರತಮ್ಯದ ಕುಲುಮೆಯಲ್ಲೇ ಬೆಂದು ಹದವಾದವರು ಈ ಸಾಧಕ. ತನ್ನ ಅಜ್ಜನ ಹೆಗಲ ಮೇಲೆ ಕುಳಿತು ಶಾಲೆಗೆ ಹೋಗುತ್ತಿದ್ದ ಸಂದರ್ಭ ಅವರನ್ನು ಇನ್ನಿಲ್ಲದಂತೆ ಹಿಂಸಿಸಿತ್ತು. ಸಾಮಾನ್ಯರಂತೆ ಆಟವಾಡಲು ಆಗದ ದಿನಗಳು ಖಿನ್ನತೆಯನ್ನು ಮೂಡಿಸಿದ್ದವು. ಹೆತ್ತವರೇ ಕೂಲಿ ಮಾಡಿ ಸಾಕುವಾಗ ಅಸಹಾಯಕತೆ ಕಾಡಿತು.

'ಪಾಪ ಮಾಡಿ ಹುಟ್ಟಿದವರು' ಎಂದು ಯಾರೋ ಅಣಕಿಸಿದ ಮಾತು ಕತ್ತಲಕೋಣೆ ಸೇರುವಂತೆ ಮಾಡಿತ್ತು. ಆಗ, ತೆರೆದುಕೊಂಡಿದ್ದೇ 'ಜಾಗೃತಿ' ಎನ್ನುವ ಬೆಳಕಿನ ಗವಾಕ್ಷಿ. ಹಳ್ಳಿಗಳ ಅಂಗವಿಕಲರು, ಅಸಹಾಯಕರು, ಶೋಷಿತ ಹೆಣ್ಣುಮಕ್ಕಳಲ್ಲಿ ಜಾಗೃತಿ ಮೂಡಿಸುವುದಕ್ಕೆ ಹುಟ್ಟಿಕೊಂಡ ಸಂಘಟನೆ ಇದು. ಅದರ ತೆಕ್ಕೆಗೆ ಸಿಕ್ಕಿಕೊಂಡಿದ್ದೇ ಫಕ್ಕೀರಪ್ಪ ಅವರ ಬದುಕಿನ ಸಂತಸ ಅರಳುವ ಸಮಯ.

'ಜಾಗೃತಿ ತಂಡದೊಂದಿಗೆ ಸೇರಿದ ಮೊದಲ ದಿನದಿಂದಲೇ ಹುಡುಕಾಟ ಶುರು ಮಾಡಿದೆ. ಅಂಗವಿಕಲರ ಹುಡುಕಾಟ, ಅವರ ತೊಳಲಾಟಗಳ ಹುಡುಕಾಟ, ಪರಿಹಾರ ಮಾರ್ಗಗಳ ಹುಡುಕಾಟ, ಸರ್ಕಾರಿ ಯೋಜನೆಗಳ ಹುಡುಕಾಟ, ಹಕ್ಕುಗಳ ಹುಡುಕಾಟ, ಹಕ್ಕಿನ ಅರಿವಿಲ್ಲದವರ ಹುಡುಕಾಟ. ಹೀಗೆ ಒಂದೊಂದನ್ನೇ ಹುಡುಕುತ್ತ ಹೋದಂತೆ ನನ್ನನ್ನೇ ನಾನು ಹುಡುಕಿಕೊಂಡೆ. ಸ್ವಾವಲಂಬಿ ಆಗಿ ಬದುಕಲು ಸಾಧ್ಯ ಎಂಬುದನ್ನು ಖಾತ್ರಿ ಮಾಡಿಕೊಂಡೆ. ಪಿಂಚಣಿ ಪಡೆದೆ, ಸಾಲ ಯೋಜನೆ ಪಡೆದೆ, ಮೇಕೆ ಸಾಕಣೆ ಕೇಂದ್ರ ತೆರೆದೆ. ಅಂಗವಿಕಲನಾದ ಅಣ್ಣನಿಗೂ, ವಯಸ್ಸಾದ ತಂದೆ- ತಾಯಿಗೂ ಆಸರೆಯಾದೆ...' ಫಕೀರಪ್ಪ ಅವರ ಈ ಮಾತಲ್ಲಿ ಖುಷಿ ಧ್ವನಿಸುತ್ತದೆ.

'ನಾನು ಸ್ವಾವಲಂಬಿ ಆದೆ. ಆದರೆ, ನನಗೆ ಬೇಕಿರುವುದು ಅಂಗವಿಕಲರ ಸ್ವಾವಲಂಬನೆ. ನನ್ನಂಥ ಎಲ್ಲರನ್ನೂ ಒಂದುಗೂಡಿಸಬೇಕು, ಹಕ್ಕಿನ ಅರಿವು ಮೂಡಿಸಬೇಕು, ಸೌಕರ್ಯಗಳನ್ನು ಅವರೇ ತೆಗೆದುಕೊಳ್ಳುವಂತೆ ಪ್ರೇರೇಪಿಸಬೇಕು ಎಂಬ ತುಡಿತ ಶುರುವಾಯಿತು. ತಾಲ್ಲೂಕು ಅಂಗವಿಕಲರ ಒಕ್ಕೂಟ ಕಟ್ಟಿದೆ. ಊರೂರು ಸುತ್ತಿ ಎಲ್ಲರ ಮಾಹಿತಿ ಸಂಗ್ರಹಿಸಿದೆ. ಆಯಾ ಗ್ರಾಮ ಪಂಚಾಯಿತಿಗಳಿಗೆ ಹೋಗಿ ಪಿಂಚಣಿ, ತ್ರಿಚಕ್ರವಾಹನ, ಊರುಗೋಲು, ಶಿಕ್ಷಣ, ಆರೋಗ್ಯ, ಏನೇನು ಸಾಧ್ಯವೋ ಅದನ್ನು ಕೊಡಿಸಿದೆ. ನರೇಗಾ ಯೋಜನೆಯಲ್ಲಿ ಅಂಗವಿಕಲರಿಗೂ ಕೆಲಸ ಕೊಡಲು ಅವಕಾಶವಿದೆ. ಅದನ್ನು ಬಳಸಿಕೊಂಡೆ. ಗ್ರಾಮ ಪಂಚಾಯಿತಿಗಳಲ್ಲಿ ಇದ್ದ ಶೇ 3ರಷ್ಟು ಮೀಸಲಾಯಿತಿಯನ್ನು ಸರ್ಕಾರ ಶೇ 5ಕ್ಕೆ ಏರಿಸಿತು. ಆದರೆ, ಇದು ನಗರವಾಸಿಗಳಿಗೆ ಮಾತ್ರ ಇತ್ತು. ಹೋರಾಟಕ್ಕೆ ನಿಂತೆವು. ಅದರ ಫಲ ಗ್ರಾಮೀಣರಿಗೂ ಅನ್ವಯ ಆಯಿತು' ಎಂದು ಈ ಸಾಧಕ ಹೆಮ್ಮೆಯಿಂದ ಹೇಳುತ್ತಾರೆ.

ಈಗಲೂ ಅವರು ಹಳ್ಳಿಹಳ್ಳಿ ಸುತ್ತುತ್ತಿದ್ದಾರೆ. ಅಂಗವಿಕಲರು, ಶೋಷಿತರಿಗೆ ಅರಿವು ಮೂಡಿಸುವುದು, ತರಬೇತಿ ನೀಡುವುದು, ಖಿನ್ನತೆಯಿಂದ ಹೊರತರುವುದು... ಹೀಗೆ ವಿಶ್ರಾಂತಿ ಇಲ್ಲದ ಓಟಕ್ಕೆ ನಿಂತಿದ್ದಾರೆ.

ಮುಂದಿನ ನಡೆ ಏನು?: 'ಪರಿಶಿಷ್ಟ ಸಮುದಾಯದ ಕೆಲವರು ತಮ್ಮ ಹೆಸರುಗಳನ್ನೇ ಬದಲಾಯಿಸಿಕೊಳ್ಳುತ್ತಿದ್ದಾರೆ. ಅಥವಾ ಎಲ್ಲಿಯಾದರೂ ಹೆಸರು ಹೇಳಲು ಹಿಂಜರಿಯುತ್ತಾರೆ. ತನ್ನ ಮನೆತನದ ಹೆಸರನ್ನು ಕೇಳಿದರೆ ಕೀಳಾಗಿ ಕಾಣುತ್ತಾರೇನೋ ಎಂಬ ಭಯವೇ ಇದಕ್ಕೆ ಕಾರಣ. ನಾವು ಎಷ್ಟೇ ಮುಂದುವರಿದಿದ್ದೇವೆ ಎಂದುಕೊಂಡರೂ ಈ ತರತಮ ಹೋಗುತ್ತಿಲ್ಲ. ದೇವಸ್ಥಾನಗಳಲ್ಲಿ, ಕುಡಿಯುವ ನೀರಲ್ಲಿ, ಓದುವ ಶಾಲೆಗಳಲ್ಲಿ ಬದಲಾವಣೆ ಕಂಡಿರಬಹುದು. ಆದರೆ, ಮನಸ್ಸುಗಳಲ್ಲಿ ಬೇರುಬಿಟ್ಟಿದೆ. ಹಾಗಾಗಿ, ಜಾತಿ ತಾರತಮ್ಯ ಹೊರಹೋಗಬೇಕೆಂದರೆ, ನಮ್ಮೊಳಗಿನ ಕೀಳರಿಮೆಯಿಂದ ನಾವು ಹೊರಬರಬೇಕು. ಕೀಳಾಗಿ ಕಂಡವರ ಬಾಯಲ್ಲೇ ಹೌದೌದು ಅನ್ನಿಸಿಕೊಳ್ಳಬೇಕು. ಆ ಮಾರ್ಗದಲ್ಲಿ ಮುಂದಿನ ಹೆಜ್ಜೆ ಇಡಬೇಕು ಎಂದುಕೊಂಡಿದ್ದೇನೆ. ಪರಿಶಿಷ್ಟರಲ್ಲಿ ಅಪಾರ ಕಲಾವಿದರು ಇದ್ದಾರೆ. ಅವರನ್ನು ಹೆಕ್ಕಿ ತೆಗೆದು, ಮುಖ್ಯವಾಹಿನಿಗೆ ಕರೆತರಬೇಕಿದೆ...' ಫಕ್ಕೀರಪ್ಪ ಮಾತಲ್ಲಿ ಹಂಬಲ ಎದ್ದುಕಾಣುತ್ತದೆ.

ಫಕ್ಕೀರಪ್ಪ ತಮ್ಮ ಸಮುದಾಯದ ಕೆಲಸಕ್ಕೆ ನಿಂತ ಮೇಲೆ ಅವರ ಅಣ್ಣ ಮೇಕೆ ಸಾಕಣೆ ಶುರು ಮಾಡಿದ್ದಾರೆ. ತಂದೆ- ತಾಯಿ ಈಗಲೂ ಕೂಲಿ ಕೆಲಸ ಮಾಡುತ್ತಿದ್ದಾರೆ.

'ಡಿಸೋಮ್ ದ ಲೀಡರ್‌ಶಿಪ್ ಸ್ಕೂಲ್' ಎನ್ನುವ ಅಖಿಲ ಭಾರತ ಮಟ್ಟದ ಒಂದು ಅಧ್ಯಯನ ಸಂಸ್ಥೆಗೂ ಫಕ್ಕೀರಪ್ಪ ಫೆಲೋ ಆಗಿದ್ದಾರೆ. ಇದರ ಮೂಲಕ ದೇಶದ ಉದ್ದಗಲ ಅಲೆದಿದ್ದಾರೆ. ಬೇರೆಬೇರೆ ರಾಜ್ಯಗಳ ರಾಜಕೀಯ, ಧರ್ಮ, ಸಂಸ್ಕೃತಿ, ಆರೋಗ್ಯ, ಶಿಕ್ಷಣ, ಬದುಕಿನ ರೀತಿ... ಹೀಗೆ ಎಲ್ಲ ಆಯಾಮಗಳಲ್ಲೂ ಈ ಶಾಲೆ ಮೂಲಕ ಅಧ್ಯಯನ ಮಾಡಿದ್ದಾರೆ. ದೇಶ ಸುತ್ತಿದ ಅನುಭವ ಅವರನ್ನು ಮತ್ತಷ್ಟು ಗಟ್ಟಿಯಾಗಿ 'ನಿಲ್ಲುವಂತೆ' ಮಾಡಿದೆ.



ಅನುರಾಗ...

8ನೇ ಪುಟದಿಂದ

ಫ್ರೆಂಚ್ ಭಾಷೆಯ ಪತ್ರಗಳನ್ನು ಅನುವಾದಿಸುತ್ತಿದ್ದ ಜೋಸಿ ಮಧ್ಯಸ್ಥಿಕೆ ವಹಿಸಿ ನನ್ನನ್ನು ಮದುವೆಗೆ ಒಪ್ಪಿಸಿದಳು.

ಬಹಳ ಜನ ತಿಳಿದಿರುವಂತೆ ನಾನು ಪ್ರೀತಿಸಿ ಬಿಡಲಾರದೆ ಮದುವೆಯಾದ್ದಲ್ಲ. ಅದಕ್ಕೆ ಮುನ್ನ ಉದ್ದಪಟ್ಟಿಯ ಷರತ್ತುಗಳನ್ನು ವಿಧಿಸಿದೆ. ಅದರಲ್ಲಿ ಮುಖ್ಯವಾಗಿ ಮತಾಂತರ, ದೇಶಾಂತರ, ಮಾಂಸಾಹಾರಗಳಿಗೆ ನನ್ನನ್ನು ಒತ್ತಾಯಿಸಬಾರದು, ಸಂಬಳ ಕೇಳಬಾರದು, ಅಪ್ಪಮ್ಮರನ್ನು ಕಡೆತನಕ ನೋಡಿಕೊಳ್ಳುವೆ; ಅಡ್ಡಿಪಡಿಸಬಾರದು, ನನ್ನ ನಿರ್ಭೀಡೆಯ ನಡೆಯನ್ನು ತಪ್ಪು ತಿಳಿಯಬಾರದು... ಇತ್ಯಾದಿ. ಮರು ಮಾತಿಲ್ಲದ ಒಪ್ಪಿದ, ಲಿಂಗಧಾರಣೆಗೆ ಮುಂದಾದವನನ್ನು ನಾನೇ ತಡೆದೆ. ನಮ್ಮ ನಮ್ಮತನವನ್ನು ಬಿಟ್ಟುಕೊಡದೆ ಬದುಕ ಬಯಸಿದವಳು ನಾನು. ವಿದ್ಯಾಭೂಷಣರು ಸುಬ್ರಹ್ಮಣ್ಯದಲ್ಲಿ ಸ್ವಾಮೀಜಿಯಾಗಿದ್ದಾಗ ಅವರೇ ನನ್ನ ತಂದೆ, ತಾಯಿಯರನ್ನು ಒಪ್ಪಿಸಿ, ಅವರ ಮಠದಲ್ಲೇ ಸರಳವಾಗಿ ಮದುವೆ ಮಾಡಿಕೊಟ್ಟರು. ಆಮೇಲೆ ಅವರೂ ಮದುವೆ ಮಾಡಿಕೊಂಡು ಮಠ ತ್ಯಾಗ ಮಾಡಲು ನನ್ನ ಮದುವೆಯೇ ಕಾರಣವೆಂದು ಕೆಲವರು ರೇಗಿಸಿದ್ದುಂಟು.

'ಪ್ರೀತಿಯ ಕರೆ ಕೇಳಿ, ಆತ್ಮನ ಮೊರೆ ಕೇಳಿ, ನೀ ಬಂದು ನಿಂತಲ್ಲಿ ದೀಪ ಹಚ್ಚ' ಎನ್ನುತ್ತಾ ಸಂಸಾರ ನೌಕೆಯನ್ನೇರಿದೆ. ಇಪ್ಪತ್ತೆಂಟು ಸಂವತ್ಸರಗಳು ಕಳೆದೇ ಹೋದವು. ಮಗ ದಳದಳನೆ ಬೆಳೆದು ನಿಂತ, ಈಗ ನಮ್ಮಿಬ್ಬರಿಗೂ ಗೆಳೆಯ. ಎಲ್ಲಾ ಸಂಸಾರಗಳಂತೆ ಬದುಕು ಸಾಗುತ್ತಿದೆ. ಪ್ರಾರಂಭದಲ್ಲಿ ನಮ್ಮ ಸಂಸ್ಕೃತಿ, ಹಬ್ಬ, ಮದುವೆಯ ವೈಭವ, ಸಂತೆ, ಜಾತ್ರೆ ಎಲ್ಲವನ್ನೂ ಫ್ರಾನ್ಸೀಸ್ ಆನಂದಿಸುತ್ತಿದ್ದ. ಕಂಡ ಕಂಡದ್ದನ್ನೆಲ್ಲಾ ಕ್ಲಿಕ್ಕಿಸುತ್ತಾ ಖುಷಿಯಾಗಿದ್ದ.

ಮೆಲ್ಲನೆ ತನ್ನ ದೇಶ, ಭಾಷೆ, ಆಹಾರ ಪದ್ಧತಿ, ಒಡಹುಟ್ಟಿದವರು, ಗೆಳೆಯರನ್ನೆಲ್ಲ ಮಿಸ್ ಮಾಡ ತೊಡಗಿದ ಎನಿಸುತ್ತದೆ, ಹಾಗೇ ಇಲ್ಲಿಯ ಸಾಮಾಜಿಕ ಬದುಕಿಗೆ ಹೊಂದಿಕೊಳ್ಳಲು ಹೆಣಗಾಡುತ್ತಿದ್ದ. ಕರೆಂಟ್ ಹೋದರೆ, ಫೋನ್ ಡೆಡ್ ಆದರೆ, ರಸ್ತೆಯಲ್ಲಿ ಯಾರೋ ಹಾರನ್ ಮಾಡಿದರೆ, ನಮ್ಮ ಮೇಜಿನ ಮೇಲಿನ ವಸ್ತುಗಳು ಛಿದ್ರ ಚೂರಾಗುತ್ತಿದ್ದವು. ಅವನ ಸಿಟ್ಟಿಗೆ ಕಾರಣ ನಮ್ಮ ಸಾಮಾಜಿಕ ಹಾಗೂ ನಾಗರಿಕ ಪ್ರಜ್ಞೆಯ ಕುರಿತಾಗಿತ್ತೇ ಹೊರತು ನನ್ನ ಸಂಸಾರಿಕ ಅಪವ್ಯಸನಗಳಾವೂ ಕಾರಣವಾಗಿರುತ್ತಿರಲಿಲ್ಲ.

ಫ್ರಾನ್ಸೀಸ್‌ನ ಇಂತಹ ಅತಿರೇಕದ ವರ್ತನೆ ಕಂಡು ಮನೆಯವರು ಬಿಟ್ಟು ಬಿಡು ಎನ್ನುತ್ತಿದ್ದರು. ಆದರೆ ನಮ್ಮಪ್ಪ 'ಸಾಹಿತ್ಯ, ನಾಟಕವಲ್ಲದೆ, ಸಹೋದ್ಯೋಗಿಗಳೂ ನಿನಗಿದ್ದಾರೆ. ಅವನು ನಿನಗಾಗಿ ದೇಶ ಭಾಷೆ, ಧರ್ಮ, ಆಹಾರ ಪದ್ಧತಿ ಎಲ್ಲವನ್ನೂ ತ್ಯಾಗ ಮಾಡಿ ಬಂದಿದ್ದಾನೆ, ತನ್ನವರು ಎಂಬುವವರು ಯಾರೂ ಇಲ್ಲ. ಅವನಿಲ್ಲಿ ಒಂಟಿ. ಅದನ್ನು ಮರೆಯದೆ ಚೆನ್ನಾಗಿ ನೋಡಿಕೊ' ಎನ್ನುತ್ತಿದ್ದರು. ಅದನ್ನು ನಾನು ಅಕ್ಷರಶಃ ಪಾಲಿಸುತ್ತಿರುವೆ. ಅಂತರ ಜಾತಿ, ಅಂತರರಾಷ್ಟ್ರದ ಮದುವೆ ಅಂತೆಲ್ಲಾ ರೇಗಿಸುತ್ತಿದ್ದರು. ಹಾಗೆಲ್ಲಾ ವೈಭವೀಕರಿಸಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ಮದುವೆ ಎಂಬುದು ಕೇವಲ ಎರಡು ಮೈ-ಮನಸುಗಳ ಖಾಸಗಿ ಸಂಗತಿ. ಇಬ್ಬರಿಗೂ ಹೊಂದಿಕೊಂಡು ಹೋಗುವ ಮನಸ್ಸಿರಬೇಕು ಅಷ್ಟೇ. ಸಣ್ಣ ಪುಟ್ಟದ್ದನ್ನೆಲ್ಲ ದೊಡ್ಡದು ಮಾಡುತ್ತಾ ಸಂಬಂಧದ ಹಗ್ಗವನ್ನು ತುಂಡರಿಸುವುದು ಎಷ್ಟು ಹೊತ್ತಿನ ಮಾತು? ಎಲ್ಲಾ ಕುಟುಂಬಗಳಂತೆ ಏರಿಳಿತಗಳೊಂದಿಗೆ ಜಗಳ ಕೂಡ ಒಂದುಗೂಡಿಸುವ ದಡ ಎಂಬ ಅನುಭವವಾಗಿದೆ. ಪ್ರೀತಿ ಒಂದೇ ದಡ ಅಲ್ಲ.

'ಗಂಡ' ಯಾವ ಜಾತಿ ಮತ, ದೇಶ, ಭಾಷೆಯಾದರೂ ಸರಿಯೆ, ಪರದೇಶಿ, ಪರಜಾತಿ ಯಾವೂದೂ ಅಲ್ಲ. ಯಾವ ಹಂಗೂ ಇಲ್ಲದೆ ಗಂಡ ಗಂಡನೆ. ಸದ್ಯ ನನ್ನ ಗಂಡ ನಾನು ಮದುವೆಗೆ ಮುನ್ನ ವಿಧಿಸಿದ್ದ ನನ್ನ ಷರತ್ತುಗಳಿಗೆ ಈಗಲೂ ಬದ್ಧನಾಗಿದ್ದಾನೆ. ನನ್ನ ಓಡಾಟದ ಬದುಕಿನಲ್ಲಿ ಅವನಿಗೆ ಕಾಡುತ್ತಿದ್ದ ಒಂಟಿತನದಿಂದಾಗಿ ಆಗಾಗ್ಗೆ ತೋರುತ್ತಿದ್ದ ಅಸಹನೆ, ನಾನು ನಿವೃತ್ತಳಾದ ಮೇಲೆ ಕಡಿಮೆಯಾಗಿದೆ. ಆದರೂ ನಮ್ಮಿಬ್ಬರ ನಡುವಿನ ಸಾಂಸ್ಕೃತಿಕ ಭಿನ್ನತೆಗಳಿಂದಾಗಿ ಈಗಲೂ ಸಣ್ಣಪುಟ್ಟ ಜಗಳ ಆಗುತ್ತಲೇ ಇರುತ್ತವೆ. ನಾನು ಊಟ ಮಾಡುವಾಗ ತಟ್ಟೆಯನ್ನು, ಕೈಬೆರಳನ್ನು ನೆಕ್ಕಿಕೊಳ್ಳುವುದನ್ನು ಕಂಡು ಕಿಡಿಕಾರುತ್ತಾನೆ, ಅವ ಬಿಡದ ಬೀಡಿ ಚಟ ನನ್ನನ್ನು ರೇಗಿಸುತ್ತದೆ. ಆದರೂ... ಇಬ್ಬರೂ ಸಹಿಸಿಕೊಳ್ಳುವುದನ್ನು ಕಲಿತಿದ್ದೇವೆ. ಮನೆಯಿಂದ ಹೊರಹೋಗುವಾಗ ಎಲ್ಲಿದ್ದರೂ ಯಾರಿದ್ದರೂ ಅವರ ಎದುರೇ ಮುತ್ತು ಕೊಡುತ್ತಾನೆ, ನಾನು ಸಂಕೋಚದಿಂದ ಮುದುಡಿಕೊಳ್ಳುವೆ. ನಾನೆಂದೂ ಅವನಿಗೆ ಐ ಲವ್ ಯು ಎಂದು ಹೇಳಿಲ್ಲ. ಯಾರೊಂದಿಗಿನ ಸಂಬಂಧಗಳಲ್ಲೂ ಪ್ರೀತಿ, ಕಾಳಜಿಗಳು ಗುಪ್ತಗಾಮಿನಿಯಾಗಿರಬೇಕೆ ಹೊರತು ಪ್ರದರ್ಶನ ಆಗಿರಬಾರದೆಂದು ಬಯಸುವವಳು.

ವಿದೇಶಿಗ ಅಂದ ಕೂಡಲೇ ಸಿರಿಸಂಪತ್ತುಳ್ಳ ಕೋಟ್ಯಧಿಪತಿ ಎಂದೇ ಜನ ಭಾವಿಸುವುದುಂಟು. ಆದರೆ ನನ್ನ ಗಂಡನೂ ನಮ್ಮಂತೆಯೇ ಮಧ್ಯಮ ವರ್ಗದವ, ಅಲ್ಲಿ ಕಷ್ಟಪಟ್ಟು ದುಡಿದು ಇಲ್ಲಿಯ ಅವನ ದತ್ತು ಕುಟುಂಬವನ್ನು ಸಾಕಿದ. ಈಗಲೂ ಹಳ್ಳಿಯವರ ಕಷ್ಟಸುಖಗಳಿಗೆ ಸ್ಪಂದಿಸುತ್ತಾ, ಅವನು ತನ್ನ ಗಳಿಕೆಯನ್ನು ಪರೋಪಕಾರಕ್ಕೆ ವ್ಯಯಿಸುವುದರ ಬಗ್ಗೆ ನನಗಾವ ತಕರಾರೂ ಇಲ್ಲ. ನನ್ನ ಗಂಡನಿಗೊಮ್ಮೆ ಅಂಗಾಂಗ ವೈಫಲ್ಯವಾಗಿ ಎರಡು ತಿಂಗಳು ಆಸ್ಪತ್ರೆವಾಸಿಯಾಗಿದ್ದ, 33 ಸಲ ಡಯಾಲಿಸಿಸ್ ಆಯಿತು.

ಸಾವು ಬದುಕಿನ ನಡುವೆ ಸೆಣಸಾಡುತ್ತಿದ್ದ ಆತ ಐಸಿಯು ಒಳಗಿದ್ದ. ನಾನು ಐಸಿಯುವಿನ ಹೊರಗೆ ಮಲಗುತ್ತಿದ್ದೆ. ಒಂದು ರಾತ್ರಿ ವೈದ್ಯರು ನನ್ನನ್ನು ಎಬ್ಬಿಸಿ 'ಬಹುಶಃ ಇದು ಅವನ ಕೊನೆ ರಾತ್ರಿ. ಅವ ವಿದೇಶಿಯನಾದುದರಿಂದ ಅದೇನೇನು ಕಾನೂನುಗಳಿರುತ್ತದೋ ವಿಚಾರಿಸಿಕೊಳ್ಳಿ, ಪಾಪ ಮಗ ಇನ್ನೂ ಚಿಕ್ಕವನು. ಅಪ್ಪನ ಪ್ರೀತಿಯಿಂದ ವಂಚಿತನಾಗುತ್ತಿದ್ದಾನೆ' ಎಂದರು.

ಏನೂ ಮಾಡಲು ತಿಳಿಯದೆ ನಡುರಾತ್ರಿ ಮನೆಗೆ ಬಂದೆ. ಮನೆಯ ವಸ್ತುಗಳನ್ನೆಲ್ಲಾ ಅಚೀಚೆ ಸರಿಸಿ ನಡುವೆ ದಿವಾನ ಇಟ್ಟು ಅವನ ಅಂತಿಮ ದರ್ಶನದ ಸಿದ್ಧತೆ ಮಾಡಿ, ಹೇಗಾದರಾಗಲಿ ಅಂತ ಎಂದಿನಂತೆ ಗಂಜಿಮಾಡಿಕೊಂಡು ಆಸ್ಪತ್ರೆಗೆ ಮರಳಿದೆ. ಇನ್ನೂ ಉಸಿರಾಡುತ್ತಿದ್ದ. ಮೆಲ್ಲನೆ ಅಲುಗಾಡಿಸಿದೆ. ಕಣ್ ತೆರೆದ, ಗಂಜಿ ಕುಡಿಸಿದೆ ಕುಡಿದ. ಬೆಳಿಗ್ಗೆ ಬಂದ ಡಾಕ್ಟರಿಗೆ ಆಶ್ಚರ್ಯ. 'ಅಕ್ಚುಯಲಿ ನಿನ್ನೆ ರಾತ್ರಿ ಅವ ಸತ್ತಿದ್ದ, ಇದು ನಿಜಕ್ಕೂ ವಂಡರ್' ಎನ್ನುತ್ತಾ ಫ್ರಾನ್ಸಿಯ ಬೆನ್ನು ತಟ್ಟಿ ಖುಷಿಯಾಗಿ ಹೋದರು. ಇಡೀ ದಿನ ಅವರ ವಿದ್ಯಾರ್ಥಿಗಳು ಬಂದು ಸತ್ತು ಹೋಗಿದ್ದವ ಬದುಕಿದ್ದಾನೆ ಅಂತ ಇವನನ್ನು ಮಾತನಾಡಿಸಿ ಹೋಗುತ್ತಿದ್ದರು. ಆಗಾಗ್ಗೆ ಆಸ್ಪತ್ರೆಗೆ ಊಟ ತಂದುಕೊಡುತ್ತಿದ್ದ ನಾಗಲಕ್ಷ್ಮೀ ಹರಿಹರೇಶ್ವರ 'ನೀನು ಆಧುನಿಕ ಸಾವಿತ್ರಿ' ಅಂತ ರೇಗಿಸುತ್ತಿದ್ದರು. ಆದರೆ ಅವ ಬದುಕಿದ್ದು ಅವನೊಳಗಿನ ದೈತ್ಯ ದೈಹಿಕ ಮತ್ತು ಸಂಕಲ್ಪ ಶಕ್ತಿ ಹಾಗೂ ನಮ್ಮಗಳ ಬಗೆಗಿನ ವ್ಯಾಮೋಹದಿಂದ ಎಂದರು ವೈದ್ಯರು.

ಸಾಂಸ್ಕೃತಿ ಭಿನ್ನತೆಯಿರುವ ಗಂಡ, ಜನರೇಷನ್ ಗ್ಯಾಪ್ ಇರುವ ಮಗ, ಮೂವರ ನಡುವೆಯೂ ಭಿನ್ನಾಭಿಪ್ರಾಯಗಳು. ಆದರೆ, ಯಾವುದೇ ಅತಿರೇಕಕ್ಕೆ ಹೋಗದೆ ಪರಸ್ಪರ ಗೌರವದಿಂದ ನಡೆದುಕೊಳ್ಳುತ್ತಾ ಬಾಗಿ ಮಾಗಿದ್ದೇವೆ, ನಮ್ಮ ನಮ್ಮ ಅಸ್ಮಿತೆಯನ್ನು ಕಾಪಾಡಿಕೊಂಡಿದ್ದೇವೆ. ನಮ್ಮಗಳ ನಡುವೆ ಹರಿಯುತ್ತಿರುವುದು ಅನುರಾಗದ ನದಿ. ಅದು ಯಾರು ಯಾರನ್ನೂ ಬಿಡಲು ಸಾಧ್ಯವಾಗದಂತೆ ಬಾಂಧವ್ಯದ ಬೆಸುಗೆಯಲ್ಲಿ ಮೂವರನ್ನೂ ಬೆಸೆದಿದೆ.

ಅಲೆಗಳ ನಡುವೆ...

8ನೇ ಪುಟದಿಂದ...

ನನ್ನ ತೀವ್ರ ಸಂಕಷ್ಟದ ಕಾಲದಲ್ಲಿ ಶ್ರೀನಿವಾಸ್ ಧೈರ್ಯ ತುಂಬಿದ್ದು, ಅವರು ನಡೆದುಕೊಂಡ ರೀತಿ, ಪರಿಸ್ಥಿತಿ ನಿಭಾಯಿಸಿದ್ದು... ಅವರ ಮೇಲೆ ಗೌರವವನ್ನು ನೂರ್ಮಡಿಗೊಳಿಸಿತ್ತು. ಶ್ರೀನಿವಾಸ್ ಅವರು ಪ್ರಪೋಸ್ ಮಾಡಿದ ವಿಷಯವನ್ನು ನನ್ನ ಆತ್ಮೀಯರಾದ ಅಗ್ನಿ ಶ್ರೀಧರ್ ಅವರ ಜೊತೆ ಚರ್ಚಿಸಿದೆ. ಗೆಳೆಯರ ಜೊತೆಗೂ ಮಾತನಾಡಿದೆ. ಎಲ್ಲರೂ ಖುಷಿಪಟ್ಟು ಅಭಿನಂದಿಸಿದರು.

ಈ ನಡುವೆ ನಾನು 'ಕಿರಗೂರಿನ ಗಯ್ಯಾಳಿಗಳು', 'ಎದೆಗಾರಿಕೆ' ಸಿನಿಮಾ ನಿರ್ದೇಶಿಸಿದ್ದನ್ನು ಹೇಳಿದೆ. 'ಎದೆಗಾರಿಕೆ' ಸಿನಿಮಾ ನೋಡಿದ ಮೇಲೆ ಈ ಹುಡುಗ ಮತ್ತೆ ನನ್ನ ಬಳಿ ಬರಲಾರ ಅಂದುಕೊಂಡಿದ್ದೆ. ಹಾಗಾಗಲಿಲ್ಲ, ಶ್ರೀನಿವಾಸ್ ಮತ್ತೆ ಇಮ್ಮಡಿ ಮೆಚ್ಚುಗೆಯಿಂದಲೇ ಬಂದರು.

ಪೊಲೀಸರಿಂದ ಪೆಟ್ಟುತಿಂದರು: ಅಂತೂ 2020ರ ಏಪ್ರಿಲ್ 17ಕ್ಕೆ ಅಗ್ನಿ ಶ್ರೀಧರ್ ಅವರ ಕಚೇರಿಯಲ್ಲಿ ಮಂತ್ರ ಮಾಂಗಲ್ಯ ಮಾಡಿಕೊಳ್ಳುವುದಾಗಿ ಸಿದ್ಧತೆ ಮಾಡಿದೆವು. ಸಿದ್ಧತೆಯೇನೋ ಆಗಿತ್ತು. ಆದರೆ, ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಲಾಕ್‌ಡೌನ್ ಘೋಷಣೆಯಾಯಿತು. ಪಾಂಡಿಚೆರಿಯಲ್ಲಿ ನಾನು ನನ್ನ ಮನೆಯಲ್ಲಿ, ಶ್ರೀನಿವಾಸ್ ಅವರ ಮನೆಯಲ್ಲಿ ಬಂದಿಯಾಗಿಬಿಟ್ಟೆವು. ಕೊನೆಕೊನೆಗೆ ನನ್ನಲ್ಲಿದ್ದ ಅಡುಗೆ ಸಾಮಗ್ರಿಯೂ ಖಾಲಿಯಾಯಿತು. ಆ ಸಂದರ್ಭದಲ್ಲಿ ಶ್ರೀನಿವಾಸ್ ನನಗಾಗಿ ಊಟ ತರಲು ಮುಂದಾದರು. ಈ ವೇಳೆ ಪೊಲೀಸರು ಅವರಿಗೆ ಹಲವಾರು ಬಾರಿ ಹೊಡೆದದ್ದು ಇದೆ.

ಕೋವಿಡ್ ಸಂತ್ರಸ್ತರಿಗೆ ನೆರವಾಗುವ ಸ್ವಯಂ ಸೇವಕರಾದ ಶ್ರೀನಿವಾಸ್, ಬೇರೆಯವರಿಗೂ ಊಟ ಕೊಡುತ್ತಾ ನನಗೂ ಊಟ ಕೊಟ್ಟು ಹೋಗುತ್ತಿದ್ದರು. ನನಗೆ ಊಟ ಸಿಗದಿದ್ದರೆ ಅವರಿಗಾಗುತ್ತಿದ್ದ ಕಸಿವಿಸಿ ಅಷ್ಟಿಷ್ಟಲ್ಲ. ನಾನಿರುವ ಕಟ್ಟಡದಲ್ಲಿ ಉಳಿಯಲೂ ಅಸಾಧ್ಯವಾದ ಹೊತ್ತಿನಲ್ಲಿ ಶ್ರೀನಿವಾಸ್ ತಮ್ಮ ಮನೆಗೆ ಬಂದಿರುವಂತೆ ಹೇಳಿದರು. ಆದರೆ, ಮದುವೆ ಆಗದೇ ಅಲ್ಲಿಗೆ ಹೋಗುವುದು ಸರಿಯಲ್ಲ ಅನಿಸಿತು.

ಶ್ರೀನಿವಾಸ್ ಅವರೇ ಆಗ ಪಾಂಡಿಚೆರಿಯ ರಾಜ್ಯಪಾಲರಾಗಿದ್ದ ಕಿರಣ್ ಬೇಡಿ ಅವರನ್ನು ಭೇಟಿಯಾಗಿ, ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ಎಲ್ಲರಿಗೂ ಪರಿಸ್ಥಿತಿ ವಿವರಿಸಿ ಮದುವೆಗೆ ಅನುಮತಿ ಪಡೆದರು. ತೀವ್ರ ನಿರ್ಬಂಧದ ನಡುವೆ ಬೆರಳೆಣಿಕೆಯ ಗೆಳೆಯರ ನಡುವೆ ನಮ್ಮ ಮದುವೆ ಆಯಿತು. ಮಂತ್ರ ಮಾಂಗಲ್ಯಕ್ಕಿಂತಲೂ ಸರಳವಾಗಿ ನಮ್ಮ ಮದುವೆ ನಡೆಯಿತು.

ಇಂದಿಗೂ ನಾವು ಕುವೆಂಪು ಹೇಳಿದಂತೆ ಬಾಳುತ್ತಿದ್ದೇವೆ. 'ಎಲ್ಲಿಯೂ ನಿಲ್ಲದಿರು...' ಹೌದು ಒಂದಿಷ್ಟು ದಿನ ಕರ್ಮಭೂಮಿ ಬೆಂಗಳೂರಿನಲ್ಲಿ, ಹುಟ್ಟೂರು ಪಿರಿಯಾಪಟ್ಟಣದ ಬಳಿಯ ಕಿತ್ತೂರಿನಲ್ಲಿ, ಕೊಡಗಿನ ಸೋದರತ್ತೆಯ ಮನೆಯಲ್ಲಿ, ಪಾಂಡಿಚೆರಿಯಲ್ಲಿ... ಹೀಗೆ ಅಲೆದಾಡುತ್ತಲೇ ಇದ್ದೇವೆ. ಶ್ರೀನಿವಾಸ್ ನನಗೆ ಪಾಂಡಿಚೆರಿಯ ಮೂಲೆ ಮೂಲೆಗಳನ್ನು, ವ್ಯಕ್ತಿಗಳನ್ನು ವಿವರವಾಗಿ ಪರಿಚಯಿಸಿದ್ದಾರೆ. ಈಗ ನಾವು ಬೆಳೆದ, ನಲಿದ, ಅಲೆದ ಭೂಮಿಗೆ ಕೃತಜ್ಞರಾಗಿದ್ದೇವೆ. ನಮಗೆ ಆತ್ಮತೃಪ್ತಿ ಕೊಡುವ ಕೆಲಸಗಳನ್ನು ಮಾಡುತ್ತಲೇ ಮುಂದುವರಿದಿದ್ದೇವೆ. ಅಲೆಗಳೊಂದಿಗೆ ತೇಲಿದ ಮಾತುಗಳಿವು. ಹಿಡಿಯಲ್ಲಿಟ್ಟು ಕೊಡುವುದು ಕಷ್ಟ. ಆದರೂ ಒಂದಿಷ್ಟು ಹಂಚಿಕೊಂಡಿದ್ದೇನೆ. ಇನ್ನೂ ಇದೆ... ಏನು ಮಾಡಲಿ? ನಮ್ಮ ಮಾತು, ಮೌನಗಳನ್ನು ಅಲೆಗಳೇ ಎಲ್ಲೆಲ್ಲಿಗೋ ಕೊಂಡೊಯ್ದಿವೆ. ನಮ್ಮಿಬ್ಬರನ್ನು ಬಂಧಿಸಿಟ್ಟು...



ಕಲಾವಿದನ ಕಲ್ಪನೆಯಲ್ಲಿ ಅರಳಿದ್ದ 'ಮ್ಯಾಪ್' ಇಂದು ಇದೇ ವಿನ್ಯಾಸದಲ್ಲಿ ನಿರ್ಮಾಣವಾಗಿದೆ



> ವಸ್ತುಸಂಗ್ರಹಾಲಯವೊಂದು ಜೀವಂತಿಕೆಯಿಂದ ಕೂಡಿರಬೇಕು ಎಂದರೆ ಆ ಸಂಗ್ರಹಾಲಯದಲ್ಲಿನ ಕಲೆಗಳನ್ನು ಜನರು ಆನಂದಿಸಬೇಕು, ಅದರ ಬಗ್ಗೆ ಚರ್ಚೆ, ಸಂವಾದ, ಅಧ್ಯಯನ ಮಾಡಬೇಕು, ಕಲೆಗಳ ಕುರಿತು ಸಿನಿಮಾ ನೋಡಿ, ಅವುಗಳ ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳಬೇಕು. ನಾನು ನೋಡಿದಂಥ ಮ್ಯೂಸಿಯಂಗಳಲ್ಲಿ ಇವುಗಳ ಕೊರತೆ ಕಾಣುತ್ತಿತ್ತು.
>
> **ಅಭಿಷೇಕ್ ಪೊದ್ದಾರ್,** ಮ್ಯಾಪ್ ಸಂಸ್ಥಾಪಕ ಮತ್ತು ಟ್ರಸ್ಟಿ

'ಜ್ಯೂಯೆಲ್ ಬಾಕ್ಸ್'


8ನೇ ಪುಟದಿಂದ...

ಇದೀಗ ಚಿತ್ರಕಲೆಗಳಿಂದ ಚಿತ್ರಪಟಗಳತ್ತ ಹೆಜ್ಜೆ ಇಡುವ ಸಮಯ. ಗ್ರಾಮೀಣ ಭಾರತದ ಸಂಸ್ಕೃತಿಯನ್ನು ತನ್ನ ಕ್ಯಾಮೆರಾದೊಳಗೆ ಸೆರೆಹಿಡಿದ ಕಲಾವಿದ ಜ್ಯೋತಿ ಭಟ್ ಅವರ 'ಛಾಯಾ' ಪಯಣದ ಜೊತೆಗೆ 'ಟೈಂ ಆ್ಯಂಡ್ ಟೈಂ ಅಗೈನ್' ಎಂಬ ಪ್ರದರ್ಶನದಲ್ಲಿ ಹೆಜ್ಜೆಹಾಕಿದೆವು. ಮ್ಯಾಪ್‌ನ ಪ್ರಮುಖ ಛಾಯಾಚಿತ್ರಗಳ ಸಂಗ್ರಹದಲ್ಲಿ ಜ್ಯೋತಿ ಭಟ್ ಅವರು ಸೆರೆಹಿಡಿದ ಸಾವಿರ ಚಿತ್ರಗಳಿದ್ದು, 60 ಸಾವಿರ ನೆಗೆಟಿವ್‌ಗಳು ಡಿಜಿಟಲ್ ರೂಪದಲ್ಲಿ ವೀಕ್ಷಿಸಲು ಲಭ್ಯವಿದೆ.

'ಲಾಕ್‌ಡೌನ್ ಎನ್ನುವುದು ಜನರಿಗೆ ಕಲೆ, ಚಿತ್ರಕಲೆಯ ಮೇಲೆ ಮತ್ತೆ ಆಸಕ್ತಿ ಹುಟ್ಟಿಸಿದೆ ಅಲ್ಲವೇ' ಎಂದು ಅಭಿಷೇಕ್ ಜೊತೆ ಮತ್ತೆ ಮಾತಿಗಿಳಿದೆ. 'ಹೌದು, ಲಾಕ್‌ಡೌನ್ ಸಂದರ್ಭದಲ್ಲಿ ಹಲವರು ಚಿತ್ರಕಲೆಯ ಬಗ್ಗೆ ಇದ್ದ ಆಸಕ್ತಿಯನ್ನು ಮತ್ತೆ ಕಂಡುಕೊಂಡರು. ಈ ಹೆಜ್ಜೆ ಸ್ವಾಗತಾರ್ಹ. ಜೀವನದಲ್ಲಿ ಏನನ್ನೋ ಕಳೆದುಕೊಂಡಿದ್ದೇವೆ ಎಂದು ಆ ಸಂದರ್ಭದಲ್ಲಿ ಮತ್ತೆ ಮನಸ್ಸಿಗೆ ಅನ್ನಿಸಿತಲ್ಲವೇ? ಅಷ್ಟು ಸಾಕು. ಪ್ರತಿನಿತ್ಯದ ಜೀವನ ಎಷ್ಟು ಯಾಂತ್ರಿಕವಾಗಿದೆ ಎಂದರೆ, ಒಂದು ಸುಂದರ ಸೂರ್ಯೋದಯ, ಸೂರ್ಯಾಸ್ತವನ್ನೂ ನಾವು ಗಮನಿಸುತ್ತಿಲ್ಲ. ಕಲೆ ಎನ್ನುವುದೂ ಇದರಂತೆ' ಎನ್ನುತ್ತಾ ಹೆಜ್ಜೆ ಹಾಕಿ ಶಿಲ್ಪಕಲೆಗಳ ಲೋಕಕ್ಕೆ ಬಂದೆವು.

ಕರ್ನಾಟಕದವರೇ ಆದ ಎಲ್.ಎನ್. ತಲ್ಲೂರ್ ಇಲ್ಲಿ ತಮ್ಮ ಶಿಲ್ಪಕಲೆಗಳ ಮುಖಾಂತರ ನಿಮ್ಮೊಂದಿಗೆ ಸಂವಹನದಲ್ಲಿ ತೊಡಗಿಕೊಳ್ಳುತ್ತಾರೆ. ಪ್ಲೈವುಡ್, ಕಾಂಕ್ರೀಟ್, ಕಂಚು ಮತ್ತು ಡಿಜಿಟಲ್ ಮಾದರಿಯಲ್ಲಿ ನಿರ್ಮಾಣವಾದ ವಸ್ತುಗಳಿಂದ ಜೀವಪಡೆದ ತಲ್ಲೂರ್ ಅವರ ಶಿಲ್ಪಕಲೆಗಳು ಸಾಂಪ್ರದಾಯಿಕ ಕಲಾಕೃತಿಗಳಿಗೆ ವೈದೃಶ್ಯವಾಗಿವೆ.

ಚಿತ್ರಪಟಗಳಿಗೆ ಜೀವ: ಇಲ್ಲಿನ ಕೆಲ ಚಿತ್ರಕಲೆಗಳು ನೋಡುಗರೆದುರೇ ಜೀವತಳೆಯುತ್ತವೆ. ಮಂಜೀತ್ ಬಾವ ಅವರ 'ಕೃಷ್ಣ ಈಟಿಂಗ್ ದಿ ಫೈಯರ್' ಚಿತ್ರಕಲೆಯಲ್ಲಿ ಆ್ಯನಿಮೇಷನ್ ಮೂಲಕ ಜೀವ ಪಡೆಯುತ್ತದೆ. ಇಷ್ಟೇ ಅಲ್ಲದೆ ಕೆಲ ಚಿತ್ರಕಲೆಗಳು 3ಡಿ ರೂಪದಲ್ಲಿ ವೀಕ್ಷಣೆಗೆ ಲಭ್ಯವಿದ್ದು, ಕೃತಕ ಬುದ್ಧಮತ್ತೆ(ಎಐ) ಚಮತ್ಕಾರದಿಂದ ಇಡೀ ವಸ್ತು ಸಂಗ್ರಹಾಲಯವೇ ಜೀವತಳೆದು ವೀಕ್ಷಕರ ಎದುರಿಗೆ ನಿಲ್ಲುತ್ತದೆ.



1957ರಲ್ಲಿ ತೆರೆಕಂಡ 'ಮದರ್ ಇಂಡಿಯಾ' ಸಿನಿಮಾದ ಪೋಸ್ಟರ್

ಇದು ಅಂತಿಂಥ ಮ್ಯೂಸಿಯಂ ಅಲ್ಲ!

ಉದ್ಯಾನ ನಗರಿಯ ಹೃದಯ ಭಾಗದಲ್ಲಿ ಇರುವ 44 ಸಾವಿರ ಚದರಡಿಯ ಮ್ಯಾಪ್ ಕಟ್ಟಡವನ್ನು ಬೆಂಗಳೂರು ಮೂಲದ ವಾಸ್ತುಶಿಲ್ಪಿಗಳಾದ ನಿಶಾ ಮ್ಯಾಥ್ಯೂ ಮತ್ತು ಸೌಮಿತ್ರೊ ಘೋಷ್ ವಿನ್ಯಾಸಗೊಳಿಸಿದ್ದಾರೆ. ಇದು ಸಾಮಾನ್ಯ ವಸ್ತುಸಂಗ್ರಹಾಲಯದಂತಿಲ್ಲ! ಇಂಗ್ಲೆಂಡ್‌ನಲ್ಲಿ ತಯಾರಾಗುತ್ತಿದ್ದ ಸ್ಟೈನ್‌ಲೆಸ್ ಸ್ಟೀಲ್‌ನ ನೀರಿನ ಟ್ಯಾಂಕ್ ಮಾದರಿಯಲ್ಲೇ ಈ ಕಟ್ಟಡ ವಿನ್ಯಾಸಗೊಂಡಿದೆ. ಇದೊಂದು ರೀತಿ ಪುಟ್ಟ ಚಿನ್ನಾಭರಣದ ಬಾಕ್ಸ್‌ಗೆ ರೂಪಕ. ಐದು ಅಂತಸ್ತಿನ ಸಂಗ್ರಹಾಲಯ ಕಲೆ, ಶಿಲ್ಪಕಲೆಗಳ ಸಂಗ್ರಹ, ಅಡಿಟೋರಿಯಂ, ಗ್ರಂಥಾಲಯ, ಮಲ್ಟಿ ಮೀಡಿಯಾ ಗ್ಯಾಲರಿ, ತಂತ್ರಜ್ಞಾನ ಕೇಂದ್ರ, ಅಧ್ಯಯನ ಕೇಂದ್ರ, ಸಂಶೋಧನಾ ಮತ್ತು ರಕ್ಷಣೆ ಘಟಕ, ಉಡುಗೊರೆಗಳ ಅಂಗಡಿ, ಕೆಫೆಟೇರಿಯಾ, ರೆಸ್ಟೋರೆಂಟ್ ಒಳಗೊಂಡಿದೆ. ಇಲ್ಲಿನ ಭೇಟಿಯ ಅನುಭವವೇ ವಿಭಿನ್ನ.

ಮುನ್ನೋಟ 12-02-2023 ರಿಂದ 18-02-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಪ್ರಭಾವಿ ವ್ಯಕ್ತಿಯೊಬ್ಬರ ಸಹಾಯದಿಂದ ನಿಮ್ಮ ವೈಯಕ್ತಿಕ ಕೆಲಸಗಳನ್ನು ಮಾಡಿಕೊಳ್ಳುವಿರಿ. ಸಂಸ್ಥೆಯ ಸಲಹೆಗಾರರು ಆಗಿರುವವರಿಗೆ ಒತ್ತಡ ಹೆಚ್ಚಾಗಬಹುದು. ಜನರನ್ನು ನೀವು ನೋಡುವ ರೀತಿ ಬದಲಾದಾಗ ಜನರು ನಿಮಗೆ ಒಳ್ಳೆಯವರಂತೆ ಕಾಣುವರು. ಹಿತಶತ್ರುಗಳ ಬಗ್ಗೆ ಹೆಚ್ಚು ಎಚ್ಚರವಹಿಸಿರಿ. ಹಣದ ಒಳಹರಿವು ಕಡಿಮೆ ಇದ್ದು ಆದಾಯಕ್ಕಿಂತ ಖರ್ಚು ಹೆಚ್ಚಾಗುವ ಸಂದರ್ಭವಿದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಉದ್ಯೋಗ ಆಕಾಂಕ್ಷಿಗಳಿಗೆ ಸಂದರ್ಶನದ ಕರೆಗಳು ಬರಬಹುದು, ಅದಕ್ಕೆ ಬೇಕಾದ ತಯಾರಿ ಮಾಡಿಕೊಳ್ಳಿ. ನಿಮ್ಮ ಅಂತಃಚಕ್ಷುವಿನ ಕೆಲವು ಸ್ಪಷ್ಟ ತೀರ್ಮಾನಗಳು ಗೆಲುವು ತರುತ್ತವೆ. ವೃತ್ತಿಯಲ್ಲಿ ಕಾರ್ಯಸಾಧನೆ ಮಾಡಿ ಹೆಸರು ಗಳಿಸುವಿರಿ. ತಾಯಿ ಆರೋಗ್ಯದಲ್ಲಿ ಚೇತರಿಕೆ ಕಾಣಬಹುದು. ಬರಹಗಾರರು ತಮ್ಮ ಹೊಸ ಬರವಣಿಗೆಯನ್ನು ಆರಂಭ ಮಾಡುವರು. ಅದಿರು ವ್ಯಾಪಾರಿಗಳಿಗೆ ಲಾಭವಿದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಉದ್ದಿಮೆದಾರರು ಹೊಸ ಯಂತ್ರೋಪಕರಣಗಳನ್ನು ಖರೀದಿ ಮಾಡುವ ಸಂದರ್ಭವಿದೆ. ವಾಹನದ ಬಿಡಿಭಾಗಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಲಲಿತ ಕಲೆಯನ್ನು ಕಲಿಯುತ್ತಿರುವವರಿಗೆ ಸೂಕ್ತ ಗುರುಗಳ ಜೊತೆ ಸಫಲತೆ ದೊರೆಯುತ್ತದೆ. ರಬ್ಬರಿನಿಂದ ತಯಾರಿಸುವ ಉಪ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರ ವಿಸ್ತರಣೆ ಆಗಲಿದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ನ್ಯಾಯಾಲಯದ ಹೋರಾಟಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯಾಗುವ ಸಂದರ್ಭವಿದೆ. ಆದರೆ, ನಿಮ್ಮ ನಿಲುವಿನಿಂದ ಹಿಂದೆ ಸರಿದಲ್ಲಿ ಸಂಪೂರ್ಣ ನಷ್ಟವಾಗುತ್ತದೆ. ಉನ್ನತ ವಿದ್ಯಾಭ್ಯಾಸ ಮಾಡಬೇಕೆಂದಿರುವವರಿಗೆ ಪರಿಚಿತರ ಮೂಲಕ ಧನಸಹಾಯ ಸಿಗುವ ಸಾಧ್ಯತೆಗಳಿವೆ. ಕೈಮಗ್ಗದ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ವ್ಯವಹಾರ ಹೆಚ್ಚಾಗುತ್ತದೆ. ಕೆಮ್ಮು ಮತ್ತು ಕಫ ಇರುವವರು ಹೆಚ್ಚು ಎಚ್ಚರವಹಿಸಿರಿ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ನಿಮ್ಮ ಸಂಕಷ್ಟಗಳಿಗೆ ಹಿರಿಯರಿಂದ ನೆರವು ಸಿಗಲಿದೆ. ಉಳಿತಾಯದ ವಿಷಯದಲ್ಲಿ ಹಣ ಹೆಚ್ಚು ಕಡಿಮೆಯಾಗಿ ನಷ್ಟ ಆಗಬಹುದು. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ರಾಜಕೀಯದಲ್ಲಿರುವವರಿಗೆ ಮೇಲುಗೈ ಸಾಧಿಸಲು ಪೂರಕವಾದ ವಾತಾವರಣ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸ್ವಲ್ಪ ಹಿನ್ನಡೆ ಆಗಬಹುದು. ಕೃಷಿ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಬದುಕಿನಲ್ಲಿ ಅತಿ ವಿಲಾಸಿತನ ಬೇಡ. ಕೆಲಸಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿರುವವರಿಗೆ ಕಾರ್ಮಿಕರ ಅಸಹಕಾರ ಬಹಳ ಕಷ್ಟ ತರಬಹುದು. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಬಂಧುಗಳ ಸಹಾಯ ನಿಮ್ಮ ಕಷ್ಟದಲ್ಲಿ ಒದಗಿ ಬರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ದೊರೆಯುತ್ತದೆ. ಅವರಿಗೆ ಬರಬೇಕಾದ ಸಹಾಯಧನ ಹರಿದು ಬರುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ಬಂದ ಅವಕಾಶಗಳನ್ನು ಯುವಕರು ಸಮರ್ಥವಾಗಿ ಬಳಸಿಕೊಳ್ಳಿರಿ. ಉನ್ನತ ವಿದ್ಯಾಭ್ಯಾಸ ಮಾಡಬೇಕೆನ್ನುತ್ತಿರುವವರಿಗೆ ಸೂಕ್ತ ಮಾರ್ಗದರ್ಶನ ದೊರೆಯುತ್ತದೆ. ಸಂಗಾತಿಯೊಡನೆ ಸಾಮರಸ್ಯ ಕಾಪಾಡಿಕೊಳ್ಳುವುದು ಉತ್ತಮ. ನ್ಯಾಯಾಲಯದಲ್ಲಿನ ದಾವೆಗಳು ನಿಮ್ಮ ವಿರುದ್ಧವಾಗಬಹುದು, ಸ್ವಲ್ಪ ಎಚ್ಚರವಹಿಸಿರಿ. ಕಾರ್ಮಿಕರಿಗೆ ಶ್ರಮಕ್ಕೆ ತಕ್ಕ ಫಲ ಈಗ ದೊರೆಯುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ವ್ಯವಹಾರದಲ್ಲಿ ಒದಗಿ ಬಂದ ಹೊಸ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಿರಿ. ಆರೋಗ್ಯ ವೃದ್ಧಿಗಾಗಿ ದೇಹದಂಡನೆಯ ಅಗತ್ಯವಿದೆ. ವ್ಯಾಪಾರ ವ್ಯವಹಾರಗಳನ್ನು ವಿಸ್ತರಿಸಲು ಸಾಕಷ್ಟು ದೂರ ಪ್ರಯಾಣ ಮಾಡುವಿರಿ. ವ್ಯವಹಾರದ ವಿಷಯದಲ್ಲಿ ಹೆಚ್ಚಿನ ಜಾಗ್ರತೆ ಅಗತ್ಯ. ಹಣದ ಒಳಹರಿವು ಉತ್ತಮವಾಗಿರುತ್ತದೆ.


ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಕಚೇರಿಯಲ್ಲಿ ನೀವು ಮಾಡುವ ಹೆಚ್ಚಿನ ದುಡಿಮೆ ಮತ್ತು ನಿಸ್ವಾರ್ಥ ಸೇವೆಯನ್ನು ನಿಮ್ಮ ಅಧಿಕಾರಿಗಳು ಪರಿಗಣಿಸುತ್ತಾರೆ. ಸರ್ಕಾರಿ ಸಂಸ್ಥೆಗಳಲ್ಲಿ ವ್ಯಾಪಾರ, ವ್ಯವಹಾರಗಳನ್ನು ನೋಡಿಕೊಳ್ಳುವ ಅಧಿಕಾರಿಗಳಿಗೆ ಹೆಚ್ಚಿನ ಒತ್ತಡ ಇರುತ್ತದೆ. ಯಾವುದೇ ಹೊಸ ಜವಾಬ್ದಾರಿಗಳನ್ನು ತೆಗೆದುಕೊಳ್ಳುವ ಮುನ್ನ ಅದರ ಬಗ್ಗೆ ಸರಿಯಾಗಿ ತಿಳಿಯಿರಿ. ಧನ ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಹೊಸ ವಸ್ತ್ರಗಳನ್ನು ಖರೀದಿ ಮಾಡುವ ಯೋಗವಿದೆ. ರಾಜಕೀಯದಲ್ಲಿರುವವರು ವರಿಷ್ಠರ ಮಾತಿನಂತೆ ನಡೆಯುವುದು ಉತ್ತಮ. ನೂತನ ಆಸ್ತಿ ಸಂಪಾದನೆ ಬಗ್ಗೆ ಹೆಚ್ಚು ಆಲೋಚನೆ ಮಾಡುವಿರಿ. ಹೊಸ ಅವಕಾಶವೊಂದು ನಿಮ್ಮ ವೃತ್ತಿಯಲ್ಲಿ ಬರುತ್ತದೆ. ಅದನ್ನು ಸರಿಯಾಗಿ ಬಳಸಿಕೊಳ್ಳಿರಿ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ದೈಹಿಕ ಕೆಲಸವನ್ನು ಮಾಡಿ ದುಡಿಯುತ್ತಿರುವವರಿಗೆ ಹೆಚ್ಚಿನ ಕೆಲಸ ದೊರೆಯುತ್ತದೆ. ಅಸೂಯೆ ಪಡುವ ಸಹೋದ್ಯೋಗಿಗಳ ನಡುವೆ ನೀವು ಎಚ್ಚರಿಕೆಯಿಂದ ಕೆಲಸ ಮಾಡಬೇಕಾದ ಪರಿಸ್ಥಿತಿ ಇದೆ. ಹಣದ ಒಳಹರಿವು ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ವೃತ್ತಿಯಲ್ಲಿ ನಿಮ್ಮ ಆಲಸಿತನವು ನಿಮಗೆ ಮುಳುವಾಗುವ ಸಾಧ್ಯತೆ ಇದೆ. ಕಚೇರಿಯಲ್ಲಿನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಈಗ ತೆಗೆದುಕೊಳ್ಳುವವರು ಹೆಚ್ಚು ಶ್ರಮ ಹಾಕಲೇಬೇಕು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಅತಿಯಾದ ಆತ್ಮಾಭಿಮಾನ ನಿಮ್ಮನ್ನು ಕಾಡಬಹುದು. ಮಾತುಗಳ ಕಾಠಿಣ್ಯತೆಯನ್ನು ಕಡಿಮೆ ಮಾಡಿಕೊಳ್ಳುವುದು ಒಳ್ಳೆಯದು. ವೈಯಕ್ತಿಕ ಅಭಿವೃದ್ಧಿಗಾಗಿ ನೀವು ಮಾಡುವ ಕೆಲಸಗಳನ್ನು ಜನರು ಗಮನಿಸುವರು. ಆರೋಗ್ಯ ಸಲಹೆಗಾರರಿಗೆ ಬೇಡಿಕೆ ಹೆಚ್ಚಾಗಿ ಸಂಪಾದನೆ ಕೂಡ ಹೆಚ್ಚುತ್ತದೆ. ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವವರಿಗೆ ಆದಾಯ ಹೆಚ್ಚುತ್ತದೆ.

ಪದಬಂಧ 2776



ಮೇಲಿನಿಂದ ಕೆಳಕ್ಕೆ
1. ಅಲ್ಪ ವಿಚಿತ್ರವಾದ ಬ್ರಹ್ಮನ ಹೆಸರು 3
2. ಹಂದಿ ರೂಪದ ದೈವ 3
3. ಆನೆ ಮೊಗದವ, ಭೂತ ಗಣಾಧಿ ಸೇವಿತ 4
4. ಬಿರುಸಿನ ಕೆಲಸದ ನಡುವೆ ಸಿಕ್ಕ ಬಿಡುವಿನ ದಿವಸ 4
6. ಮಹಾಶಿವನೆಂಬ ಪರಮಾತ್ಮ 4
8. ಮದುವೆಯಾದ ಹೆಣ್ಣುಮಕ್ಕಳನ್ನು ಸೆಳೆಯುವ ಮಾತೃ ಗೃಹ 5
10. ಜನನಿಯಿಂದ ಹುಟ್ಟಿ ಹರಡಿದ್ದು 3
12. ಒಂದರಲ್ಲೊಂದು ಸೇರಿಹೋಗುವಂತೆ ಮಾಡುವವ 5
14. ಸೂರ್ಯನಿಂದ ಹುಟ್ಟಿದವ 3
16. ನೂರು ವರ್ಷಗಳ ಬದುಕಿನ ಗೌರವ 4
18. ಕುಂಡಲಿಯಲ್ಲಿ ಒಂದು ಗುಂಪಿ ಶಕ್ತಿ 4
19. ಜಾಜಿ, ಸಂಪಿಗೆ, ಮಲ್ಲಿಗೆ ಹೂಗಳ ಹಾರ ಧರಿಸಿದ ಈಶ್ವರ 4
21. ನಿಷ್ಠೆಯಿಂದ ಕೆಲಸ ಮಾಡುವ ಪ್ರಜ್ಞೆ 3
23. ಒಳ್ಳೆಯದು ನಡೆಯುವುದಕ್ಕೆ ಸಿಗುವ ಭಗವಂತ ಕೃಪೆ 3

ಎಡದಿಂದ ಬಲಕ್ಕೆ
1. ಪ್ರಪಂಚವನ್ನೇ ಅಪ್ಪಿಕೊಳ್ಳುವ ಮನುಷ್ಯ 5
3. ಇವನು ವಿಷ್ಣುವೂ ಹೌದು, ಹನುಮನೂ ಹೌದು, ಭೀಮ ದುರ್ಯೋಧನನು ಹೌದು 4
5. ಚೈತ್ರದಲ್ಲಿ ಹೊಸದಾಗಿ ಹೊರಬಂದ ಕುಡಿ 3
7. ಒಳಗೊಳಗೇ ಸಾಧಿಸುವ ವೈರತ್ವ 4
9. ಕಾಡಿನಲ್ಲಿ ಊಟದ ಕೂಟ 5
11. ದೇವಾಲಯದ ಪುಟ್ಟ ರೂಪ 3
13. ಪಾಂಡವನ ಎದುರಾಳಿಯಾಗಿ ಯುದ್ಧಕ್ಕೆ ನಿಂತವ 3
15. ಬೆಟ್ಟದ ಮೇಲೆ ಗಾಳಿ ಹಿಂದುಮುಂದಾಗಿ ಬೀಸಿದೆ 3
16. ನೂರರ ಸಂಗ್ರಹ 3
17. ನೆಲವನ್ನು ಬಿಟ್ಟು ಮೇಲೆ ಹಾರುವ ಕಲೆ 3
18. ಅರಸು ಪುತ್ರ 5
20. ಮಿನುಗುವ ಚುಕ್ಕೆಗಳು ಹೊಳೆಯು ಪರಿ 4
22. ಸಂತೋಷದಿಂದ ಹಲ್ಲು ಕಿರಿಯುವಂತೆ ಮಾಡು 3
24. ರಾಮನ ಪುತ್ರರನ್ನು 'ಒಂದಿಷ್ಟಾದರೂ' ಒಳಗೊಂಡ ಪದ 4
25. ಒಬ್ಬ ಮನುಷ್ಯನ ನಡೆ ನುಡಿಗಳಿಂದ ಆಗುವ ಪರಿಣಾಮ 5

ಪದಬಂಧ ಉತ್ತರ -2775

ಮೇಲಿಂದ ಕೆಳಕ್ಕೆ

1. ಆದಾಯ 2.ಯತನ 3.ಹಗುರ 4.ಸುಶಿಷ್ಯ 6.ಜರದಾ 7.ರುಪಾಯಿ 8.ವಾಸಿನಿ 9.ವಿಹಾರಾ 12.ವಿಹಾರಿ 14.ಹೋಲಿಕೆ 16.ಪಲ್ಲವಿ 17.ರಜಾಯಿ 18.ಮನುಜ 19.ಲವಂಗ 21.ಕಳಚು 22.ದಟ್ಟಣೆ 24.ನಮನ 25.ತಿರುಚು


ಎಡದಿಂದ ಬಲಕ್ಕೆ

1. ಆಯವ್ಯಯ 3.ಹಣಕಾಸು 5.ಯಜಮಾನರು 8.ವಾರಭವಿಷ್ಯ 10.ಪಾಲಿಸಿ 11.ಸದಾವಿಜಯಿ 13.ನಿತ್ಯಹೋರಾಟ 15.ಸಪರಿವಾರ 18.ಮನೆಕೆಲಸ 20.ಜಾಮೀನು 21.ಕವಿಹೃದಯಿ 23.ಜನಪ್ರಗತಿ 26.ಚುನಾವಣೆ 27.ನಸುನಾಚು

ದಣಿವರಿಯದ ದುಡಿಮೆಗಾರ

ನಿರ್ದೇಶನ, ಬೆಳಕು ವಿನ್ಯಾಸ ಮತ್ತು ಸಂಘಟನೆಯ ಮೂಲಕ ನೇಪಥ್ಯ ಕ್ಷೇತ್ರಕ್ಕೆ ಸ್ಟಾರ್ ವ್ಯಾಲ್ಯೂ ತಂದುಕೊಟ್ಟವರು ಶ್ರೀನಿವಾಸ ಜಿ. ಕಪ್ಪಣ್ಣ. ಕಾರ್ಯಕ್ರಮ ಯಾವುದೇ ಇರಲಿ, ಅಲ್ಲಿ ಕಪ್ಪಣ್ಣ ಟಚ್ ಇರದಿದ್ದರೆ ಅದು ಅಪರಿಪೂರ್ಣ ಅನ್ನುವ ವೇದಿಕೆ ಕೌಶಲ ಅವರದ್ದು. 5 ದಶಕಗಳಿಂದ ಕನ್ನಡದ ಸಾಂಸ್ಕೃತಿಕ ಲೋಕ ಬೆಳಗುತ್ತಿರುವ ಕಪ್ಪಣ್ಣ ಅವರಿಗೆ ಫೆ. 13ರಂದು 75ರ ಹುಟ್ಟುಹಬ್ಬದ ಸಂಭ್ರಮ. ವಯಸ್ಸು ಎಪ್ಪತ್ತೈದಾದರೂ ಈಗಲೂ ಇಪ್ಪತ್ತೈದರ ಉತ್ಸಾಹ ಉಳಿಸಿಕೊಂಡಿರುವ ಕಪ್ಪಣ್ಣ ದಣಿವರಿಯದ ದುಡಿಮೆಗಾರ.





ಪತ್ನಿ ಲಲಿತಾ ಜತೆಗೆ ಶ್ರೀನಿವಾಸ ಜಿ. ಕಪ್ಪಣ್ಣ ಚಿತ್ರ– ಎಂ.ಎಸ್. ಮಂಜುನಾಥ್

ಮಂಜುಶ್ರೀ ಎಂ. ಕಡಕೋಳ

ತುಮಕೂರು ಜಿಲ್ಲೆಯ ಎಡೆಯೂರು ಸಮೀಪದ ಜಲಧಿಗೆರೆಯವರಾದ ಕಪ್ಪಣ್ಣ ಬಾಲ್ಯದಲ್ಲಿ ಬಡತನದ ಬೇಗೆಯುಂಡವರು. ತುತ್ತಿನ ಚೀಲ ತುಂಬಿಸುವುದಕ್ಕಾಗಿ ಅನಿವಾರ್ಯವಾಗಿ ಅಪ್ಪ-ಅಮ್ಮನೊಂದಿಗೆ ಬಾಲ್ಯದಲ್ಲೇ ಬೆಂಗಳೂರಿನತ್ತ ಬಂದವರು. ಹಾಗೆ ಅನಾಮಿಕರಾಗಿ ಬಂದವರು ಮುಂದೊಂದು ದಿನ ಕನ್ನಡದ ಸಾಂಸ್ಕೃತಿಕ ಲೋಕವನ್ನು ತಮ್ಮ ಬೆಳಕು ವಿನ್ಯಾಸ, ಸಂಘಟನಾ ಚಾತುರ್ಯದ ಮೂಲಕ ಬೆಳಗಿದ್ದು ಸಣ್ಣ ಸಾಧನೆಯೇನಲ್ಲ.

ಬಾಲ್ಯದಲ್ಲಿ ಆರ್ಥಿಕ ಬಡತನವಿದ್ದರೂ ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿದ್ದ ಶ್ರೀನಿವಾಸ ಅವರು ತಮ್ಮ ಮನೆಯಲ್ಲಿ ವಿದ್ಯುತ್ ಕಂಡಿದ್ದು ಮೊದಲ ವಿಮಾನ ಪ್ರಯಾಣದ ನಂತರವೇ. ಕರೆಂಟಿಲ್ಲದ ಮನೆಯಲ್ಲಿದ್ದುದರಿಂದ ಬೆಳಕಿನ ವ್ಯಾಮೋಹ ಬೆಳೆಸಿಕೊಂಡಿದ್ದ ಅವರು, ಮುಂದೊಂದು ದಿನ ಅದೇ ಕ್ಷೇತ್ರದಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರಕ್ಕೆ ಪಾತ್ರವಾಗಿದ್ದು ಅವರೊಳಗಿನ ರಂಗಬದ್ಧತೆಗೆ ದೊರೆತ ಗೌರವ.

ತಂದೆ ಗಿರಿಯಪ್ಪ ಕಾರ್ಮಿಕ ಇಲಾಖೆಯಲ್ಲಿ ಸಣ್ಣ ನೌಕರಿಯಲ್ಲಿದ್ದರೆ, ತಾಯಿ ಜಯಮ್ಮ ವಾಣಿವಿಲಾಸ ಆಸ್ಪತ್ರೆಯಲ್ಲಿ ಆಯಾ ಆಗಿದ್ದರು. ಅವರಿಬ್ಬರ ಪ್ರೀತಿಯ ಜತೆಗೆ ಇಬ್ಬರು ಸಹೋದರರು, ಒಬ್ಬ ಸಹೋದರಿಯ ಜತೆಗೆ ಬೆಳೆದ ಕಪ್ಪಣ್ಣ ಚಿಕ್ಕವಯಸ್ಸಿನಲ್ಲಿ ಏನಾದರೂ ಸಾಧಿಸುವ ಮಹತ್ವಾಕಾಂಕ್ಷೆ ಹೊಂದಿದ್ದರು. 7ನೇ ತರಗತಿಯಲ್ಲಿ ಶಾಲೆಗೇ ಹೆಚ್ಚು ಅಂಕ ಪಡೆದು ವಿಜಯಾ ಹೈಸ್ಕೂಲಿಗೆ ಸೇರುವಾಗ ಧರಿಸಲು ಒಂದು ಪೈಜಾಮವೂ ಇರದಿದ್ದಾಗ ಅಪ್ಪ ಬೇರೆಯವರ ಬಳಿ ಕೇಳಿ ಪೈಜಾಮ ತಂದುಕೊಟ್ಟ ನೆನಪು ಅವರ ಭಾವಕೋಶದಲ್ಲಿ ಇನ್ನೂ ಜತನವಾಗಿದೆ. ನ್ಯಾಷನಲ್ ಕಾಲೇಜಿನಲ್ಲಿ ವಿಚಾರವಾದಿ ಎಚ್. ನರಸಿಂಹಯ್ಯ ಅವರ ಪ್ರಭಾವದಿಂದ ವೈಚಾರಿಕ ನಿಲುವು ರೂಪಿಸಿಕೊಂಡ ಕಪ್ಪಣ್ಣ, 'ನಾನು ಯಾವುದೇ ಇಸಂಗಳನ್ನು ಒಪ್ಪುವುದಿಲ್ಲ. ಏಕೆಂದರೆ ಇಸಂಗಳು ನಮ್ಮನ್ನು ನಿಯಂತ್ರಿಸುತ್ತವೆ. ಹಾಗಾಗಿ, ನಾನು ಮನಸಿನ ಮಾತು ಕೇಳಿ ಕಾಯಕ ಮಾಡುವೆ' ಎಂದು ಖಡಕ್ ಆಗಿಯೇ ನುಡಿಯುತ್ತಾರೆ.

'ಧ್ವಜವಂದನೆ' ನಾಟಕದ ಮೂಲಕ ರಂಗಪ್ರವೇಶವಾದರೂ, ಎಂ.ಜಿ.ಆರ್., ಶಿವಾಜಿ ಗಣೇಶನ್ ಅವರ ತಮಿಳುಚಿತ್ರಗಳು ಅವರ ಭಾವಲೋಕ ವಿಸ್ತರಿಸಿದವು. ಸ್ನೇಹಿತ ರಾಮಕೃಷ್ಣನ ಜತೆಗೆ ಸಿನಿಮಾ ನೋಡಲು ತೆರಳಿ, ಅಲ್ಲಿ ಆತ ಮತ್ತೊಬ್ಬ ಸ್ನೇಹಿತನಿಗಾಗಿ ಇವರನ್ನು ಬಿಟ್ಟುಹೋದ ಅವಮಾನಪ್ರಸಂಗ ಎದುರಿಸಿದ್ದು ಅವರಲ್ಲಿನ ಸಿನಿಮಾ ವ್ಯಾಮೋಹಕ್ಕೆ ಇತಿಶ್ರೀ ಹಾಡಿತು. ಮದುವೆಯಾದ ಬಳಿಕ ಸಿನಿಮಾಕ್ಕೆ ಹೋದರೂ ಬಾಲ್ಕನಿಯಲ್ಲೇ ಸಿನಿಮಾ ನೋಡುವ ಅಭ್ಯಾಸ.

ಬಾಲ್ಯದಲ್ಲಿ ಒಂದು ಕೆ.ಜಿ ಮಾಂಸದಲ್ಲಿ ಕುಟುಂಬದ 8 ಸದಸ್ಯರೂ ಮೂರು ಹೊತ್ತು ಊಟ ಮಾಡಿ ತೃಪ್ತಿ ಪಡುತ್ತಿದ್ದ ದಿನಗಳನ್ನು ನೆನೆಯುವ ಕಪ್ಪಣ್ಣ ಅವರು, ಸ್ನೇಹಿತರಿಗೆ ಮನೆಯಲ್ಲಿ ಆಗಾಗ ಊಟ ಹಾಕಿಸುವ ಪರಿಪಾಟ ಇನ್ನೂ ಬಿಟ್ಟಿಲ್ಲ.

60ರ ದಶಕದಲ್ಲಿ 'ತುಘಲಕ್' ನಾಟಕ ಪ್ರಯೋಗಿಸಿದಾಗ, ಅದರಲ್ಲಿ ತಮ್ಮನ್ನು ಬೆಳಕು ವಿನ್ಯಾಸಕಾರ ಅಂತ ಗುರುತಿಸಿದ್ದೇ 'ಪ್ರಜಾವಾಣಿ' ಎಂದು ಕಪ್ಪಣ್ಣ ಹೆಮ್ಮೆಯಿಂದ ನುಡಿಯುತ್ತಾರೆ. ಅಂತೆಯೇ, ಪ್ರಜಾವಾಣಿಯ ಕೆ.ಎನ್. ಗುರುಸ್ವಾಮಿ ಅವರಿಂದಾಗಿ ಬೆಂಗಳೂರು ರೇಸ್‌ಕೋರ್ಸ್‌ನಲ್ಲಿ ಗೇಟ್ ಕೀಪರ್ ನೌಕರಿ ಪಡೆದು, ಆ ಸಂಬಳದಲ್ಲೇ ಶಾಲಾ-ಕಾಲೇಜಿನ ಫೀಜು ಕಟ್ಟಿದ್ದನ್ನು ವಿನಮ್ರವಾಗಿ ನೆನೆಯುತ್ತಾರೆ.

ವಾರ್ತಾ ಇಲಾಖೆಯ ನೌಕರಿಯ ಮೂಲಕ ಇಡೀ ರಾಜ್ಯದ ಸಾಂಸ್ಕೃತಿಕ ನರನಾಡಿಯನ್ನು ಅರಿತ ಕಪ್ಪಣ್ಣ ಜಾನಪದ ಕ್ಷೇತ್ರದ ಆಳ-ಅಗಲವನ್ನೂ ಅರಿತರು. ರಾಜ್ಯ ಸರ್ಕಾರದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಿನಿಮೋತ್ಸವ ಸೇರಿದಂತೆ ಇತರ ಕಾರ್ಯಕ್ರಮಗಳ ಸಂಘಟನೆ, ವಿನ್ಯಾಸದ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಿದ ಕಪ್ಪಣ್ಣ ರಾಜ್ಯವಷ್ಟೇ ಅಲ್ಲ, ರಾಷ್ಟ್ರೀಯ ಅಂತರರಾಷ್ಟ್ರೀಯ ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ತಮ್ಮೊಳಗಿನ ಸಂಘಟನಾ ಚಾತುರ್ಯಕ್ಕಾಗಿ ಜಾಗತಿಕ ಮನ್ನಣೆಗೆ ಭಾಜನರಾದರು.

ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಆಗಿ ಆಗಿನ ಅಧ್ಯಕ್ಷೆ ಚಿಂದೋಡಿ ಲೀಲಾ ಅವರ ನೇತೃತ್ವದಲ್ಲಿ ವೃತ್ತಿರಂಗಭೂಮಿಗೆ ಕಾಯಕಲ್ಪ ನೀಡಲು ಯೋಜನೆ ಜಾರಿಗೆ ತಂದರು. ಮುಂದೆ ತಾವೇ ಅಕಾಡೆಮಿ ಅಧ್ಯಕ್ಷರಾದಾಗ ರಾಷ್ಟ್ರೀಯ ರಂಗೋತ್ಸವ, ಗ್ರಾಮೀಣ ರಂಗೋತ್ಸವ, ಬಹುಭಾಷಾ ನಾಟಕೋತ್ಸವ ನಡೆಸಿದರು. ಏಣಗಿ ಬಾಳಪ್ಪ ಮತ್ತು ಆರ್. ಪರಮಶಿವನ್ ಅವರಂಥ ಮೇರು ಕಲಾವಿದರ ರಂಗಗೀತೆಗಳ ದಾಖಲೀಕರಣದ ಜತೆಗೆ ಅಕಾಡೆಮಿಯ ಕಾರ್ಯಗಳನ್ನು ವಿಕೇಂದ್ರೀಕರಣ ಮೂಡುವ ಮೂಲಕ ಹೊಸ ಪರಂಪರೆಗೆ ನಾಂದಿ ಹಾಡಿದರು. ಅಕಾಡೆಮಿಯ ಕೆಲಸಗಳ ಜತೆಗೆ ಸಾಂಸ್ಕೃತಿಕ ಲೋಕದ ದಿಗ್ಗಜರ ಜತೆಗೂಡಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಯಶಸ್ವಿಯಾದರು. ಅದು ಗಣರಾಜ್ಯೋತ್ಸವ ಪರೇಡ್‌ನ ಸಾಂಸ್ಕೃತಿಕ ತಂಡವೇ ಆಗಿರಲಿ, ಹಂಪಿ ಉತ್ಸವ ಅಥವಾ ಸಾರ್ಕ್ ಉತ್ಸವವೇ ಆಗಿರಲಿ, ಅಲ್ಲಿ ತಮ್ಮೊಂದು ಛಾಪು ಉಳಿಯುವಂತೆ ಮಾಡಿದವರು ಕಪ್ಪಣ್ಣ.


'ಪ್ರಗತಿರಂಗ' ಪ್ರವರ್ಧಮಾನಕ್ಕೆ ಬರುತ್ತಿದ್ದ ದಿನಗಳಲ್ಲಿ ಲಂಕೇಶ್ ಅವರ ರಾಜಕೀಯ ಕಾರ್ಯಕ್ರಮಗಳಿಗೆ ಸ್ಟೇಜ್ ಮಾಡಿಕೊಟ್ಟಿದ್ದ ಕಪ್ಪಣ್ಣ ಅದರ ಸಂಭಾವನೆಯನ್ನು ಪಡೆಯಲು ಹೋದಾಗಿನ ಪ್ರಸಂಗವನ್ನು ಅವರ ಮಾತಿನಲ್ಲೇ ಹೇಳುವುದಾದರೆ... 'ಕಾರ್ಯಕ್ರಮ ಮುಗಿದ ನಾಲ್ಕು ದಿನಕ್ಕೆ ಲಂಕೇಶ್ ಬಳಿ ದುಡ್ಡು ಕೇಳಲು ಹೋದರೆ, ಅವರಾಗಲೇ ಸಿ.ಎಂ ಆಗಿ ಕ್ಯಾಬಿನೆಟ್ ರಚನೆಯಲ್ಲಿದ್ದರು. ಅಲ್ಲಿ ಪ್ರೊ. ನಂಜುಂಡಸ್ವಾಮಿ, ಶ್ರೀನಿವಾಸ ಗೌಡ, ಬಸವರಾಜ ಅವರಲ್ಲದೆ ಮತ್ತೊಬ್ಬ ಲೇಖಕ ಇದ್ರು. ಅವರ ಹೆಸರು ನೆನಪಾಗುತ್ತಿಲ್ಲ. ಲಂಕೇಶ್ ಈಗ ನಾನು ಸಿ.ಎಂ. ಅಂದ್ರು. ನಂಜುಂಡಸ್ವಾಮಿ ಅಯ್ಯೋ ನಾನು ಕಣೋ ಸಿ.ಎಂ. ಅಂದ್ರು. ಅದೇ ಸಮಯಕ್ಕೆ ನಾನು ಹೋದೆ. ಅವರಿಬ್ಬರೂ ನನ್ನನ್ನು ನೋಡಿ ಅಯ್ಯೋ ನಾವು ಸಂಸ್ಕೃತಿ ಖಾತೆಯನ್ನೇ ಮರೆತಿದ್ದೇವೆ ಅಂತ ಮಾತಾಡಿಕೊಂಡರು. ಕಪ್ಪಣ್ಣ ಬಾರೋ ಸರಿಯಾದ ಸಮಯಕ್ಕೆ ಬಂದೆ. ಕಪ್ಪಣ್ಣನನ್ನೇ ಸಂಸ್ಕೃತಿ ಸಚಿವ ಮಾಡೋಣ ಅಂದ್ರು ನಂಜುಂಡಸ್ವಾಮಿ. ಅಂತೂ ಲಂಕೇಶ್ ಕ್ಯಾಬಿನೆಟ್‌ನಲ್ಲಿ 30 ನಿಮಿಷ ಸಂಸ್ಕೃತಿ ಸಚಿವನೂ ಆದೆ!' ಎಂದು ರಸವತ್ತಾಗಿ ವರ್ಣಿಸುತ್ತಾರೆ. ಇಂಥ ಹಲವು ರಸಪ್ರಸಂಗಗಳು ಕಪ್ಪಣ್ಣ ಅವರ ಖಾಸ್‌ಬಾತ್‌ನಲ್ಲಿ ಹೇರಳವಾಗಿವೆ.

ಆಗಿನ ಐಎಎಸ್ ಅಧಿಕಾರಿ ಐ.ಎಂ.ವಿಠ್ಠಲಮೂರ್ತಿ ಅವರ ನೇತೃತ್ವದಲ್ಲಿ ಕನ್ನಡದಮೊದಲ ರಿಯಾಲಿಟಿ ಷೋ 'ನಿತ್ಯೋತ್ಸವ' ರೂಪಿಸಿದ್ದು ಕಪ್ಪಣ್ಣ ಅವರ ಸಂಘಟನಾ ಚಾತುರ್ಯಕ್ಕೆ ಹಿಡಿದ ಕೈಗನ್ನಡಿ. ಜಾನಪದ, ಗ್ರಾಮೀಣ ಪ್ರತಿಭೆಗಳ ಪರ ಸದಾ ಚಿಂತಿಸುವ ಅವರ ಜಾನಪದ ಕಾಳಜಿಯಿಂದಾಗಿ ಅಕ್ಕ, ನಾವಿಕ ಉತ್ಸವಗಳ ಮೂಲಕ ಜಾನಪದ ಕಲೆಯನ್ನು ವಿದೇಶದಲ್ಲೂ ಪಸರಿಸಿದರು. ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ 80 ದಿನಗಳ 'ಜಾನಪದ ಜಾತ್ರೆ' ರೂಪಿಸಿಕೊಟ್ಟ ಕಪ್ಪಣ್ಣ, ಅಲ್ಲಿ ಭಾಗವಹಿಸಿದ ಮೂವರು ಕಲಾವಿದರಿಗೆ ಈ ಬಾರಿಯ ಪದ್ಮ ಪ್ರಶಸ್ತಿ ಬಂದಿರುವುದನ್ನು ಸಂಭ್ರಮದಿಂದ ಹೇಳಿಕೊಳ್ಳುತ್ತಾರೆ.

ತಮ್ಮೆಲ್ಲಾ ಕೆಲಸಗಳ ಹಿಂದೆ ಪ್ರೀತಿಯ ಮಡದಿ ಲಲಿತಾ, ಮಕ್ಕಳಾದ ಸ್ನೇಹಾ, ಜಯದೇವ ಅವರ ಪ್ರೀತಿ, ಬೆಂಬಲವನ್ನು ನೆನೆಯುವ ಅವರು, ತಮ್ಮ ಮನೆಯಂಗಳದ 'ಕಪ್ಪಣ್ಣ ಅಂಗಳ'ದ ಮೂಲಕ ಸಕ್ರಿಯರಾಗಿದ್ದಾರೆ. ಅವರ ಎಪ್ಪತ್ತೈದರ ಜನ್ಮದಿನದ ಪ್ರಯುಕ್ತ ನಾಡಿನ ವಿವಿಧೆಡೆ ಸ್ನೇಹಿತರು, ಅಭಿಮಾನಿಗಳು ಕಾರ್ಯಕ್ರಮ ರೂಪಿಸುವ ಮೂಲಕ ಅಭಿಮಾನ ತೋರುತ್ತಿದ್ದಾರೆ. ❖

ಕಥೆ

ಡಾ.ಬಿ.ಎಲ್.ವೇಣು
ಅವರ
ನಾಳೆಗಳಿಲ್ಲದವರು



ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ನಾ ದಿವಾಕರ
ಅವರ
ಶಾಯಿ ಖಾಲಿಯಾಗಿಲ್ಲ

ಕವನ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಅಧ್ಯಯನದ ಶಿಸ್ತು, ಸ್ವಂತಿಕೆ ಹಂಬಲ

ರಘುನಾಥ ಚ.ಹ.

ಕನ್ನಡ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಪುಸ್ತಕಗಳು ಸಾಮಾನ್ಯವಾಗಿ ಎರಡು ಬಗೆಯವು. ಅಂಕಿಅಂಶಗಳು ಪ್ರಧಾನವಾದ ಹಾಗೂ ಒಳನೋಟಗಳುಳ್ಳ ವಿಶ್ಲೇಷಣೆ ವಿರಳವಾದ ಕೃತಿಗಳು ಮೊದಲನೆಯ ಗುಂಪಿನವು. ತಕ್ಕಮಟ್ಟಿಗೆ ವಿಶ್ಲೇಷಣಾ ಪ್ರಧಾನವಾಗಿದ್ದರೂ ಅದಕ್ಕೆ ಪೂರಕವಾದ ಅಂಕಿಅಂಶಗಳ ಬೆಂಬಲವಿಲ್ಲದ ಬರವಣಿಗೆಯದು ಇನ್ನೊಂದು ಬಗೆ. ಈ ಎರಡರ ಸಮತೋಲನದ ಕೃತಿಗಳು ಕನ್ನಡದಲ್ಲಿ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ಡಿ.ವಿ. ಗುಂಡಪ್ಪನವರ 'ವೃತ್ತಪತ್ರಿಕೆ'ಯಂಥ ಆಚಾರ್ಯ ಕೃತಿಯಿದ್ದರೂ, ಅದು ಪತ್ರಿಕೋದ್ಯಮದ ಮೂಲ ತತ್ತ್ವಗಳ ಚರ್ಚೆಯ ಪ್ರಯತ್ನವೇ ಹೊರತು, ಪತ್ರಿಕೋದ್ಯಮದ ಸ್ಥಿತಿಗತಿಗಳನ್ನು ಒರೆಗೆ ಹಚ್ಚುವ ಕೃತಿಯಲ್ಲ.

ಒಳನೋಟಗಳುಳ್ಳ ವಿಶ್ಲೇಷಣೆ, ಪೂರಕ ಮಾಹಿತಿ – ಎರಡನ್ನೂ ಒಳಗೊಳ್ಳುವುದರ ಜೊತೆಗೆ ಲವಲವಿಕೆಯ ಭಾಷೆಯಿಂದಲೂ ಗಮನಸೆಳೆಯುವ ಕೃತಿ ಪದ್ಮರಾಜ ದಂಡಾವತಿ ಅವರ 'ಕನ್ನಡ ಪತ್ರಿಕೋದ್ಯಮ: ಮೂವತ್ತು ವರ್ಷ'. 1991ರಿಂದ 2021ರವರೆಗಿನ ಅವಧಿ ಲೇಖಕರ ಅಧ್ಯಯನದ ಪರಿಧಿಯಾಗಿದ್ದರೂ, ಈ ಅಧ್ಯಯನ ಕನ್ನಡಕ್ಕೆ ಸೀಮಿತಗೊಂಡಿದ್ದರೂ, ಇಲ್ಲಿನ ಬರವಣಿಗೆ ಸೂಚ್ಯರೂಪದಲ್ಲಿ ಭಾರತೀಯ ಸಮಕಾಲೀನ ಪತ್ರಿಕೋದ್ಯಮದ ಸ್ಥಿತಿ-ಗತಿಯ ಚಿತ್ರಣವೂ ಆಗಿದೆ. ಮೂರು ವರ್ಷಗಳ ಕೊರೊನಾ ಕಾಲಘಟ್ಟವನ್ನೂ ಒಳಗೊಂಡ ಕಳೆದ ಮೂರು ದಶಕಗಳು ಪತ್ರಿಕೋದ್ಯಮದ ಪಾಲಿಗೆ ನಿರ್ಣಾಯಕವೂ ಹಾಗೂ ಪತ್ರಿಕಾತತ್ತ್ವಗಳ ಅಗ್ನಿಪರೀಕ್ಷೆಯ ಸಮಯವೂ ಆಗಿರುವುದು, ಪದ್ಮರಾಜರ ವಿಶ್ಲೇಷಣೆಯನ್ನು ಕುತೂಹಲದಿಂದ ನೋಡಲು ಕಾರಣವಾಗಿದೆ. ಈ ನಿರೀಕ್ಷೆಯನ್ನು ಪುಸ್ತಕ ಹುಸಿ ಮಾಡುವುದಿಲ್ಲ. ಆಧುನಿಕ ಪತ್ರಿಕೋದ್ಯಮದ ಕಥನ ಮಾಹಿತಿಯ ಕಂತೆಯಾಗಿಯಷ್ಟೇ ಉಳಿಯದೆ, ಜಡ ವಿಶ್ಲೇಷಣೆಯಿಂದ ನೀರಸ ಓದಾಗದೆ, ಸೃಜನಶೀಲ ಸಾಮಾಜಿಕ ಸಂಕಥನವಾಗುವುದರಲ್ಲಿ 'ಕನ್ನಡ ಪತ್ರಿಕೋದ್ಯಮ: ಮೂವತ್ತು ವರ್ಷ' ಕೃತಿ ಯಶಸ್ಸು ಕಂಡಿದೆ.



ಕನ್ನಡ ಪತ್ರಿಕೋದ್ಯಮ ಮೂವತ್ತು ವರ್ಷ (1991-2021)
ಲೇ: ಪದ್ಮರಾಜ ದಂಡಾವತಿ
ಪ್ರ: ಗೀತಾಂಜಲಿ ಪ್ರಕಾಶನ, ಶಿವಮೊಗ್ಗ
ಸಂ: 9916197291
ಪು: 326 ₹300

ಒಳನೋಟ

ಈ ಕೃತಿಯಲ್ಲಿ ಕಸುಬುದಾರ ಪತ್ರಕರ್ತನ ಇರುವು ಕಾಣಿಸುವಂತೆಯೇ ಸೂಕ್ಷ್ಮಸಂವೇದಿ ಸಮಾಜ ವಿಜ್ಞಾನಿಯ ಕಣ್ಣೋಟವೂ ಇದೆ. ಪತ್ರಿಕೋದ್ಯಮದ ಒಳನಿಂತು ನೋಡುವುದು ಸಾಧ್ಯವಾಗಿರುವಂತೆ, ಅಂತರದಲ್ಲಿ ನಿಂತು ನೋಡುವುದೂ ಲೇಖಕರಿಗೆ ಸಾಧ್ಯವಾಗಿರುವುದರಿಂದಲೇ 'ಮಾಧ್ಯಮ ಕುಟುಂಬ'ಗಳಲ್ಲಿನ ಲಿಂಗ ಹಾಗೂ ಜಾತಿ ಪ್ರಾತಿನಿಧ್ಯದ ಕುರಿತು ಕಠಿಣ ಪ್ರಶ್ನೆಗಳನ್ನು ಚರ್ಚಿಸುವುದು ಸಾಧ್ಯವಾಗಿದೆ. ಕನ್ನಡ ಪತ್ರಿಕೆಗಳ ಸಂಪಾದಕರುಗಳ ಸಂದರ್ಶನವನ್ನು ಆಧರಿಸಿದ ಈ ವಿಶ್ಲೇಷಣೆ, ಸಮಾಜದ ಓರೆಕೋರೆಗಳನ್ನು ಪ್ರತಿಫಲಿಸುವ ಕನ್ನಡಿಯೂ ಸಪಾಟಾಗಿಲ್ಲದೆ, ಅರೆಕೊರೆ ಹೊಂದಿರುವುದನ್ನು ಸೂಚಿಸುತ್ತದೆ ಹಾಗೂ ಲಿಂಗ-ಜಾತಿ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಕನ್ನಡ ಪತ್ರಿಕೆಗಳು ಹೊಂದಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಓದುಗರು ಸುಲಭವಾಗಿ ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ.

'ಮಹಿಳೆ: ಅಲಂಕಾರಕ್ಕಾಗಿ ಮಾತ್ರ', 'ಅಂಚಿನಲ್ಲಿ ಉಳಿದ ಗ್ರಾಮ ಸಂವೇದನೆ', 'ಜಾತಿ ಅಂತರ ಕಾಯ್ದುಕೊಂಡ ಮಾಧ್ಯಮ', 'ಪರಭಕ್ಷಕ ದರಸಮರ' ಅಧ್ಯಾಯಗಳ ಶೀರ್ಷಿಕೆಗಳೇ ಪತ್ರಕರ್ತರಾಗಿ ಪದ್ಮರಾಜ ದಂಡಾವತಿ ಅವರ ಮನೋಧರ್ಮ ಎಂತಹದ್ದು ಹಾಗೂ ಕಾಳಜಿಗಳು ಯಾವ ಬಗೆಯವು ಎನ್ನುವುದನ್ನು ಸೂಚಿಸುವಂತಿವೆ.

'ಪ್ರಜಾವಾಣಿ' ಪತ್ರಿಕೆಯ ಕಾರ್ಯ ನಿರ್ವಾಹಕ ಸಂಪಾದಕರಾಗಿ ದೀರ್ಘ ಕಾಲ ದುಡಿದ ಲೇಖಕರ ಅನುಭವವೂ ಪ್ರೌಢ ಪ್ರಬಂಧ ಪುಷ್ಟಗೊಳ್ಳಲು ಕಾರಣವಾಗಿದೆ. ಆದರೂ, ಈ ಕೃತಿಯನ್ನು ರೂಪಿಸುವಲ್ಲಿ ಪತ್ರಕರ್ತನ ಅನುಭವದ ಪ್ರಭಾವಳಿ ಹಿನ್ನೆಲೆಗೆ ಸರಿದು, 'ಪತ್ರಿಕೋದ್ಯಮ ವಿದ್ಯಾರ್ಥಿ' ಮುನ್ನೆಲೆಗೆ ಬಂದಿರುವುದು ಕುತೂಹಲಕರ. ಈ ಸೃಜನಶೀಲ ರೂಪಾಂತರ ಕೃತಿಯ ಕಾಂತಿ ಹೆಚ್ಚಲು ಕಾರಣವಾಗಿದೆ. ಮಾಹಿತಿ ಕೋಷ್ಟಕಗಳನ್ನು ಬಣ್ಣದ ಪುಟಗಳಲ್ಲಿ ರೂಪಿಸಿರುವುದರಿಂದ ಪುಸ್ತಕದ ಸೊಗಸು ಹೆಚ್ಚಾಗಿರುವುದರ ಜೊತೆಗೆ, ಅಂಕಿಅಂಶಗಳಿಗೂ ಒಂದು ಬಗೆಯ ಮೆರುಗು ಒದಗಿದೆ.


'ಕನ್ನಡ ಪತ್ರಿಕೋದ್ಯಮ: ಮೂವತ್ತು ವರ್ಷ' ಕೃತಿ ಲೇಖಕರು ಡಿ.ಲಿಟ್. ಪದವಿಗಾಗಿ ಸಿದ್ಧಪಡಿಸಿರುವ ಮಹಾಪ್ರಬಂಧ. ಸಂಶೋಧನೆ-ಅಧ್ಯಯನದಲ್ಲಿನ ಶಿಸ್ತು ಹಾಗೂ ಸ್ವಂತಿಕೆಯ ಹಂಬಲ ಎರಡನ್ನೂ ಬಿಟ್ಟುಕೊಟ್ಟಿರುವ ಉದಾಹರಣೆಗಳೇ ಹೆಚ್ಚಾಗಿರುವ ಸನ್ನಿವೇಶದಲ್ಲಿ, ಪ್ರೌಢ ಪ್ರಬಂಧಗಳು ಮಾಹಿತಿಯ ಕ್ರೋಡೀಕರಣವಾಗಿಯಷ್ಟೇ ಉಳಿದು, ಓದುಗರಿಂದ ಅಂತರ ಕಾಪಾಡಿಕೊಂಡಿವೆ. ಇದಕ್ಕೆ ಅಪವಾದದಂತೆ ಕಾಣಿಸುವ ಪದ್ಮರಾಜರ ಅಧ್ಯಯನ ಮತ್ತು ಬರವಣಿಗೆ 'ಪ್ರೌಢ ಪ್ರಬಂಧ' ಪ್ರಕಾರಕ್ಕೆ ಗೌರವ ತರುವಂತಹದ್ದು. ❖

ಮೊದಲ ಓದು

ನಿಜ ಕಾರ್ಯಕರ್ತನ ಜೀವನಗಾಥೆ

ಕಾಂಗ್ರೆಸ್‌ನ ಮೂಲ ಆಶಯವನ್ನು ಆವಾಹಿಸಿಕೊಂಡು ಬೆಳೆದ ಕಾರ್ಯಕರ್ತರೊಬ್ಬರ ಜೀವನಗಾಥೆಯಿದು. ನಿಜ ಕಾರ್ಯಕರ್ತನೊಬ್ಬ ಬೆಳೆಯಬೇಕಾದ ಪರಿಯನ್ನೂ, ದಕ್ಷಿಣ ಭಾರತದಲ್ಲಿ ಕಾಂಗ್ರೆಸ್‌ನ ಬೆಳವಣಿಗೆಯನ್ನೂ ಜೊತೆಜೊತೆಯಾಗಿಯೇ ಕಟ್ಟಿಕೊಟ್ಟಿದೆ ಈ ಕೃತಿ.

ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಕೆ. ಕಾಮರಾಜ್ ಅವರ ಬಗ್ಗೆ ಅಲ್ಲೊಂದು ಇಲ್ಲೊಂದು ಪತ್ರಿಕಾ ಬರಹ, ಹೆಚ್ಚಾಗಿ ತಮಿಳು ಭಾಷೆಯಲ್ಲಿ ಲೇಖನಗಳು ಪ್ರಕಟವಾಗಿರಬಹುದು. ಅವರ ಬಗ್ಗೆ ಇಂಗ್ಲಿಷ್‌ನಲ್ಲಿ ವಿವರಗಳು ಬರಲು ಶುರುವಾದದ್ದು 2003ರ ಆಸುಪಾಸಿನಲ್ಲಿ. ವಿವಿಧ ಅಧ್ಯಯನಗಳ ಆಕರ, ಪ್ರಮುಖ ಘಟನಾವಳಿಗಳನ್ನು ಆಧರಿಸಿ, ಕಾಮರಾಜ್ ಅವರು ಗಾಂಧೀಜಿಯವರ ಹೋರಾಟಕ್ಕೆ ಸಂವಾದಿಯಾಗಿ ದಕ್ಷಿಣ ಭಾರತದಲ್ಲಿ ಅದೇ ಮಾದರಿಯ ಹೋರಾಟ ರೂಪಿಸಿದ್ದನ್ನು ಲೇಖಕರು ಇಲ್ಲಿ ಕಟ್ಟಿಕೊಟ್ಟಿದ್ದಾರೆ.



ದಕ್ಷಿಣದ ಗಾಂಧಿ ಕೆ. ಕಾಮರಾಜ್
ಲೇ: ಎನ್. ಜಗದೀಶ್ ಕೊಪ್ಪ
ಪ್ರ: ಸಂಕಥನ ಉದಯಗಿರಿ ಮಂಡ್ಯ
ಸಂ: 9019529494
ಪು: 148 ₹180

ಉಪ್ಪಿನ ಸತ್ಯಾಗ್ರಹದ ಮಾದರಿಯಲ್ಲೇ ನಡೆದ ವೇದಾರಣ್ಯ ಯಾತ್ರೆ, ಪ್ರತಿಭಟನೆ, ಹೋರಾಟಗಳಿಗಾಗಿ ಕಾಮರಾಜ್ ಅವರು ಅನುಭವಿಸಿದ ಜೈಲುವಾಸ, ಎದುರಿಸಿದ ಗಂಭೀರ ಆರೋಪಗಳು, ಯೌವನದ ಕಸುವು, ಹೋರಾಟ, ನ್ಯಾಯಾಲಯ, ಕಾನೂನು ಸಂಘರ್ಷಗಳಲ್ಲೇ ಕಳೆದು ಹೋದದ್ದು... ಇತ್ಯಾದಿ ವಿಷಯಗಳು ಬಹಳ ಮಾರ್ಮಿಕವಾಗಿ ನಿರೂಪಿತವಾಗಿವೆ. ಈ ಎಲ್ಲ ಘಟನೆಗಳು ಮತ್ತು ಗಾಂಧೀಜಿ ಅವರ ಹೋರಾಟದ ಜಾಡಿನ ತುಲನೆಯ ನೆಲೆಯಲ್ಲಿ ನೋಡಿದರೆ ಅವರು ನಿಜ ಅರ್ಥದಲ್ಲಿ ದಕ್ಷಿಣದ ಗಾಂಧಿ ಎಂದು ಕರೆಸಿಕೊಂಡಿದ್ದಾರೆ.

ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅವರು ಅನುಷ್ಠಾನಗೊಳಿಸಿದ ಅಭಿವೃದ್ಧಿ ಯೋಜನೆಗಳು, ದೂರದೃಷ್ಟಿಯ ವ್ಯಕ್ತಿತ್ವ, ಪ್ರಮುಖ ನಿರ್ಧಾರಗಳು, ಅಂದಿನ ಕಾಲಘಟ್ಟದ ರಾಜಕೀಯ ಬೆಳವಣಿಗೆಗಳು, ಸೋಲು-ಗೆಲುವುಗಳ ವಿವರಗಳು ಇಲ್ಲಿ ಇಡುಕಿರಿದಿವೆ. ಒಟ್ಟಿನಲ್ಲಿ ಕಾಮರಾಜ್ ಅವರ ಬದುಕನ್ನು ಸರಳವಾಗಿ ಓದಬೇಕೆನ್ನುವರಿಗೆ ಬೇಕಾಗುವ, ಓದಿಸಿಕೊಂಡು ಹೋಗುವ ಕೃತಿ.


ಆತ್ಮನಿರ್ಭರ ಗ್ರಾ.ಪಂ ಕಟ್ಟಲು ಕೈಪಿಡಿ

'ಭಾರತ ಎನ್ನುವುದು ತನ್ನೊಳಗಿನ ಹಳ್ಳಿಗಳಿಂದ ಜೀವಿಸುತ್ತಿದೆಯೇ ವಿನಾ ನಗರಗಳಿಂದಲ್ಲ ಎನ್ನುವ ವಿಷಯವನ್ನು ಕಾಲೇಜುಗಳಲ್ಲಿ ಕಲಿಯುತ್ತಿರುವ ನಾವು ಮರೆಯುತ್ತಿರುವುದು ವಿಷಾದನೀಯ. ಭಾರತದಲ್ಲಿ ಏಳು ಲಕ್ಷ ಹಳ್ಳಿಗಳಿದ್ದು, ನಗರಗಳಲ್ಲಿ ಸಮೃದ್ಧವಾದ ಶಿಕ್ಷಣ ಪಡೆದ ನೀವು ಈ ಶಿಕ್ಷಣವನ್ನು ಅಥವಾ ಅದರ ಫಲವನ್ನು ಈ ಹಳ್ಳಿಗಳಿಗೆ ತಲುಪಿಸುವ ಹೊಣೆ ಹೊಂದಿದ್ದೀರಿ...' ದಿನಪತ್ರಿಕೆಯೊಂದಕ್ಕೆ ಬರೆದ ಲೇಖನದಲ್ಲಿ ಗಾಂಧೀಜಿ ಹೀಗೆ ಉಲ್ಲೇಖಿಸಿದ್ದರು. ಹಳ್ಳಿಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿಯ ಮೂಲ ಎಂದು ಪ್ರತಿಪಾದಿಸುತ್ತ ಬಂದಿದ್ದ ಗಾಂಧೀಜಿಯ ಉದ್ದೇಶಗಳನ್ನು ಈಡೇರಿಸುವಂತೆ '21ನೇ ಶತಮಾನದ ಆತ್ಮನಿರ್ಭರ ಗ್ರಾಮ ಪಂಚಾಯಿತಿ' ಕೃತಿ ಮೂಡಿಬಂದಿದೆ.

ಐಐಟಿ ಕಾನ್ಪುರದಿಂದ ಎಂ.ಟೆಕ್ ಪದವಿ ಪಡೆದು ಅಮೆರಿಕದಲ್ಲಿ ಪಿಎಚ್.ಡಿ ಪೂರ್ಣಗೊಳಿಸಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ಶಂಕರ ಪ್ರಸಾದ್ ಅವರು ತಮ್ಮ ತಾಂತ್ರಿಕ ಜ್ಞಾನಕ್ಕೆ ಗ್ರಾಮಗಳ ಜನರ ಜೊತೆ ಒಡನಾಡಿದ ಅನುಭವಗಳನ್ನು ಬೆರೆಸಿ ಈ ಕೃತಿ ರಚಿಸಿದ್ದಾರೆ. ಹೀಗಾಗಿ ಇದು ಅನುಭಾವದ ಕೃತಿಯಾಗಿ ಹೊರಹೊಮ್ಮಿದೆ.

ತಂತ್ರಜ್ಞಾನವು ಇಂದು 5ಜಿ ವೇಗದಲ್ಲಿ ಹೆಜ್ಜೆ ಇಟ್ಟಿದ್ದು, ದೇಶದ ಬಹುತೇಕ ಹಳ್ಳಿಗಳು ಅಂತರ್ಜಾಲದ ಸಂಪರ್ಕ ಪಡೆದಿವೆ. ನಾಗರಿಕ ಸೇವೆಗಳೂ ಅಂಗೈಯಲ್ಲಿ ಇರುವ ಮೊಬೈಲ್‌ಗಳಲ್ಲೇ ದೊರಕುತ್ತಿವೆ. ಆದರೆ ಇವುಗಳು ಸೂಕ್ತ ರೀತಿಯಲ್ಲಿ ಫಲಾನುಭವಿಗೆ ತಲುಪುತ್ತಿವೆಯೇ ಎನ್ನುವುದು ಅಷ್ಟೇ ಮುಖ್ಯ. ಗ್ರಾಮಗಳಲ್ಲಿ ತಂತ್ರಜ್ಞಾನದ ಅರಿವು ಇಂದಿನ ಅಗತ್ಯ. ಈ ಕಾರ್ಯದತ್ತ ಕೃತಿಯು ಗಮನಹರಿಸಿದೆ.

ಇಲ್ಲಿನ 39 ಅಧ್ಯಾಯಗಳಲ್ಲಿ ಪಂಚಾಯಿತಿ ಆಡಳಿತದಲ್ಲಿ ದಿಕ್ಸೂಚಿ, ಜಿಪಿಎಸ್, ಸಿಕ್ಸ್ ಸಿಗ್ಮಾ ಮುಂತಾದ ಡಿಜಿಟಲ್ ತಂತ್ರಜ್ಞಾನದ ಬಳಕೆ ಹಾಗೂ ಅದರ ಉಪಯೋಗ, ಪಂಚಾಯಿತಿಯ ಸೇವೆಗಳನ್ನು ಹೇಗೆ ಆನ್‌ಲೈನ್ ಮೂಲಕ ಪಡೆಯಬಹುದು, ಬಡತನ ನಿರ್ಮೂಲನೆ, ಆಹಾರ ಭದ್ರತೆ, ಆರೋಗ್ಯ ಸೇವೆ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಗ್ರಾಮ ಪಂಚಾಯಿತಿಗಳು ಏನೇನು ಮಾಡಬಹುದು, ರಾಷ್ಟ್ರಮಟ್ಟದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅವುಗಳ ಜವಾಬ್ದಾರಿ ಹಾಗೂ ಪಾತ್ರ ಏನು ಎಂಬುದರ ಬಗ್ಗೆ ವಿವರಣೆಯಿದೆ. ಬಹುತೇಕ ಎಲ್ಲ ವಿಷಯಗಳು ತಾಂತ್ರಿಕ ಮಾಹಿತಿಯನ್ನು ಒಳಗೊಂಡಿರುವ ಕಾರಣ, ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಇವುಗಳು ಸೂಕ್ತ. ತಂತ್ರಜ್ಞಾನ ವಿಷಯದಲ್ಲಿ ಸೂಕ್ತವಾದ ಕನ್ನಡ ಪದಗಳ ಕೊರತೆ ಹೊಸದೇನಲ್ಲ. ಇಲ್ಲಿಯೂ ಹೆಚ್ಚಿನ ತಾಂತ್ರಿಕ ಪದಗಳು ಆಂಗ್ಲ ಭಾಷೆಯಲ್ಲೇ ಇದ್ದು, ಇದು ವಿಷಯವನ್ನು ಅರ್ಥೈಸಿಕೊಳ್ಳುವಲ್ಲಿ ತಡೆಯಾಗಬಹುದು.



21ನೇ ಶತಮಾನದ ಆತ್ಮನಿರ್ಭರ ಗ್ರಾಮ ಪಂಚಾಯಿತಿ
ಲೇ: ಶಂಕರ ಕೆ.ಪ್ರಸಾದ್
ಪ್ರ: ಸಂಪೂರ್ಣ ಸ್ವರಾಜ್ ಫೌಂಡೇಶನ್, ಬೆಂಗಳೂರು
ಸಂ: 9845049970
ಪು: 423 ₹495

ಒಳನೋಟ

ಹೀಗಾಗಿಯೇ ಈ ಕೃತಿ ಯಾರಿಗಾಗಿ ಎನ್ನುವ ಪ್ರಶ್ನೆಗೆ ಲೇಖಕರು ಆರಂಭದಲ್ಲೇ ಸ್ಪಷ್ಟ ಉತ್ತರ ನೀಡಿದ್ದಾರೆ. ಗ್ರಾಮದ ಅಭಿವೃದ್ಧಿಯ ಜವಾಬ್ದಾರಿ ಹೊತ್ತ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನೇ ಈ ಕೃತಿಯ ಮೊದಲ ಓದುಗರನ್ನಾಗಿ ಲೇಖಕರು ಆಯ್ಕೆ ಮಾಡಿದ್ದಾರೆ. ಜೊತೆಗೆ ಚುನಾಯಿತ ಪ್ರತಿನಿಧಿಗಳು, ಗ್ರಾಮ ಪಂಚಾಯಿತಿ ಪಿಡಿಒ ಹಾಗೂ ಕಾರ್ಯದರ್ಶಿಗಳಿಗೂ ಇದು ಮಾರ್ಗದರ್ಶಿಯಾಗಬಲ್ಲದು. ಜೊತೆಗೆ ಇಲ್ಲಿರುವ ವಿಷಯಗಳನ್ನು ಅರಿತರೆ ಗ್ರಾಮದ ಪ್ರತಿಯೊಬ್ಬ ನಾಗರಿಕನೂ ತನ್ನ ಹಕ್ಕುಗಳು ಹಾಗೂ ತನ್ನ ಗ್ರಾಮಕ್ಕೆ ಸಿಗಬೇಕಾದ ಸವಲತ್ತುಗಳ ಬಗ್ಗೆ ಸ್ಥಳೀಯ ಸರ್ಕಾರಕ್ಕೆ ಆಗ್ರಹಿಸಬಹುದಾಗಿದೆ.

ಬರವಣಿಗೆ ಸಂವಾದದ ರೂಪದಲ್ಲಿದ್ದು, ಪ್ರಶ್ನೋತ್ತರಗಳ ಮಾದರಿಯಲ್ಲಿ ಇಡೀ ಕೃತಿಯಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಚುನಾಯಿತ ಪ್ರತಿನಿಧಿಗಳ ಸಭೆಯಿಂದ ಆರಂಭವಾಗುವ ಮೊದಲ ಅಧ್ಯಾಯ ಪರಸ್ಪರ ಸಂವಾದದ ರೀತಿಯಲ್ಲೇ ಸಾಗುತ್ತದೆ. ಓದುಗನಿಗೆ ಉದ್ಭವಿಸಬಹುದಾದ ಅನುಮಾನಗಳನ್ನು ಊಹಿಸಿ, ಪ್ರಶ್ನೆಗಳಾಗಿ ಪರಿವರ್ತಿಸಿ ಸ್ವತಃ ಉತ್ತರ ನೀಡುವ ಈ ಶೈಲಿ, ಓದುಗನಿಗೆ ಮಾಹಿತಿ ದಾಟಿಸುವಲ್ಲಿ ಯಶಸ್ವಿಯಾಗಿದೆ.

ಹಳ್ಳಿಯನ್ನು ನೋಡುವ ದೃಷ್ಟಿಕೋನದಲ್ಲಿ ಆಗಬೇಕಾದ ಬದಲಾವಣೆಗಳನ್ನೂ ಸೂಕ್ಷ್ಮವಾಗಿ 'ಸಾಫ್ಟ್‌ವೇರ್ ಸೋಮು' ಪಾತ್ರದ ಮುಖಾಂತರ ಲೇಖಕರು ಇಲ್ಲಿ ಹೇಳಿದ್ದಾರೆ.

ಗ್ರಾಮ ಪಂಚಾಯಿತಿಗಳು ಇದನ್ನು ಕೈಪಿಡಿಯಾಗಿ ಬಳಸಿದರೆ ಜನಸಾಮಾನ್ಯರಿಗೆ ಉತ್ತಮ ಸೇವೆ ನೀಡಲು ಸಾಧ್ಯ. ಲೇಖಕರ ಸುದೀರ್ಘ ಕ್ಷೇತ್ರಪ್ರವಾಸದ ಅನುಭವಕ್ಕೆ ಕೃತಿಯ ಗಾತ್ರವೇ ಸಾಕ್ಷ್ಯ. ❖


ವಿಧವಾ ಪುನರ್ವಿವಾಹದ ಅನನ್ಯ ಚರಿತೆ

ಶರತ್ ಹೆಗ್ಡೆ

ಹೆಣ್ಣಿಗೆ ಪುನರ್‌ವಿವಾಹದ ಅವಕಾಶಗಳು ವೇದ-ಪುರಾಣ ಕಾಲದಿಂದಲೂ ಇದ್ದವು. ಈಗಲೂ ಇವೆ ಎನ್ನುವ ಸತ್ಯವನ್ನು ಗಂಟಾಘೋಷವಾಗಿ ಸಾರುವ ಕೃತಿ ಸವಿಸ್ಮೃತಿ. ಹೆಣ್ಣಿನ ಪುನರ್‌ವಿವಾಹದ ಸಂದರ್ಭಗಳನ್ನು ಸಾಕ್ಷೀಕರಿಸುತ್ತಲೇ ಶತಮಾನಗಳ ಹಿಂದೆಯೇ ವಿಧವಾ ವಿವಾಹವನ್ನು ಅನುಷ್ಠಾನಕ್ಕೆ ತಂದ ಧೀಮಂತ ಶಕ್ತಿಗಳ ಬಗ್ಗೆಯೂ ಕೃತಿ ವಿವರಿಸಿದೆ.

ಹೇಳಿಕೇಳಿ 'ಸವಿಸ್ಮೃತಿ' ವಿಧವಾ ಪುನರ್ವಿವಾಹದ ರೂವಾರಿಗಳನ್ನು ನೆನೆಯುವ ಹೊತ್ತಿಗೆ. ಅಬಲಾಶ್ರಮವನ್ನು ತೆರೆಯುವ ಮೂಲಕ ಇಂತಹ ಉದಾತ್ತ ಸಂಗತಿಗೆ ಅಪರಿಮಿತ ಉತ್ತೇಜನ ನೀಡಿದ ವೆಂಕಟವರದಯ್ಯಂಗಾರರು ಮತ್ತು ಅವರ ಪತ್ನಿ ಕೃಷ್ಣಮ್ಮನವರು ವಹಿಸಿದ ಪರಿಶ್ರಮದ ಕಥೆಯನ್ನು ಓದುತ್ತಾ ಹೋದಂತೆ, ಕಣ್ಣೀರಿನಿಂದ ದೃಷ್ಟಿ ಮಂಜಾಗುತ್ತದೆ. ಮಾಧ್ವಮತಕ್ಕೆ ಸೇರಿದ ಬಾಲವಿಧವೆ ಕೃಷ್ಣಮ್ಮ, ವೆಂಕಟವರದಯ್ಯಂಗಾರರನ್ನು ವರಿಸುವ ಮೂಲಕ ಸ್ವಾತಂತ್ರ್ಯ ಪೂರ್ವದಲ್ಲೇ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ್ದರು. ಅವರು ಸ್ಥಾಪಿಸಿದ ಅಬಲಾಶ್ರಮ ನೂರು ವಸಂತಗಳನ್ನು ಪೂರೈಸಿ ಮುನ್ನಡೆಯುತ್ತಿರುವುದೇ ಒಂದು ಬೆರಗು.

ವೆಂಕಟವರದಯ್ಯಂಗಾರರು ಮತ್ತು ಅವರ ಪತ್ನಿ ಕೃಷ್ಣಮ್ಮ ಅವರನ್ನು ಕುರಿತು ಡಿವಿಜಿ ಅವರು 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಬರೆದ ಬರಹವನ್ನೂ ಈ ಕೃತಿಯಲ್ಲಿ ಬಳಸಿಕೊಳ್ಳಲಾಗಿದೆ. ಅಬಲಾಶ್ರಮದ ಗೃಹಪ್ರವೇಶೋತ್ಸವಕ್ಕೆ ಸಾಕ್ಷಿಯಾಗಿದ್ದ ಡಿವಿಜಿಯವರು ಆ ಸಂದರ್ಭವನ್ನು ತಮ್ಮ ಬರಹದಲ್ಲಿ ಸ್ಮರಿಸಿಕೊಂಡಿದ್ದಾರೆ. ಇಂಡಿಯನ್ ಸಿವಿಲ್ ಸರ್ವಿಸ್‌ಗೆ ಸೇರಿದ ಐಸ್ಯಾಕ್ ಜೆ. ಪಿಟ್ಸ್ ಸಣ್ಣಪ್ರಾಯದಲ್ಲಿ ತೀರಿಕೊಂಡಾಗ ಆತನ ನೆನಪಿನಲ್ಲಿ ಅಬಲಾಶ್ರಮವನ್ನು ಸ್ಥಾಪಿಸಲು ಪ್ರೇರಣೆ ನೀಡಿದಾಕೆ ಆತನ ಪತ್ನಿ. ಪೆನುಗೊಂಡೆಯ ವಕೀಲ ಶಿವಶಂಕರಂ ಅವರಿಗೆ ಮೂರುಸಾವಿರ ರೂಪಾಯಿ ಮೂಲಧನ ಕೊಟ್ಟು ಆಶ್ರಮ ಸ್ಥಾಪನೆಗೆ ಆಕೆ ಕಾರಣವಾದರೆ, ಅದರ ಜವಾಬ್ದಾರಿ ಹೊತ್ತು ಮುನ್ನಡೆಸಿದವರು ವೆಂಕಟವರದಯ್ಯಂಗಾರ ದಂಪತಿ. ಚರಿತ್ರೆಯಲ್ಲಿ ಕಳೆದು ಹೋಗಬಹುದಾದ ಈ ಘಟನೆಗಳೆಲ್ಲವೂ ಇಲ್ಲಿ ದಾಖಲಾಗಿವೆ.



ಸವಿಸ್ಮೃತಿ
ಗೌ.ಸಂ.: ಬಾ.ವೆಂ. ಶೇಷ
ಪ್ರ.ಸಂ.: ಗೀತಾ ಕೃಷ್ಣಮೂರ್ತಿ
ಪ್ರ: ಸತ್ಪ್ರಕಾಶನ, ಅಬಲಾಶ್ರಮ, ಬಸವನಗುಡಿ, ಬೆಂಗಳೂರು
ಸಂ: 97425 88860
ಪು: 176 ₹420

ಅವಲೋಕನ

ತಳ ಸಮುದಾಯದ ಜನಪದರ ಜೀವನದಲ್ಲಿ ವಿಧವೆಯರ ಮರು ಮದುವೆ ಎಂಬುದು ಸಹಜವಾಗಿಯೇ ಇದೆ. ಉತ್ತರ ಕರ್ನಾಟಕ ಭಾಗದಲ್ಲಿ ಕೂಡಿಕೆ, ಕೂಡಾವಳಿ ಅನ್ನುವ ಪದ್ಧತಿಯೂ ಇದೆ. ಹಾಗಿದ್ದರೆ ವಿಧವೆಯರು ಮರು ಮದುವೆ ಆಗುವುದಕ್ಕೆ ಮಡಿವಂತಿಕೆಯ ಮುಸುಕು ಹಾಕಿದವರು ಯಾರು ಎನ್ನುವುದೊಂದು ಪ್ರಶ್ನೆ ಕಾಡುತ್ತದೆ.

ಈ ಪ್ರಶ್ನೆಗೆ ಪ್ರಸ್ತಾವನೆಯಲ್ಲಿ ಕೃತಿಯ ಪ್ರಧಾನ ಸಂಪಾದಕಿ ಡಾ.ಗೀತಾ ಕೃಷ್ಣಮೂರ್ತಿ ವಿವರಿಸಲು ಪ್ರಯತ್ನಿಸಿದ್ದಾರೆ. 'ವೇದ ಯುಗದ ಕೊನೆಯಲ್ಲಿ ಮಹಿಳೆಯರ ಸ್ಥಾನಮಾನ ಅವನತಿಯತ್ತ ಸಾಗಿತು. 19ನೇ ಶತಮಾನದ ವೇಳೆಗೆ ಮಹಿಳೆಯರ ಜೀವನವನ್ನು ದುರ್ಭರವನ್ನಾಗಿಸುವ ಅನೇಕ ಪಿಡುಗುಗಳು ಶುರುವಾದವು. ಸತಿ ಪದ್ಧತಿ, ಬಾಲ್ಯ ವಿವಾಹ, ಬಹುಪತ್ನಿತ್ವ, ವಿಧವಾ ವಿವಾಹ ನಿಷೇಧ ಮುಂತಾದವು. ಮುಸ್ಲಿಂ ದಾಳಿಯೊಡನೆ ಹಿಂದೂ ಸ್ತ್ರೀಯ ಅವನತಿ ಆರಂಭವಾಯಿತು...' ಎಂದು ಅವರು ಹೇಳಿದ್ದಾರೆ.

ಸಾಮಾಜಿಕ ಕಾರಣಗಳಿಂದಾಗಿ ಬಂದ ಪಿಡುಗುಗಳು ವೇದ, ಪುರಾಣ ಗ್ರಂಥಗಳಲ್ಲೂ ಅಸ್ತಿತ್ವ ಪಡೆದಿವೆ ಎಂದು ಬಿಂಬಿಸಿ, ಶಾಸ್ತ್ರದ ಮುದ್ರೆ ಒತ್ತಲಾಯಿತು ಎಂದು ಕೃತಿಯ ಹಲವು ಲೇಖನಗಳು ಹೇಳುತ್ತವೆ. ಶತಾವಧಾನಿ ಆರ್. ಗಣೇಶ್ ಅವರು 'ಒಳ್ನುಡಿ' ಲೇಖನದಲ್ಲಿ ವಿಧವಾ ಪುನರ್‌ವಿವಾಹದ ಅಗತ್ಯವನ್ನು, ಅದಕ್ಕಿರುವ ಶಾಸ್ತ್ರಸಮ್ಮತಿಯನ್ನು, ಇಂಥ ವಿವಾಹದ ಹಿಂದಿರುವ ಸ್ತ್ರೀಕುಲದ ಹಿತಚಿಂತನೆಯನ್ನು ಉಲ್ಲೇಖಗಳ ಸಹಿತ ಮಂಡಿಸಿದ್ದಾರೆ.

ರಾಜಾರಾಮ್ ಮೋಹನರಾಯ್ ಕುರಿತ ಲೇಖನದಲ್ಲಿ ಇದುವರೆಗೆ ಅಷ್ಟಾಗಿ ಸಿಗದ ಹೊಸ, ಕುತೂಹಲಕರ ವಿವರಗಳಿವೆ. ಇಸ್ಲಾಮಿ ತತ್ವದಲ್ಲಿ ಪಾರಂಗತರಾದ ಅವರನ್ನು 'ಮೌಲ್ವಿ ರಾಮಮೋಹನರಾಯ್' ಎಂದು ಅನೇಕರು ಕರೆದದ್ದು, ಮೊಘಲ್ ಸುಲ್ತಾನ್ ದ್ವಿತೀಯ ಅಕ್ಬರ್, ಅವರಿಗೆ ರಾಜಾ ಎಂಬ ಬಿರುದು ಕೊಟ್ಟದ್ದು, ಬೌದ್ಧ ಮತದ ಕೆಲ ಆಚರಣೆಗಳನ್ನು ಟೀಕಿಸಿದ್ದಕ್ಕಾಗಿ ಪ್ರಾಣ ಸಂಚಕಾರ ತಂದುಕೊಂಡದ್ದು, ರಾಮಮೋಹನರಾಯರ ಅಣ್ಣ ಜಗಮೋಹನರಾಯ್ ಅವರ ಪತ್ನಿಯನ್ನು ಬಲವಂತವಾಗಿ ಸತಿ ಪದ್ಧತಿಗೆ ದೂಡಿದ್ದು, ಆ ಘಟನೆ ರಾಜಾ ರಾಮಮೋಹನರಾಯರ ಮನ ಕಲಕಿ ಅವರು ಆ ಪದ್ಧತಿಯ ನಿರ್ಮೂಲನಕ್ಕೆ ಹೋರಾಡಿದ್ದು ಮೊದಲಾದ ಕಥನಗಳಿವೆ.

ಕೇವಲ 22 ವರ್ಷ ಬದುಕಿ, ಅನಿಷ್ಟಗಳ ವಿರುದ್ಧದ ಹೋರಾಟದಲ್ಲಿ ದಂತಕಥೆಯಾದ ಹೆನ್ರಿ ಲೂಯಿಸ್ ವಿವಿಯನ್ ಡೆರೊಜಿಯೊ, ಈಶ್ವರಚಂದ್ರ ವಿದ್ಯಾಸಾಗರ, ಸಾವಿತ್ರಿಬಾಯಿ ಫುಲೆ, ಜ್ಯೋತಿಬಾ ಫುಲೆ, ಧೋಂಡೋ ಕೇಶವ ಕರ್ವೆ, ದೇವೇಂದ್ರನಾಥ ಟ್ಯಾಗೋರ್, ಬಾಳಾಶಾಸ್ತ್ರಿ ಜಾಂಬೇಕರ್, ರಮಾಬಾಯಿ ರಾನಡೆ ಮೊದಲಾದವರ ಕುರಿತ ಲೇಖನಗಳು ಇಲ್ಲಿವೆ. ಜೊತೆಗೆ ನಮ್ಮ ನಾಡಿನ ಪ್ರಮುಖ ಸಾಹಿತಿ, ಚಿಂತಕರು ಸಮಾಜ ಸುಧಾರಕರಾದ ಘಟನೆಗಳ ವಿವರಗಳೂ ಇಲ್ಲಿವೆ.

ಆಕರ್ಷಕ ಮುದ್ರಣ, ಚಿತ್ರಗಳು ಮತ್ತು ಕುತೂಹಲಕರ ಮಾಹಿತಿಯಿಂದಾಗಿ ಕೃತಿ ಓದಿಸಿಕೊಂಡು ಹೋಗುತ್ತದೆ. ಸ್ತ್ರೀ ಸುಧಾರಣೆ ಸಂಬಂಧಿಸಿ ಅಧ್ಯಯನಕಾರರಿಗೆ ಸಂಗ್ರಹಯೋಗ್ಯ ಕೃತಿ. ❖

ತಾಜ್ ಮಹಲ್ ಒಂದೇ ಪ್ರೇಮ ಸ್ಮಾರಕವಲ್ಲ. ಅಮರ ಪ್ರೇಮದ ದ್ಯೋತಕಗಳಾದ ವಿಶಿಷ್ಟ ಸ್ಮಾರಕಗಳು ಜಗತ್ತಿನಲ್ಲಿ ಇನ್ನೂ ಹಲವಿವೆ...

ಪ್ರೀತಿ - ಸ್ಮೃತಿ ಮತ್ತು ಸ್ಮಾರಕ!




ಜಪಾನ್‌ನ ಕ್ಯೋಟೋ ನಗರದಲ್ಲಿರುವ ಕೊಡೈಜಿ ದೇವಾಲಯದ ನೋಟ

ಡಾ.ಕೆ.ಎಸ್.ಪವಿತ್ರ

ಪ್ರೀತಿಯಲ್ಲಿ ಮುಳುಗಿರುವಾಗ ಬೀಸುತ್ತಿರುವ ಗಾಳಿಯಲ್ಲೆಲ್ಲ ಪ್ರೀತಿ ತುಂಬಿರುವಂತೆ ಭಾಸವಾಗುತ್ತದೆಯಷ್ಟೆ. ಅದಕ್ಕಾಗಿಯೇ 'Love is in the air' ಅನ್ನುವುದಿರಬೇಕು! ಪ್ರೀತಿಗಾಗಿ ನಾವು ಏನು ಮಾಡಲು ಸಾಧ್ಯವಿದೆ?! ಏನನ್ನು ಬೇಕಾದರೂ ಎಂದು ಈಗಷ್ಟೇ ಪ್ರೀತಿಯಲ್ಲಿ 'ಬಿದ್ದ'ವರೆನ್ನಬಹುದು. ರಕ್ತದಲ್ಲಿ ಪ್ರೇಮಪತ್ರ ಬರೆದವರೂ ಇರಬಹುದು. ಅಥವಾ ಪ್ರೀತಿಯ ಪ್ರಥಮ ಅಲೆಯಲ್ಲಿ ಮುಳುಗೆದ್ದವರು, ಮೊದಲ ಉದ್ವೇಗ ಕಳೆದವರು ವರ್ಷಕ್ಕೊಮ್ಮೆ ಹುಟ್ಟಿದ ಹಬ್ಬಕ್ಕೋ ಅಥವಾ ಅಪರೂಪಕ್ಕೊಮ್ಮೆ 'ವ್ಯಾಲೆಂಟೈನ್ಸ್ ಡೇ'ಗೋ ಒಂದು ಹೂ /ಬಟ್ಟೆ/ ಗ್ರೀಟಿಂಗ್ ಕಾರ್ಡ್ ಇತ್ಯಾದಿ ಕೊಡುತ್ತೇವೆ - ಅಲ್ಲಿಗೆ ಪ್ರೀತಿಯ ಕಥೆ ಮುಗಿಸುತ್ತೇವೆ ಎನ್ನಬಹುದು. ಪ್ರೀತಿಗೆಂದು, ತಮಗಿರುವ ಪ್ರೀತಿಯ ಆಳ ಇತರರಿಗೂ ಗೊತ್ತಾಗಲಿ/ ಮಾದರಿಯಾಗಲಿ ಅಥವಾ ಅಮರವಾಗಿ ನಿಲ್ಲಲಿ ಎಂಬ ಕಾರಣದಿಂದ 'ಪ್ರೇಮಸೌಧ'ವನ್ನೇ ನಿರ್ಮಿಸುವವರೂ ಇರಬಹುದು.

ಹೀಗೆ ಆರಂಭಿಸಿದ ತಕ್ಷಣ 'ತಾಜ್‌ಮಹಲ್' ಬಗೆಗೇ ನಾನು ಮಾತನಾಡುತ್ತಿರಬೇಕೆಂದು ಭಾವಿಸಿ ಬಿಡಬೇಡಿ! ತಾಜ್ ಮಹಲ್‌ನಂತಹ ಪ್ರೀತಿಯ ಸ್ಮೃತಿಗಳು, ಸ್ಮೃತಿಯಿಂದ ಕಟ್ಟಿದ ಸ್ಮಾರಕಗಳು ಜಗತ್ತಿನ ಹಲವೆಡೆಗಳಲ್ಲಿವೆ. ಜಗತ್ತಿನ ಹಲವೆಡೆ ಓಡಾಡುತ್ತ, ಮ್ಯೂಸಿಯಂ-ಸ್ಮಾರಕಗಳನ್ನು ನೋಡುವ ಚಟವಿರುವ ನನಗೆ, 'ಪ್ರೇಮ-ಸ್ಮಾರಕ'ಗಳನ್ನು ಗಮನಿಸುವ ಕುತೂಹಲದ ಕೆಲಸಕ್ಕೆ ಈ ಬಾರಿಯ 'ಪ್ರೇಮಿಗಳ ದಿನ' ಸೂಕ್ತ ಎನಿಸಿಬಿಟ್ಟಿತು. ತಾಜ್‌ಮಹಲನ್ನು ಬಹು ಹಿಂದೆ ನೋಡಿದ್ದರೂ, ಷಹಜಹಾನನ ಅಮರ ಪ್ರೇಮದ ಕಥೆಯನ್ನು ಮತ್ತೆ ಮತ್ತೆ ಕೇಳಿದ್ದರೂ, ಪ್ರೀತಿ ಸ್ಮಾರಕದ ಬಗ್ಗೆ ನಾನು ಅಷ್ಟಾಗಿ ಯೋಚಿಸಿಯೇ ಇರಲಿಲ್ಲ. ಏಕೆಂದರೆ ಅದೇಕೋ ತಾಜ್‌ಮಹಲ್ ಕಥೆ ಕೇಳಿದಾಗಲೆಲ್ಲ ಪ್ರೀತಿಗಿಂತ ಸಾವು-ನೋವು-ಸಮಾಧಿಗಳೂ ಪ್ರೀತಿಯ ಭಾಗವಾಗಿಯೇ ಎದ್ದು ನಿಂತು ಬಿಡುತ್ತಿದ್ದವು. ಪ್ರೇಮದ ಜೊತೆ ಆಕರ್ಷಣೆ-ಕಲಾತ್ಮಕತೆಗಳನ್ನು ಸೆಳೆಯುವಂತಹ ಒಂದು ತಾಣ ನನಗೆ ಮೊದಲು ಸಿಕ್ಕಿದ್ದು ಜಪಾನಿನ ಕ್ಯೋಟೋ ಎಂಬ ಗೇಷ್ಯಾನಗರಿಯಲ್ಲಿ. ಇಲ್ಲಿರುವ ಒಂದು ಪ್ರಮುಖ ದೇವಾಲಯ ಕೊಡೈಜಿ ದೇವಾಲಯ. ಅಲ್ಲಿಯ ಸೌಂದರ್ಯ-ಪ್ರಕೃತಿ-ಹೂವುಗಳಿಗಿಂತ ಅದು ನನ್ನ ಗಮನ ಸೆಳೆದದ್ದು, ಒಬ್ಬ ಮಹಿಳೆ-ನೆನೆ ಎಂಬಾಕೆ ತನ್ನ ಪತಿ ಟೊಯೋಟೋಮಿ ಹಿಡೆಯೋಶಿಯ ನೆನಪಿಗಾಗಿ ಇದನ್ನು ನಿರ್ಮಿಸಿದಳು ಎಂಬುದು. ಟೀ ಮನೆಗಳು, ಬೊಂಬಿನಿಂದ ಮಾಡಿದ ಸಮಾಧಿ, ಜಪಾನೀ ಶೈಲಿಯ ಉದ್ಯಾನಗಳು ಇಲ್ಲಿವೆ.

ಇದೇ ನೆನಪಿನಿಂದ ಮಹಿಳೆಯರು ತಮ್ಮ ಪ್ರಿಯರಿಗಾಗಿ (ಬಹಳಷ್ಟು ಬಾರಿ 'ಪತಿ'!) ನಿರ್ಮಿಸಿದ ಪ್ರೇಮ ಸ್ಮಾರಕಗಳಿಗಾಗಿ ನಾನು ಹೋದೆಡೆಗಳಲ್ಲಿ ಕಣ್ಣು ಹುಡುಕುತ್ತಲೇ ಇತ್ತು. ಹಾಗೆ ಹುಡುಕುವಾಗ ಕಣ್ಣಿಗೆ ಬಿದ್ದ ಒಂದು ವಿಶೇಷ ಸ್ಮಾರಕ ಸ್ಕಾಟ್ಲೆಂಡ್‌ನ 'ಸ್ವೀಟ್ ಹಾರ್ಟ್ ಆ್ಯಬ್ಬಿ'. ಗ್ಯಾಲೋವೇಯ ಲೇಡಿ ಡರ್‌ವೋರ್‌ಗಿಲ್ಲಾ ಎಂಬ ಸ್ಕಾಟಿಷ್ ಮಹಿಳೆ ತನ್ನ ಪತಿ ಜಾನ್ ಬಲ್ಲಿಯೋಲ್ ಮೇಲಿನ ಪ್ರೀತಿಗಾಗಿ ನಿರ್ಮಿಸಿದ್ದು. ಸ್ವಾರಸ್ಯಕರ ಸಂಗತಿ ಏನು ಗೊತ್ತೆ? ಇದು ನಿಜವಾಗಿ 'ಹೃದಯ'ದ ಆರಾಧನಾ ಸ್ಥಳ! ಅಂದರೆ ತನ್ನ ಪತಿ 1268 ರಲ್ಲಿ ಸತ್ತಾಗ ಆತನ ಹೃದಯವನ್ನು 'ಎಂಬಾಮಿಂಗ್' ಮಾಡಿಸಿ, ಅದನ್ನು ಬೆಳ್ಳಿ ಮತ್ತು ದಂತದ ಪೆಟ್ಟಿಗೆಯಲ್ಲಿ ಸಂರಕ್ಷಿಸಿ, ತಾನು ಸತ್ತ ಮೇಲೆ ತನ್ನ ಶವ ಪೆಟ್ಟಿಗೆಯಲ್ಲಿ ಜೊತೆಗಿರಿಸಿಕೊಂಡ ಪ್ರೇಮಿ ಲೇಡಿ ಡರ್‌ವೋರ್‌ಗಿಲ್ಲಾ! ಹೆಸರಿಗೆ ಸರಿಯಾಗಿ ಕೆಂಪು ಕಲ್ಲಿನ ಕಟ್ಟಡ ಇದು.



ಸ್ಕಾಟ್ಲೆಂಡ್‌ನ ಸ್ವೀಟ್ ಹಾರ್ಟ್ ಆ್ಯಬ್ಬಿ

'ಪ್ರೀತಿ'ಯ ಪ್ರಬಲ ತಾಣವಾದ ಪ್ಯಾರಿಸ್‌ನಲ್ಲಿರುವ ವರ್ಸೇಯಿಲ್ಸ್ ಅರಮನೆಯಲ್ಲಿ ಪ್ರೀತಿಯ ಇನ್ನೊಂದು ಮುಖವಿದೆ. ಪೆಟಿಟ್ ಟ್ರೈಯೆನಾನ್ ಎಂಬ ಗ್ರೀಕ್ ಶೈಲಿಯ ಸ್ಮಾರಕವನ್ನು 15ನೇ ಲೂಯಿ ದೊರೆ ಕಟ್ಟಿಸಿದ್ದು ತನ್ನ ರಾಣಿಗಲ್ಲ! ತನ್ನ ಪ್ರಿಯತಮೆ, ರಾಜ ವೇಶ್ಯೆಯಾಗಿದ್ದ ಮದಾಂ ಡೆ ಪೊಂಪೊಡಾರ್‌ಳ ನೆನಪಿಗೆ. ಆದರೆ ಅದು ಪೂರ್ಣವಾಗುವ ಮೊದಲೇ ಅವಳು ಸತ್ತುಹೋದಳು. ಹೇಗೆ ಪ್ರೇಮವನ್ನೂ ವರ್ಗಾಯಿಸಬಹುದೆಂದರೆ, 16ನೇ ಲೂಯಿ ದೊರೆ ತನ್ನ ರಾಣಿ ಮೇರಿ ಆ್ಯಂಟೋನೆಯಿಟ್‌ಗೆ ಇದನ್ನು ಬಹುಮಾನವಾಗಿ ಕೊಟ್ಟುಬಿಟ್ಟ! ಅದು ರಾಣಿ ಮೇರಿಯ ಸಂತಸದ ತಾಣವಾಯಿತು.

ಇದನ್ನೆಲ್ಲಾ ನಾನು ನೋಡಿ ಅಚ್ಚರಿಪಡುತ್ತಿರುವಾಗ, ನನ್ನ ಫ್ರೆಂಚ್ ಗೆಳತಿ ಹೇಳಿದ ಮಾತು, 'ಐಫೆಲ್ ಟವರ್‌ಅನ್ನೂ ಕೂಡ ಪ್ರೇಮ ಸ್ಮಾರಕಗಳ ಪಟ್ಟಿಗೇ ಸೇರಿಸಬಹುದು. ಪ್ರೀತಿಗೆಂದು ಅದನ್ನು ಕಟ್ಟಿರಲಿಕ್ಕಿಲ್ಲ. ಆದರೆ ಪ್ರಣಯ ಯಾಚನೆಗೆ, ಪ್ರೇಮದ ತಿರಸ್ಕಾರಕ್ಕೆ, ಭಗ್ನ ಪ್ರೇಮಕ್ಕೆ, ಐಫೆಲ್ ಟವರ್ ವರುಷಗಳಿಂದ ಸಾಕ್ಷಿಯಾಗಿದೆ. ಸಾವಿರ ಸಾವಿರ ಕ್ಸೆನಾನ್ ದೀಪಗಳಿಂದ ಮಿನುಗುವ-ಬೆಳಗುವ ಈ ಕಟ್ಟಡ, 'ಐ ಲವ್ ಯೂ' ಎನ್ನಲು 'ಪರ್ಫೆಕ್ಟ್ ಸ್ಥಳ'. ಅಂತಹ ಪ್ರೇಮ ನಿವೇದನಾ ತಾಣಗಳಿಗೆ ಯಾವ ಉದ್ಯಾನವಾದರೂ ಸೂಕ್ತವೇ, ಸುತ್ತಮುತ್ತ ದೀಪಗಳಿರಲಿ, ಇಲ್ಲದಿರಲಿ, ತಲೆ-ಹೃದಯಗಳಲ್ಲಿ ದೀಪ ಝಗಮಗಿಸುತ್ತಿರುತ್ತದಲ್ಲ ಎಂದುಕೊಂಡೆ ನಾನು!

ಅಮೆರಿಕೆಯ ವಾಷಿಂಗ್ಟನ್‌ನಲ್ಲಿ ಥಾನ್‌ವ್ರುಡ್ ಕ್ಯಾಸಲ್ ಎಂಬ ದೊಡ್ಡ ಕೋಟೆಯಂತಹ ಹೋಟೆಲ್ ಇದೆ. ತನ್ನ ಪತ್ನಿ ಆ್ಯನ್ನಾಳಿಗಾಗಿ 20ನೇ ಶತಮಾನದ ಮಿಲಿಯನೇರ್ ಚೆಸ್ಟರ್ ಥಾರ್ನ್ ಮಾಡಿದ್ದೇನು ಗೊತ್ತೆ?! 400 ವರ್ಷಗಳಷ್ಟು ಹಳೆಯದಾದ ಎಲಿಜಬೆತ್ ಕಾಲದ ಕಟ್ಟಡವನ್ನು, ಇಂಗ್ಲೆಂಡಿನಲ್ಲಿ ಅದು ಇದ್ದ ಹಾಗೆಯೇ ಎತ್ತಿ, ಮೂರು ಹಡಗುಗಳಲ್ಲಿ, ಬಹುದೂರ ಸಾಗಿಸಿ ಅಮೆರಿಕೆಯ ತನ್ನ ಮೂರು ಎಕರೆಗಳ ನೆಲದಲ್ಲಿ ಅದನ್ನು ಕಟ್ಟಿ ನಿಲ್ಲಿಸಿದ್ದು. ನಂತರ ಆ್ಯನ್ನಾ ಹೇಳಿದಂತೆ ಅದರ ಅಲಂಕಾರ ಮಾಡಿದ್ದು. ನಾವೇ ಇರುವ ಮನೆಯಲ್ಲಿ, ಮನೆ ಕಟ್ಟುವಾಗ ಹೆಂಡತಿ ಹೇಳಿದ್ದನ್ನು ಉಪೇಕ್ಷಿಸುವ, ಗಂಡ ಕಟ್ಟಿಸಿದ ಮನೆಯಲ್ಲಿ ಯಾವುದೊಂದೂ ಸರಿಯಿಲ್ಲ ಎಂದು ಸದಾ ದೂರುವ ಗಂಡ-ಹೆಂಡತಿಯರೇ ಹೆಚ್ಚಿರುವಾಗ, ಚೆಸ್ಟರ್- ಆ್ಯನ್ನಾರ ಪ್ರೀತಿಯ ಗುರುತಾಗಿ, ನಿಂತಿರುವ ಥಾನ್‌ವ್ರುಡ್ ಕ್ಯಾಸಲ್‌ನ್ನು ಒಂದು ಅದ್ಭುತ ಎಂದೇ ನಾವು ಒಪ್ಪಬಹುದಾದದ್ದೇ!

ಅಮೆರಿಕ-ಯೂರೋಪ್‌ಗಳನ್ನು ದಾಟಿ, ಮಲೇಷ್ಯಾಕ್ಕೆ ಬಂದರೆ, ಅಲ್ಲಿಯೂ ಪಾಶ್ಚಾತ್ಯರ ಪ್ರೀತಿ ಬೆರಗು ಮೂಡಿಸುತ್ತದೆ. ಸ್ಕಾಟಿಷ್ ಪ್ಲಾಂಟರ್ ವಿಲಿಯಮ್ ಕೆಲ್ಲಿ ಸ್ಮಿತ್, ಪತ್ನಿ ಆ್ಯಗ್ನೆಸ್‌ಳೊಡನೆ ಮಲೇಷ್ಯಾದ ಬಟುಗಾಜಾಕ್ಕೆ ಬಂದ. ಆ್ಯಗ್ನೆಸ್ ತನ್ನ ತಾಯ್ನೆಲ ಸ್ಕಾಟ್ಲೆಂಡ್ ಅನ್ನು ತುಂಬಾ 'ಮಿಸ್' ಮಾಡತೊಡಗಿದಳು. ಪತಿಯಾದ ವಿಲಿಯಂ ಏನು ಮಾಡಿದ? ಸ್ಕಾಟಿಷ್ ಶೈಲಿಯ ಒಂದು ದೊಡ್ಡ ಮನೆಯನ್ನೇ ಕಟ್ಟಿಸಿದ. ದೊಡ್ಡ ಮನೆ ಅಂದರೆ ಈಗ ಅದೊಂದು ಬೃಹತ್ ಸ್ಮಾರಕ. ಇಂದು ಅವಶೇಷಗಳಾಗಿಯಷ್ಟೇ ಉಳಿದಿದೆ. ಆದರೂ ವಿಲಿಯಂ, ಆ್ಯಗ್ನೆಸ್‌ಗಾಗಿ ಮಾಡಿದ ಪ್ರೀತಿಯ ಪ್ರಯತ್ನ ನಮ್ಮನ್ನು ತಟ್ಟುತ್ತದೆ.

ತಾಜ್‌ಮಹಲ್ಲಿನ ವೈಭವದಲ್ಲಿಯೇ ಮುಳುಗಿರುವ ನಮಗೆ ಭಾರತದಲ್ಲಿಯೂ ಇಂತಹ ಪ್ರೇಮ ಸ್ಮಾರಕಗಳು ಗಮನಕ್ಕೇ ಬರಲಾರವು. ರಾಣಿ ಪದ್ಮಿನಿ, ಮತ್ತು ರಾಜಾ ರತನ್ ರಾವಲ್‌ಸಿಂಗ್‌ರ ಅಮರ ಪ್ರೇಮ ಸಾರುವ, ಚಿತ್ತೋರ್‌ಗಡದ ಕೋಟೆ, ಮಧ್ಯ ಪ್ರದೇಶದ ಬಾಜ್ ಬಹಾದ್ದೂರ್ ಮತ್ತು ರಾಣಿ ರೂಪಮತಿಯರ ಮಾಂಡು ಕೋಟೆ ಹೀಗೆ ಅಲ್ಲಲ್ಲಿ ಪ್ರೇಮ ಕಟ್ಟಡಗಳು ಕಣ್ಣಿಗೆ ಬೀಳುತ್ತವೆ. ರಾಣಿ ರೂಪಮತಿಯ ಕೈ ಬಯಸಿದ ಬಾಜ್‌ಬಹಾದ್ದೂರನಿಗೆ 'ನರ್ಮದಾ ನದಿ ಕಾಣುವಂತೆ ಅರಮನೆ ಕಟ್ಟಿದರೆ ಮಾತ್ರ ವಿವಾಹವಾಗುತ್ತೇನೆ' ಅಂದಳಂತೆ ರೂಪಮತಿ. ಹಾಗೆ ನಿರ್ಮಾಣವಾಗಿದ್ದು, ಮಾಂಡುವಿನ ಕೋಟೆ.

ಪುಣೆಯ ಶನಿದಾರವಾಡಾದ ಮಸ್ತಾನಿ ಅರಮನೆ, ಮಸ್ತಾನಿಯ ಬಗ್ಗೆ ಪೇಶ್ವಾ ಬಾಜಿರಾವ್‌ಗಿದ್ದ ಪ್ರೀತಿಯ ಸಂಕೇತ. 11ನೇ ಶತಮಾನದ ಗುಜರಾತಿನ 'ರಾಣೀ ಕೀ ವಾವ್' ಜಗತ್ತಿನ ವಿಶಿಷ್ಟ ಪ್ರೇಮ ಸ್ಮಾರಕ. ಏಕೆ? ! ಇದೊಂದು ಮೆಟ್ಟಿಲುಗಳ ಬಾವಿ! ರಾಜ ಭೀಮದೇವನ ರಾಣಿ ಉದಯಮತಿ ತನ್ನ ಪತಿಯ ನೆನಪಿಗಾಗಿ ನಿರ್ಮಿಸಿದಂತಹದ್ದು. ನಮ್ಮ ಪಟ್ಟದಕಲ್ಲಿನಲ್ಲಿಯೂ ವಿರೂಪಾಕ್ಷ ದೇವಾಲಯವನ್ನು ರಾಣಿ ಲೋಕಮಹಾದೇವಿ ತನ್ನ ಪತಿ ವಿಕ್ರಮಾದಿತ್ಯ ಪಲ್ಲವರ ಮೇಲೆ ಸಾಧಿಸಿದ ವಿಜಯಕ್ಕೆ, ಪ್ರಶಂಸೆಯಾಗಿ, ಗೆದ್ದು ಬಂದ ಪತಿಗೆ ಕೊಡುಗೆ ನೀಡುವ ಪತಿಗೆ ಟಿಪಿಕಲ್ ಪತ್ನಿಯಂತೆ ಕಟ್ಟಿಸಿದಳಂತೆ!

ಜಗತ್ತು-ಸುತ್ತ-ಮುತ್ತ ಸುತ್ತಾಡುತ್ತ ಪ್ರೀತಿ-ಸ್ಮೃತಿ-ಸ್ಮಾರಕಗಳನ್ನು ಗಮನಿಸುತ್ತಾ ಬಂದ ನನಗೆ ವಿಸ್ಮಯ ಎದುರಾದದ್ದು ನಮ್ಮೂರಿನ ಪಕ್ಕದ ಲಕ್ಕಿನಕೊಪ್ಪದ 'ಅಮೂಲ್ಯ ಶೋಧ' ನೋಡಿದಾಗ. ಇತಿಹಾಸಜ್ಞ ಖಂಡೋಬರಾವ್ ತಮ್ಮ ಪತ್ನಿ ಯಶೋದಾ ಅವರ ನೆನಪಿಗೆ ರೂಪಿಸಿದ ಚೆಂದದ ಸಂಗ್ರಹಾಲಯ. ಪತ್ನಿಯ ನೆನಪನ್ನು ಇಷ್ಟು ಜತನದಿಂದ, ಶ್ರದ್ಧೆಯಿಂದ ಕಾದಿಡುವವರೂ ಉಂಟೆ ಎಂಬ ಭಾವ. ಪ್ರೀತಿ-ಸ್ಮೃತಿ-ಸ್ಮಾರಕ ಸಾರ್ವಕಾಲಿಕ-ಸಾರ್ವತ್ರಿಕ ಎನಿಸಿಬಿಡುತ್ತದೆ.

ಈ ಪ್ರೇಮ ಸ್ಮಾರಕಗಳು ಹೇಳುವುದಾದರೂ ಏನನ್ನು? ಪ್ರೇಮ ಅಮರವೆಂದೆ? ಅಥವಾ ಪ್ರೇಮಿಸಲೇನೂ ಮುಚ್ಚು ಮರೆ ಬೇಕಾಗಿಲ್ಲ ಎಂದಿರಬಹುದೇ? ಇಬ್ಬರ ಪ್ರೇಮ ಇತರರಲ್ಲಿಯೂ ಒಂದು ಮಧುರ ಭಾವ-ಹೃದಯ ತಟ್ಟಬಹುದಾದ ಸಾಮರ್ಥ್ಯವನ್ನು ಹೊಂದಿರಬೇಕು ಎಂದೆ? ಅಥವಾ ಒಂದು ಜೋಡಿಯ ನಡುವಿನ ಪ್ರೇಮ ಕೇವಲ ಅವರಿಬ್ಬರಿಗೆ ಸಂಬಂಧಿಸಿದ್ದು ಎಂದು ನಾವು-ಅವರು ಭಾವಿಸಿದರೂ ಅದು ನಿಜವಾಗಿ ಬೇರೆ ಎಷ್ಟೋ ಜನರ ಬದುಕಿಗೂ ಸಂಬಂಧಿಸಿರುತ್ತದೆ ಎಂದೇ? ಯಾವುದೂ ಇರಬಹುದು. ಹೀಗೆ ಪ್ರೇಮ ಸ್ಮಾರಕಗಳ ಮೂಲಕ ತಮ್ಮ ಪ್ರೀತಿ ಜಗಜ್ಜಾಹೀರು ಮಾಡುವ ಜನರು ಕೇವಲ ಶೋಮ್ಯಾನ್‌ಗಳೆಂದು ನನಗನ್ನಿಸುವುದಿಲ್ಲ. ಅದರ ಬದಲು ಅವರ ಪ್ರೀತಿ ಅದೆಷ್ಟು ನಿಚ್ಚಳ-ಧೀರ ಎಂದು ಸೋಜಿಗ ತರುತ್ತದೆ. ಪ್ರೀತಿಯ ಬಂಧನವನ್ನು ವಿವಾಹ ಬಂಧನವಾಗಿರಿಸಿಕೊಂಡ ಪತಿ-ಪತ್ನಿ ಕನಿಷ್ಠ ಪ್ರೇಮ ಸ್ಮಾರಕಗಳಿಗೆ ಭೇಟಿ ನೀಡುವ, ಬದುಕಿನಲ್ಲಿ ಪ್ರೀತಿಯನ್ನು ಮರಳಿ ಪಡೆಯುವ ಪ್ರಯತ್ನವನ್ನು ಮಾಡಬೇಕು ಎನಿಸುತ್ತದೆ!


ಮಜ ಮಜ ಮಜಕೂರ


• ಎಂ.ಎಸ್.ಪೂಜಾರ

ಬೆಕ್ಕು ಮತ್ತು ದಾರ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು


ಒಮ್ಮೆ ಮನೆಯಲ್ಲಿದ್ದ ಬೆಕ್ಕೊಂದು ದಾರದ ಉಂಡೆಯೊಂದನ್ನು ಗಮನಿಸಿ. ಕುತೂಹಲದಿಂದ ಕಚ್ಚಿ ಎಳೆಯಿತು. ಸರಸರನೆ ದಾರವು ಬಿಡಿಸಿಕೊಂಡದ್ದನ್ನು ನೋಡಿ ಮತ್ತಷ್ಟು ಎಳೆಯಲಾರಂಭಿಸಿತು





ಹಾಗೆಯೇ ಆಟವಾಡುತ್ತಾ ದಾರವು ಉದ್ದವಾಗಿದ್ದನ್ನು ಗಮನಿಸಿದ ಬೆಕ್ಕು, ನೆಲದ ಮೇಲೆ ಉರುಳಾಡಿ ಅದನ್ನು ತನ್ನ ಮೈಗೆ ಸುತ್ತಿಕೊಂಡು ಖುಷಿಪಟ್ಟಿತು

ಹಾಗೆ ಸುತ್ತಿದ ದಾರವು ಇಡೀ ಮೈಯನ್ನು ದಟ್ಟವಾಗಿ ಆವರಿಸಿತು. ಕತ್ತು, ಮುಖ, ತಲೆಯನ್ನೂ ಆವರಿಸಿತು. ಬೆಕ್ಕು ಬಿಡಿಸಿಕೊಳ್ಳಲಾರದೆ ಒದ್ದಾಡಿತು





ಬೆಕ್ಕು ಬಿಡಿಸಿಕೊಳ್ಳಲು ಕೊಸರಿಕೊಂಡಷ್ಟೂ ದಾರ ಮತ್ತಷ್ಟು ಸುತ್ತಿಕೊಂಡಿತು. ಬೆಕ್ಕು ಭಯದಿಂದ ಕೂಗಿದಾಗ ಮನೆಯ ಗುಂಡ ಓಡಿ ಬಂದು ಪಾರು ಮಾಡಿದ

ನಮ್ಮ ಮನೆಯ ಭಾಗ್ಯ

ನಮ್ಮಿ ಮನೆಯಲ್ಲಿ ಇರುತಿಹಳೊಬ್ಬ
ಮೂರು ವರುಷದ ತುಂಟಿ
ಸುಮ್ಮನೆ ಅಮ್ಮಗೆ ರಂಪನು
ಮಾಡುವ ತುಂಬಾ ಜಗಳಗಂಟಿ

ಅವ್ವನ ಪೀಡಿಸಿ ಗಿಟ್ಟಿಸಿ ಬಿಡುವಳು
ಹಬ್ಬಕೆ ಹೊಸ ಹೊಸ ಅಂಗಿ
ತಿನ್ನಲು ಮುಂದೆ ತಿನಿಸನ್ನು ಇಟ್ಟರೆ
ಮುಗಿಸೇ ಬಿಡುವಳು ನುಂಗಿ

ಓದದೆ ಇದ್ದರೂ ಬರೆಯದೆ ಇದ್ದರೂ
ಬೇಕು ಪುಸ್ತಕ ಪಾಟಿ
ಕೊಡದೆ ಇದ್ದರೆ ಅಣ್ಣನ ಚೀಲವ
ಮಾಡೇ ಬಿಡುವಳು ಲೂಟಿ

ಅಣ್ಣನ ಚೊಣ್ಣ, ತಂಗಿಯ ಅಂಗಿ
ಅಣ್ಣನ ಕಾಡಿಸಿ, ತಮ್ಮನ ಬೀಳಿಸಿ
ಹಾಕ್ವಳು ಸಂತಸ ಕೇಕೆ

ಹುಟ್ಟಿದ ಹಬ್ಬ ಬಂದರೆ ಆಯ್ತು
ಮನೆಯಲಿ ಈಕೆಯೇ ನಾಯಕಿಯು
ಮನೆಯಲ್ಲಿ ಎಲ್ಲರ ಪ್ರೀತಿಯ ಗಳಿಸಿ
ಹಿಗ್ಗುತ ಹಾಡುವ ಗಾಯಕಿಯು!

ಕೊಂಚತಂತ್ರ

ಭೂಕಂಪದ ಅಲೆಗಳ ಪ್ರಕಾರಗಳನ್ನು MAN ಪದ ನೆನಪಿಡುವ ಮೂಲಕ ಸುಲಭವಾಗಿ ನೆನಪಿಡಬಹುದು.

M = ಮೇಲ್ಮೈ ಅಲೆಗಳು
A = ಅಡ್ಡ ಅಲೆಗಳು
N = ನೀಳ ಅಲೆಗಳು

ಅದಲು ಬದಲು ಕಂಚಿ ಕದಲು

ಇಲ್ಲಿ ಕೊಟ್ಟಿರುವ ಪದಗಳಲ್ಲಿನ ಅಕ್ಷರಗಳನ್ನು ಅದಲುಬದಲಾಗಿಸಿ ಹೊಸ ಪದ ರಚಿಸಿ

1 ಮುಚ್ಚಿಕೊಳ್ಳು
2 ಅತಿಸಣ್ಣ
3 ನವರೂಪಕ
4 ಹಗೆಬರಿಸು



ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ ಜೋಡಿಗಳನ್ನು ಹೊಂದಿಸಿ

1 ಗುಬ್ಬಚ್ಚಿ	A ನೀರು
2 ಪೆನ್ನು	B ಚೆಂಡು
3 ಚಿಟ್ಟೆ	C ಹೂವು
4 ನಳ	D ಮೇಜು
5 ಮೊಳೆ	E ಬಾಚಣಿಕೆ
6 ಕುರ್ಚಿ	F ತಲೆದಿಂಬು
7 ಗಾದಿ	G ಗೂಡು
8 ಪಟ	H ದಾರ
9 ಲಗೋರಿ	I ಸುತ್ತಿಗೆ
10 ತಲೆಗೂದಲು	J ಕಾಗದ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳಿಗೆ ಪಕ್ಕದಲ್ಲಿ ಕೊಡಲಾದ ಸುಳಿವಿನ ಪದ ಆಧರಿಸಿ ನಾಲ್ಕು ಅಕ್ಷರಗಳ ಹೊಸ ಪದ ರಚಿಸಿ

	ಪಾ	ದ		ಪಾದ ಬಡಿಸಿದ ಆರೋಪ
	ಸ	ವಿ		ಸವಿ ತಿಂದಾಗ ಉಂಟಾದ ತಳಮಳ
	ಮಾ	ವ		ಮಾವನಿಂದ ಸಂಗ್ರಹಣೆ
	ಗ	ರ		ಗರ ಬಡಿದಾಗ ನಿದ್ದೆಗೆಟ್ಟು
	ರಾ	ಜಿ		ರಾಜಿ ಮಾಡಿಕೊಂಡು ಮಾಡುವ ಆಚರಣೆ ವಿಜ್ರಂಭಿಸು

ಗಣಿತದಲ್ಲಿ ಗರ್ದಿ ಗಮ್ಮತ್ತು

ಕ್ಯಾಲೆಂಡರ್‌ನಲ್ಲಿ ಸಂಕಲನ ಆಟಗಳು

ನಿಮ್ಮ ಮನೆಯಲ್ಲಿ ಕಳೆದ ವರ್ಷದ ಕ್ಯಾಲೆಂಡರ್ ತೆಗೆದುಕೊಂಡು ಈ ಆಟವಾಡಿ

ಆಟ 1 ಚಿತ್ರದಲ್ಲಿ ತೋರಿಸಿದಂತೆ ಚೌಕಾಕಾರದಲ್ಲಿ ಬರುವ ಒಂಬತ್ತು ಸಂಖ್ಯೆಗಳ ಮೊತ್ತವನ್ನು ಅರೆಕ್ಷಣದಲ್ಲಿ ಹೇಳಿಬಿಡಬಹುದು.

ನೀವು ಮಧ್ಯದ ಸಂಖ್ಯೆಗೆ 9ರಿಂದ ಗುಣಿಸಿದರೆ ಸಾಕು. ಉತ್ತರ ಸಿದ್ಧ

ಉದಾಹರಣೆಗೆ ಚಿತ್ರ ನೋಡಿ

1	8	15
2	9	16
3	10	17

ಇಲ್ಲಿ ಮಧ್ಯದ ಸಂಖ್ಯೆ 9. ಅದಕ್ಕೆ 9ರಿಂದ ಗುಣಿಸಿದರೆ 9X9 = 81

ಇವುಗಳ ಮೊತ್ತ 2 + 8 + 16 + 2 + 9 + 16 + 3 + 10 + 17 = 81

ಆಟ 2

ಅಡ್ಡ, ಲಂಬ ಹಾಗೂ ಓರೆಯಾಗಿ ಒಂದೇ ಅರಳ ರೇಖೆಯ ಮೇಲಿನ 4 ಸಂಖ್ಯೆಗಳ ಮೊತ್ತಕ್ಕೆ ಆ ಸರಣಿಯ 3ನೇ ಸಂಖ್ಯೆಗೆ ಗುಣಿಸಿ. ಸರಣಿಯ ಮೊದಲನೇ ಸಂಖ್ಯೆ ಕೂಡಿಸಿದರೆ 4 ಸಂಖ್ಯೆಗಳ ಮೊತ್ತಕ್ಕೆ ಸಮನಾಗಿರುತ್ತದೆ.

ಕ್ಯಾಲೆಂಡರ್

ಭಾನು	1	8	15	22	29
ಸೋಮ	2	9	16	23	30
ಮಂಗಳ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

ಮೂರನೇ ಸಂಖ್ಯೆ 20X 3 = 60

60ಕ್ಕೆ 6 ಕೂಡಿಸಿದರೆ 60 + 6 = 66

ತಾಳೆ 6 + 13 + 20 + 27 = 66

ಆಟ 3: ಕ್ಯಾಲೆಂಡರ್‌ನಲ್ಲಿ ಅಡ್ಡ, ಲಂಬ, ಓರೆಯಾಗಿ ಯಾವುದೇ ಐದು ಸಂಖ್ಯೆಗಳ ಮೊತ್ತ ಅದರ ಮಧ್ಯದ ಸಂಖ್ಯೆಗೆ 5ರಿಂದ ಗುಣಿಸಿದರೆ ಐದು ಸಂಖ್ಯೆಗಳ ಮೊತ್ತಕ್ಕೆ ಸಮವಿರುತ್ತದೆ.

ಉದಾ: 22 + 23 + 24 + 25 + 26 = 120

ಮೇಲಿನ ಸಂಖ್ಯೆಗಳಲ್ಲಿ ಮಧ್ಯದ ಸಂಖ್ಯೆ 24

ಆದ್ದರಿಂದ 24X5 = 120

ಹೀಗೆ ರದ್ದಿಯಾದ ಕ್ಯಾಲೆಂಡರ್‌ನಲ್ಲಿ ಹಲವಾರು ಆಟಗಳನ್ನು ಆಡಬಹುದು

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ: 1- ರಾರಾಜಿಸು 2- ಪರಾಮರ್ಶೆ 3- ಪಾರಂಗತ 4- ಆಕ್ರಮಣ 5- ಇಮಾರತು

ಜಾಣಪದ ಆಟ: 1) ಆಚಾರ 2) ವಿಚಾರ 3) ಪ್ರಚಾರ 4) ಸಂಚಾರ 1) ವಾಮಾಚಾರ 2) ಕಾಟಾಚಾರ 3) ಕಂದಾಚಾರ 4) ಗೃಹಚಾರ 5) ಅಪಚಾರ 6) ಉಪಚಾರ 7) ಸಮಾಚಾರ 8) ಅಯ್ಯಾಚಾರ

ಅದಲು ಬದಲು ಕಂಚಿ ಕದಲು: 1) ಕಚೇರಿ ಆಳು 2) ವಿಚಾರಮಾಡು 3) ಚಾಮರಾಜನಗರ 4) ಮಾಯಾವತಿಗೆ ಸಿಟ್ಟು

ಅದಲು ಬದಲು ಕಂಚಿ ಕದಲು: 1 - G 2 - I 3 - D 4 - J 5 - H 6 - F 7 - E 8 - C 9 - A 10 - B



ನಂದಿತಾ ಎಸ್.ಎಂ. ಬೆಂಗಳೂರು



ಹರ್ಷಿಣಿ ಸಿ. ಬೆಂಗಳೂರು



ನವೀನ್‌ಕುಮಾರ್ ಎಚ್. ಬಿ. ಮೈಸೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



ಬಾರ್ಡರ್– ಗಾವಸ್ಕರ್ ಟ್ರೋಫಿ ಕ್ರಿಕೆಟ್: ಭಾರತಕ್ಕೆ ಇನಿಂಗ್ಸ್ ಗೆಲುವು, 1–0 ಮುನ್ನಡೆ

ಅಶ್ವಿನ್ ಸ್ಪಿನ್‌ಗೆ ಆಸ್ಟ್ರೇಲಿಯಾ ತತ್ತರ

ಪ್ರಜಾವಾಣಿ ವಾರ್ತೆ

ನಾಗಪುರ: ಆಸ್ಟ್ರೇಲಿಯಾ ತಂಡವನ್ನು ಕೇವಲ 32.3 ಓವರ್‌ಗಳಲ್ಲಿ 91 ರನ್‌ಗಳಿಗೆ ಕಟ್ಟಿಹಾಕಿದ ರೋಹಿತ್ ಶರ್ಮಾ ಬಳಗ, ಬಾರ್ಡರ್‌-ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ಮೊದಲ ಪಂದ್ಯವನ್ನು ಇನಿಂಗ್ಸ್ ಹಾಗೂ 132 ರನ್‌ಗಳಿಂದ ಗೆದ್ದು ಬೀಗಿತು.

ಆರ್‌.ಅಶ್ವಿನ್ (37ಕ್ಕೆ 5) ಕೈಚಳಕದ ಮುಂದೆ ಪ್ರವಾಸಿ ತಂಡದ ಬ್ಯಾಟರ್‌ಗಳು ತಬ್ಬಿಬ್ಬಾದರು. ವಿಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎದುರಾಳಿಗಳಿಗೆ ಅಲ್ಪ ಹೋರಾಡಲೂ ಭಾರತದ ಬೌಲರ್‌ಗಳು ಅವಕಾಶ ನೀಡಲಿಲ್ಲ. ಪಂದ್ಯವನ್ನು ಮೂರೇ ದಿನಗಳಲ್ಲಿ ಜಯಿಸಿ, ಸರಣಿಯಲ್ಲಿ 1–0 ಮುನ್ನಡೆ ಪಡೆಯಿತು.

ಮೂರನೇ ದಿನವಾದ ಶನಿವಾರ ಬೆಳಗ್ಗಿನ ಅವಧಿಯಲ್ಲಿ ಅಕ್ಷರ್ ಪಟೇಲ್ (84) ಮತ್ತು ಮೊಹಮ್ಮದ್ ಶಮಿ (37) ಅವರ ಉತ್ತಮ ಆಟದಿಂದ ಭಾರತದ ಮೊದಲ ಇನಿಂಗ್ಸ್ ಮೊತ್ತ 400 ರನ್‌ಗಳವರೆಗೆ ಹಿಗ್ಗಿತು.

223 ರನ್‌ಗಳ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿದ ಪ್ರವಾಸಿ ತಂಡದ ಬ್ಯಾಟರ್‌ಗಳು ಮತ್ತೆ ಎಡವಿದರು. ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಪಡೆದಿದ್ದ ಜಡೇಜ, ಎರಡನೇ ಇನಿಂಗ್ಸ್‌ನಲ್ಲಿ (34ಕ್ಕೆ 2) ಅಶ್ವಿನ್‌ಗೆ ಸಾಥ್ ನೀಡುವ ಕೆಲಸ ಮಾಡಿದರು.

ಪ್ಯಾಟ್ ಕಮಿನ್ಸ್ ಬಳಗ ಒಂದೇ ಅವಧಿಯ ಆಟದಲ್ಲಿ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡದ್ದು ಅಚ್ಚರಿ ಮೂಡಿಸಿತು. ‘ಆಸ್ಟ್ರೇಲಿಯಾ ಒಂದೇ ಅವಧಿಯೊಳಗೆ ಆಲೌಟ್ ಆಗಬಹುದೆಂದು ನಿರೀಕ್ಷಿಸಿರಲಿಲ್ಲ’ ಎಂದು ಪಂದ್ಯದ ಬಳಿಕ ರೋಹಿತ್ ಪ್ರತಿಕ್ರಿಯಿಸಿದ್ದಾರೆ.

ಅಶ್ವಿನ್ ಅವರ ಲೈನ್ ಮತ್ತು ಲೆಂಗ್ತ್‌ಅನ್ನು ಅಂದಾಜಿಸುವಲ್ಲಿ ಆಸ್ಟ್ರೇಲಿಯಾ ಬ್ಯಾಟರ್‌ಗಳು ಪೂರ್ಣವಾಗಿ ವಿಫಲರಾದರು. ಅನುಭವಿ ಡೇವಿಡ್ ವಾರ್ನರ್ ಒಳಗೊಂಡಂತೆ ನಾಲ್ವರು ಎಲ್‌ಬಿಡಬ್ಲ್ಯು ಬಲೆಗೆ ಬಿದ್ದದ್ದು ಅದಕ್ಕೆ ನಿದರ್ಶನ. ಯಾವ ಎಸೆತ ತಿರುವು ಪಡೆಯುತ್ತದೆ, ಯಾವುದು ನೇರವಾಗಿ ನುಗ್ಗುತ್ತದೆ ಎಂಬುದನ್ನು ಊಹಿಸಲೂ ಆಗದೆ ಚಡಪಡಿಸಿದರು. ರಕ್ಷಣಾತ್ಮಕವಾಗಿ ಆಡಬೇಕೇ, ಮುನ್ನುಗ್ಗಿ ಹೊಡೆಯಬೇಕೇ ಎಂಬ ಗೊಂದಲದಲ್ಲಿ ಬಿದ್ದು ವಿಕೆಟ್ ಕಳೆದುಕೊಂಡರು.

ಉಸ್ಮಾನ್ ಖ್ವಾಜಾ ಅವರನ್ನು ಔಟ್ ಮಾಡಿದ ಅಶ್ವಿನ್ ವಿಕೆಟ್ ಬೇಟೆ ಶುರು ಮಾಡಿದರು. ಸ್ಲಿಪ್‌ನಲ್ಲಿ ವಿರಾಟ್ ಕೊಹ್ಲಿಗೆ ಕ್ಯಾಚಿತ್ತು ಅವರು ಔಟಾದರು. ಒಂದಷ್ಟು ಬೌಂಡರಿ ಹೊಡೆದು ಆಕ್ರಮಣಕಾರಿ ಆಟವಾಡಲು ಮುಂದಾದ ಮಾರ್ನಸ್ ಲಾಬುಷೇನ್ ಅವರನ್ನು ಜಡೇಜ ಪೆವಿಲಿಯನ್‌ಗಟ್ಟಿದರು.

ಆ ಬಳಿಕ ಅಶ್ವಿನ್ ಮೋಡಿಗೆ ವಿಸಿಎ ಕ್ರೀಡಾಂಗಣ ಸಾಕ್ಷಿಯಾಯಿತು. ಒಬ್ಬರ ಮೇಲೊಬ್ಬರಂತೆ ನಾಲ್ವರನ್ನು ಎಲ್‌ಬಿ ಬಲೆಗೆ ಬೀಳಿಸಿದರು. ಬ್ಯಾಟಿಂಗ್‌ನಲ್ಲಿ ಮಿಂಚಿದ್ದ ಶಮಿ (13ಕ್ಕೆ 2) ಅವರು ಕೊನೆಯ ಎರಡು ವಿಕೆಟ್‌ಗಳನ್ನು ಪಡೆದು ಆಸ್ಟ್ರೇಲಿಯಾದ ಇನಿಂಗ್ಸ್‌ಗೆ ಬೇಗನೇ ಅಂತ್ಯಹಾಡಿದರು.

ಇದಕ್ಕೂ ಮುನ್ನ 7 ವಿಕೆಟ್‌ಗಳಿಗೆ 321 ರನ್‌ಗಳಿಂದ ಆಟ ಮುಂದುವರಿಸಿದ್ದ ಭಾರತ, ಮತ್ತೆ 79 ರನ್‌ಗಳನ್ನು ಸೇರಿಸಿತು. ಜಡೇಜ 70 ರನ್‌ಗಳಿಗೆ ಔಟಾದರೆ, ಅಕ್ಷರ್ ಪಟೇಲ್ ಟೆಸ್ಟ್‌ನಲ್ಲಿ ವೈಯಕ್ತಿಕ ಶ್ರೇಷ್ಠ ಮೊತ್ತ ಕಲೆಹಾಕಿದರು. ಶಮಿ ಅವರು ಮೂರು ಸಿಕ್ಸರ್ ಮತ್ತು ಎರಡು ಬೌಂಡರಿ ಹೊಡೆದು ಮನರಂಜನೆ ಒದಗಿಸಿದರು. ಅಕ್ಷರ್ ಮತ್ತು ಶಮಿ 9ನೇ ವಿಕೆಟ್‌ಗೆ 52 ರನ್ ಸೇರಿಸಿದರು.

ಟಾಡ್ ಮರ್ಫಿ ಚೊಚ್ಚಲ ಪಂದ್ಯದಲ್ಲಿ ಏಳು ವಿಕೆಟ್ ಪಡೆದು ಮಿಂಚಿದರಾದರೂ, ತಂಡಕ್ಕೆ ಎದುರಾದ ಹೀನಾಯ ಸೋಲಿನ ಮುಂದೆ ಅವರ ಸಾಧನೆಗೆ ಬೆಲೆಯಿಲ್ಲದಾಯಿತು.

ಸರಣಿಯ ಎರಡನೇ ಪಂದ್ಯ ನವದೆಹಲಿಯಲ್ಲಿ ಫೆ.17ರಿಂದ ನಡೆಯಲಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 177 (63.5 ಓವರ್)

ಭಾರತ 400 (139.3 ಓವರ್) (ಶುಕ್ರವಾರ 7ಕ್ಕೆ 321)

ಜಡೇಜ ಬಿ ಮರ್ಫಿ 70 (185 ಎ., 4X9), ಅಕ್ಷರ್ ಬಿ ಕಮಿನ್ಸ್ 84 (174 ಎ., 4X10, 6X1), ಶಮಿ ಸಿ ಕ್ಯಾರಿ ಬಿ ಮರ್ಫಿ 37 (47 ಎ., 4X2, 6X3), ಸಿರಾಜ್ ಔಟಾಗದೆ 1 (19 ಎ)

ಇತರೆ 10 (ಬೈ 6, ಲೆಗ್‌ಬೈ 1, ನೋಬಾಲ್ 3)

ವಿಕೆಟ್ ಪತನ: 8–328 (ರವೀಂದ್ರ ಜಡೇಜ; 118.2), 9–380 (ಮೊಹಮ್ಮದ್ ಶಮಿ; 132.4), 10–400 (ಅಕ್ಷರ್ ಪಟೇಲ್; 139.3)

ಬೌಲಿಂಗ್: ಪ್ಯಾಟ್ ಕಮಿನ್ಸ್ 20.3–3–78–2, ಸ್ಕಾಟ್ ಬೊಲಾಂಡ್ 17–4–34–0, ನೇಥನ್ ಲಯನ್ 49–13–126–1, ಟಾಡ್ ಮರ್ಫಿ 47–12–124–7, ಮಾರ್ನಸ್ ಲಾಬುಷೇನ್ 5–0–24–0, ಮ್ಯಾಟ್ ರೆನ್‌ಷಾ 1–0–7–0

ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ 91 (32.3 ಓವರ್)

ಖ್ವಾಜಾ ಸಿ ಕೊಹ್ಲಿ ಬಿ ಅಶ್ವಿನ್ 5 (9 ಎ., 4X1), ವಾರ್ನರ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 10 (41 ಎ., 4X2), ಲಾಬುಷೇನ್ ಎಲ್‌ಬಿಡಬ್ಲ್ಯು ಬಿ ಜಡೇಜ 17 (28 ಎ., 4X3), ಸ್ಮಿತ್ ಔಟಾಗದೆ 25 (51 ಎ., 4X2, 6X1), ರೆನ್‌ಷಾ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 2 (7 ಎ), ಹ್ಯಾಂಡ್ಸ್‌ಕಂಬ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 6 (6 ಎ., 4X1), ಕ್ಯಾರಿ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 10 (6 ಎ., 4X2), ಕಮಿನ್ಸ್ ಸಿ ಭರತ್ ಬಿ ಜಡೇಜ 1 (13 ಎ), ಮರ್ಫಿ ಸಿ ರೋಹಿತ್ ಬಿ ಅಕ್ಷರ್ 2 (15 ಎ), ಲಯನ್ ಬಿ ಶಮಿ 8 (20 ಎ., 4X2), ಬೊಲಾಂಡ್ ಎಲ್‌ಬಿಡಬ್ಲ್ಯು ಬಿ ಶಮಿ 0 (3 ಎ)

ಇತರೆ 5 (ಲೆಗ್‌ಬೈ 1, ನೋಬಾಲ್ 4)

ವಿಕೆಟ್ ಪತನ: 1–7 (ಉಸ್ಮಾನ್ ಖ್ವಾಜಾ; 1.5), 2–26 (ಮಾರ್ನಸ್ ಲಾಬುಷೇನ್; 10.5), 3–34 (ಡೇವಿಡ್ ವಾರ್ನರ್; 13.5), 4–42 (ಮ್ಯಾಟ್ ರೆನ್‌ಷಾ; 15.2), 5–52 (ಪೀಟರ್ ಹ್ಯಾಂಡ್ಸ್‌ಕಂಬ್; 17.2), 6–64 (ಅಲೆಕ್ಸ್ ಕ್ಯಾರಿ; 19.2), 7–67 (ಪ್ಯಾಟ್ ಕಮಿನ್ಸ್; 22.4), 8–75 (ಟಾಡ್ ಮರ್ಫಿ; 26.3), 9–88 (ನೇಥನ್ ಲಯನ್; 30.6), 10–91 (ಸ್ಕಾಟ್ ಬೊಲಾಂಡ್; 32.3)

ಬೌಲಿಂಗ್: ಮೊಹಮ್ಮದ್ ಶಮಿ 4.3–1–13–2, ಆರ್‌.ಅಶ್ವಿನ್ 12–3–37–5, ಮೊಹಮ್ಮದ್ ಸಿರಾಜ್ 1–1–0–0, ರವೀಂದ್ರ ಜಡೇಜ 12–3–34–2, ಅಕ್ಷರ್ ಪಟೇಲ್ 3–0–6–1

ಫಲಿತಾಂಶ: ಭಾರತಕ್ಕೆ ಇನಿಂಗ್ಸ್ ಹಾಗೂ 132 ರನ್ ಗೆಲುವು
ಪಂದ್ಯಶ್ರೇಷ್ಠ: ರವೀಂದ್ರ ಜಡೇಜ



ಆಸ್ಟ್ರೇಲಿಯಾ ತಂಡದ ಮಾರ್ನಸ್ ಲಾಬುಷೇನ್ ವಿಕೆಟ್ ಪಡೆದ ರವೀಂದ್ರ ಜಡೇಜ (ಬಲ) ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಪಿಟಿಐ ಚಿತ್ರ

ರಾಯ್ ಕೃಷ್ಣ ಗೆಲುವಿನ ಗೋಲು

ಐಎಸ್‌ಎಲ್ ಫುಟ್‌ಬಾಲ್: ಬ್ಲಾಸ್ಟರ್ಸ್ ಮಣಿಸಿದ ಬಿಎಫ್‌ಸಿ

• ಮಹಮ್ಮದ್ ನೂಮಾನ್

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದ ಪ್ರೇಕ್ಷಕರ ಮುಂದೆ ಕಾಲ್ಚಳಕ ಮೆರೆದ ಬೆಂಗಳೂರು ಎಫ್‌ಸಿ ತಂಡ, ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸತತ ಆರನೇ ಪಂದ್ಯ ಗೆದ್ದು ಸಂಭ್ರಮಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ರಾಯ್ ಕೃಷ್ಣ ಗಳಿಸಿದ ಗೋಲಿನ ನೆರವಿನಿಂದ ಬಿಎಫ್‌ಸಿ 1–0ಯಿಂದ ಪ್ರಬಲ ಕೇರಳ ಬ್ಲಾಸ್ಟರ್ಸ್ ತಂಡವನ್ನು ಮಣಿಸಿತು. ಈ ಜಯದಿಂದ ಬೆಂಗಳೂರಿನ ತಂಡದ ‘ಪ್ಲೇ ಆಫ್’ ಪ್ರವೇಶ ಸಾಧ್ಯತೆಗೆ ಇನ್ನಷ್ಟು ಬಲ ಬಂದಿದೆ. 18 ಪಂದ್ಯಗಳಿಂದ 28 ಪಾಯಿಂಟ್ಸ್‌ಗಳೊಂದಿಗೆ ಐದನೇ ಸ್ಥಾನಕ್ಕೇರಿತು.

ಜಿದ್ದಾಜಿದ್ದಿನ ಪೈಪೋಟಿ ನಡೆದ ಪಂದ್ಯದ 32ನೇ ನಿಮಿಷದಲ್ಲಿ ಗೆಲುವಿನ ಗೋಲು ದಾಖಲಾಯಿತು. ಗೋಲು ಪೋಸ್ಟ್ ಬಳಿ ತಮಗೆ ಲಭಿಸಿದ ನಿಖರ ಪಾಸ್‌ನಲ್ಲಿ ರಾಯ್ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡರು.

ಎದುರಾಳಿ ಗೋಲ್‌ಕೀಪರ್ ಮಾತ್ರ ತಮ್ಮ ಮುಂದಿರುವುದನ್ನು ಅರಿತ ರಾಯ್, ಇತರ ಡಿಫೆಂಡರ್‌ಗಳು ಧಾವಿಸುವ ಮುನ್ನವೇ ಚಾಣಾಕ್ಷ ರೀತಿಯಲ್ಲಿ ಚೆಂಡನ್ನು ಗುರಿ ಸೇರಿಸಿದರು. 42ನೇ ನಿಮಿಷದಲ್ಲಿ ಬಿಎಫ್‌ಸಿಗೆ ಮುನ್ನಡೆ ಹೆಚ್ಚಿಸುವ ಅವಕಾಶ ಲಭಿಸಿತ್ತು. ಆದರೆ ಸಂದೇಶ್ ಜಿಂಗಾನ್ ಚೆಂಡನ್ನು ಗುರಿ ಸೇರಿಸುವಲ್ಲಿ ವಿಫಲರಾದರು. ಆತಿಥೇಯ ತಂಡ 26ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆಯಬೇಕಿತ್ತು. ಜಾವಿ ಹೆರ್ನಾಂಡಿಜ್ ಅವರ ಫ್ರೀಕಿಕ್‌ನಲ್ಲಿ ದೊರೆತ ಚೆಂಡನ್ನು ಜಿಂಗಾನ್ ಹೆಡ್ ಮಾಡಿದರೂ ಕ್ರಾಸ್‌ಬಾರ್‌ಗೆ ಬಡಿದು ವಾಪಸಾಯಿತು.

ಮತ್ತೊಂದೆಡೆ ಎದುರಾಳಿ ತಂಡ ಗೋಲು ಗಳಿಸಲು ಮೇಲಿಂದ ಮೇಲೆ ಪ್ರಯತ್ನ ನಡೆಸಿತಾದರೂ, ಯಶಸ್ಸು ಲಭಿಸಲಿಲ್ಲ. ಬ್ಲಾಸ್ಟರ್ಸ್ ತಂಡದ ಸ್ಟಾರ್ ಸ್ಟ್ರೈಕರ್‌ಗಳಾದ ಅಡ್ರಿಯಾನ್ ಲುನಾ ಮತ್ತು ದಿಮಿತ್ರೊಸ್ ದಿಯಾಮಂತಕೊಸ್ ಅವರನ್ನು ಬಿಎಫ್‌ಸಿ ರಕ್ಷಣಾ ವಿಭಾಗ ಸಮರ್ಥವಾಗಿ ಕಟ್ಟಿಹಾಕಿತು.

ಹಳದಿಮಯ: ಪಂದ್ಯ ವೀಕ್ಷಿಸಿದ ಪ್ರೇಕ್ಷಕರಲ್ಲಿ ಬ್ಲಾಸ್ಟರ್ಸ್ ಬೆಂಬಲಿಗರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ತಮ್ಮ ತಂಡದ ಹಳದಿ ಜರ್ಸಿ ತೊಟ್ಟು ಬಂದಿದ್ದರಿಂದ ಇಡೀ ಕ್ರೀಡಾಂಗಣ ಹಳದಿಮಯವಾಗಿತ್ತು. ಶನಿವಾರ ರಾತ್ರಿಯ ಮಟ್ಟಿಗೆ ಕ್ರೀಡಾಂಗಣ 'ಮಿನಿ ಕೇರಳ'ದಂತೆ ಭಾಸವಾಯಿತು.



ಗೋಲು ಗಳಿಸಿದ ಸಂಭ್ರಮದಲ್ಲಿ ರಾಯ್ ಕೃಷ್ಣ –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ರಾಹುಲ್ ಆಯ್ಕೆ ವಿರುದ್ಧ ವೆಂಕಿ ಕಿಡಿ

ಮುಂಬೈ (ಪಿಟಿಐ): ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಸತತ ವೈಫಲ್ಯ ಅನುಭವಿಸಿದರೂ ಭಾರತ ತಂಡಕ್ಕೆ ಆಯ್ಕೆ ಮಾಡುತ್ತಿರುವುದರ ಹಿಂದೆ ‘ಸ್ವಜನ ಪಕ್ಷಪಾತ’ ನಡೆದಿದೆ ಎಂದು ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಆರೋಪಿಸಿದ್ದಾರೆ.

ಶನಿವಾರ ಮುಕ್ತಾಯವಾದ ಬಾರ್ಡರ್ ಗಾವಸ್ಕರ್ ಟ್ರೋಫಿ ಟೂರ್ನಿಯ ಮೊದಲ ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸಿದ್ದ ರಾಹುಲ್ 71 ಎಸೆತಗಳಲ್ಲಿ 20 ರನ್ ಗಳಿಸಿ ಔಟಾಗಿದ್ದರು.

ಈ ಕುರಿತು ಶನಿವಾರ ಟ್ವೀಟ್ ಮಾಡಿರುವ ಕನ್ನಡಿಗ ವೆಂಕಟೇಶ್ ಪ್ರಸಾದ್, 'ರಾಹುಲ್ ಅವರ ಪ್ರತಿಭೆ ಮತ್ತು ಸಾಮರ್ಥ್ಯದ ಬಗ್ಗೆ ಗೌರವವಿದೆ. ಆದರೆ, ಅವರ ಸಾಧನೆ ತೀರ ಕೆಳಮಟ್ಟದಲ್ಲಿದೆ. 46 ಪಂದ್ಯಗಳ ನಂತರವೂ ಅವರ ಟೆಸ್ಟ್ ಸರಾಸರಿ 34.07 ಆಗಿದೆ. ಎಂಟು ವರ್ಷಗಳಿಗಿಂತಲೂ ಹೆಚ್ಚು ಅವಧಿಯಿಂದ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಾಧಾರಣ ಆಟವಾಡಿದ್ದಾರೆ. ಇಷ್ಟು ಅವಕಾಶಗಳನ್ನು ಬೇರೆ ಯಾರಿಗಾದರೂ ನೀಡಲಾಗಿದೆಯೇ?' ಎಂದಿದ್ದಾರೆ.

'ಶುಭಮನ್ ಗಿಲ್ ಅಮೋಘ ಲಯದಲ್ಲಿದ್ದಾರೆ. ಸರ್ಫರಾಜ್ ಖಾನ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಶತಕಗಳನ್ನು ಸಿಡಿಸಿದ್ದಾರೆ. ರಾಹುಲ್ ಬದಲು ಅವಕಾಶ ಗಿಟ್ಟಿಸುವ ಸಾಮರ್ಥ್ಯವಿರುವ ಇನ್ನಷ್ಟು ಅರ್ಹರು ಇದ್ದಾರೆ' ಎಂದಿದ್ದಾರೆ.



ವೆಂಕಟೇಶ್

ಜಡೇಜಗೆ ದಂಡ

ನಾಗಪುರ (ಪಿಟಿಐ): ಭಾರತ ತಂಡದ ಎಡಗೈ ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಗೆ ದಂಡ ವಿಧಿಸಲಾಗಿದೆ.

ಇಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಆಟದ ನಡುವೆ ಅವರು ತಮ್ಮ ಎಡಗೈ ತೋರುಬೆರಳಿನ ನೋವುಶಮನಕ್ಕಾಗಿ ಮುಲಾಮು ಲೇಪಿಸಿದ್ದು ಚರ್ಚೆಗೆ ಗ್ರಾಸವಾಗಿತ್ತು. ಟ್ವಿಟರ್‌ನಲ್ಲಿ ಬಹಳಷ್ಟು ಟೀಕೆಗಳು ವ್ಯಕ್ತವಾಗಿದ್ದವು.

ಆದರೆ ಮುಲಾಮು ಲೇಪಿಸಿಕೊಳ್ಳಲು ಅಂಪೈರ್‌ಗಳಿಂದ ಅನುಮತಿ ಪಡೆದಿರಲಿಲ್ಲ ಎಂಬ ಕಾರಣಕ್ಕೆ ಅವರ ಪಂದ್ಯ ಶುಲ್ಕದ ಶೇ 25ರಷ್ಟು ಮೊತ್ತದ ದಂಡವನ್ನು ವಿಧಿಸಲಾಗಿದೆ.

ಈ ಪಂದ್ಯದಲ್ಲಿ ಜಡೇಜ ಅವರು ಏಳು ವಿಕೆಟ್ ಗಳಿಸಿ ಗೆಲುವಿನ ರೂವಾರಿಯಾದರು.

ರಣಜಿ ಕ್ರಿಕೆಟ್: ಫೈನಲ್ ಸನಿಹಕ್ಕೆ ಸೌರಾಷ್ಟ್ರ; ಮಯಂಕ್ ಅಗರವಾಲ್ ಬಳಗದ ದಾರಿ ಕಡುಕಷ್ಟ

ಕರ್ನಾಟಕದ ಕನಸಿಗೆ ಅರ್ಪಿತ್ ಅಡ್ಡಗಾಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಎರಡು ದಿನಗಳ ಹಿಂದೆ ದ್ವಿಶತಕ ದಾಖಲಿಸಿದ್ದ ಮಯಂಕ್ ಅಗರವಾಲ್, ಕರ್ನಾಟಕ ತಂಡಕ್ಕೆ ರಣಜಿ ಟ್ರೋಫಿ ಫೈನಲ್‌ನಲ್ಲಿ ಆಡುವ ನಿರೀಕ್ಷೆ ಮೂಡಿಸಿದ್ದರು. ಆದರೆ, ಸೌರಾಷ್ಟ್ರದ ನಾಯಕ ಅರ್ಪಿತ್ ವಾಸವಡ ಕೂಡ ‘ಇನ್ನೂರು’ ರನ್ ಗಳಿಸಿ ಆತಿಥೇಯರ ಹಾದಿಯಲ್ಲಿ ಬಂಡೆಗಲ್ಲಿನಂತೆ ನಿಂತರು.

ಇಲ್ಲಿ ನಡೆಯುತ್ತಿರುವ ಸೆಮಿಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 120 ರನ್‌ಗಳ ಮುನ್ನಡೆ ಗಳಿಸಿದ ಸೌರಾಷ್ಟ್ರ ಫೈನಲ್ ಪಂದ್ಯದ ಪ್ರವೇಶದ್ವಾರದ ಸನಿಹದಲ್ಲಿದೆ.

ಶನಿವಾರ ದಿನದಾಟದ ಅಂತ್ಯಕ್ಕೆ ಎರಡನೇ ಇನಿಂಗ್ಸ್‌ನಲ್ಲಿ 26.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 123 ರನ್ ಗಳಿಸಿರುವ ಆತಿಥೇಯ ತಂಡವು ಅತ್ಯಂತ ಕಠಿಣ ಹಾದಿಗೆ ಬಂದು ನಿಂತಿದೆ.

ಎರಡನೇ ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಸಮರ್ಥ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ವೇಗಿ ಚೇತನ್ ಸಕಾರಿಯಾ ಕೇಕೆ ಹಾಕಿದರು. ತಮ್ಮ ಎರಡನೇ ಓವರ್‌ನಲ್ಲಿಯೂ ಚೇತನ್ ಎಸೆತವನ್ನು ಆಡುವ ಯತ್ನದಲ್ಲಿ ದೇವದತ್ತ ಪಡಿಕ್ಕಲ್ ಕ್ಲೀನ್‌ಬೌಲ್ಡ್ ಆದರು. ಆಗ ಮಯಂಕ್ ಜೊತೆಗೂಡಿದ ಯುವಪ್ರತಿಭೆ ನಿಕಿನ್ ಜೋಸ್ ಆತ್ಮವಿಶ್ವಾಸಭರಿತ ಆಟವಾಡಿದರು. ಸೌರಾಷ್ಟ್ರದ ಫೀಲ್ಡರ್‌ಗಳನ್ನು ವಂಚಿಸಿ ಬೌಂಡರಿಗಳನ್ನು ಗಳಿಸುವಲ್ಲಿ ಯಶಸ್ವಿಯಾದರು. 3ನೇ ವಿಕೆಟ್ ಜೊತೆಯಾಟದಲ್ಲಿ 100 ರನ್ ಸೇರಿಸಿದರು.

ಇವರಿಬ್ಬರೂ ಕ್ರೀಸ್‌ನಲ್ಲಿರುವವರೆಗೂ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಐದ ನೂರಕ್ಕೂ ಹೆಚ್ಚು ಕ್ರಿಕೆಟ್‌ಪ್ರಿಯರಿಗೆ ಮನರಂಜನೆ ಸಿಕ್ಕಿತು. ದಿನದಾಟದ ಅಂತ್ಯಕ್ಕೆ ಇನ್ನೂ ಇಪ್ಪತ್ತು ಎಸೆತಗಳು ಬಾಕಿಯಿದ್ದಾಗ ಮಯಂಕ್ ಸಿಕ್ಸರ್ ಎತ್ತುವ ಪ್ರಯತ್ನದಲ್ಲಿ ಸಕಾರಿಯಾಗೆ ಕ್ಯಾಚಿತ್ತರು. ಇದರೊಂದಿಗೆ ಈ ಋತುವಿನಲ್ಲಿ ಒಂದು ಸಾವಿರ ರನ್ ಗಳಿಸುವ ಅವಕಾಶವನ್ನು ಎಂಟು ರನ್‌ಗಳ ಅಂತರದಿಂದ ಕೈತಪ್ಪಿಸಿಕೊಂಡರು.

ಅಲ್ಲದೇ ಕರ್ನಾಟಕದ ಫೈನಲ್ ಆಸೆಯೂ ಬಹುತೇಕ ಕೈಜಾರಿದಂತಾಯಿತು. ಕ್ರೀಸ್‌ಗೆ ಬಂದ ಮನೀಷ್ ಪಾಂಡೆ ದಿನದ ಕೊನೆ ಓವರ್‌ನಲ್ಲಿ ಎಲ್‌ಬಿಡಬ್ಲ್ಯು ಆಗಿ ನಿರ್ಗಮಿಸಿದರು.

ಕರ್ನಾಟಕವು ಫೈನಲ್ ಪ್ರವೇಶಿಸಲು ಇನ್ನೊಂದು ಅವಕಾಶ ಇದೆ. ಪಂದ್ಯದ ಕೊನೆಯ ದಿನವಾದ ಭಾನುವಾರ ಕನಿಷ್ಠ 175 ರಿಂದ 200 ರನ್‌ಗಳ ಗುರಿಯನ್ನು ಸೌರಾಷ್ಟ್ರಕ್ಕೆ ಒಡ್ಡಿ, ಆಲೌಟ್ ಮಾಡಬೇಕು. ಆದರೆ ಸಮಯವೂ ಕಡಿಮೆ ಹಾಗೂ ಪ್ರವಾಸಿ ಬಳಗದ ಸಾಮರ್ಥ್ಯದ ಲೆಕ್ಕಹಾಕಿದರೆ ಕರ್ನಾಟಕದ ಹಾದಿ ಕಡುಕಷ್ಟದ್ದು.

ಅರ್ಪಿತ್ ಆಟ: ಸೌರಾಷ್ಟ್ರ ತಂಡದ 34 ವರ್ಷದ ಎಡಗೈ ಬ್ಯಾಟರ್ ಅರ್ಪಿತ್‌ಗೆ ಇದು ಕರ್ನಾಟಕದ ಎದುರು ಮೊದಲ ದ್ವಿಶತಕ. ಶುಕ್ರವಾರ ಶೆಲ್ಡನ್ ಜಾಕ್ಸನ್ ಜೊತೆಗೆ ದ್ವಿಶತಕದ ಜೊತೆಯಾಟವಾಡಿ ತಂಡವನ್ನು ಇನಿಂಗ್ಸ್ ಮುನ್ನಡೆಯ ಸನಿಹ ತಂದಿದ್ದರು. ಕರ್ನಾಟಕವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 407 ರನ್‌ಗಳಿಗೆ ಉತ್ತರವಾಗಿ ಸೌರಾಷ್ಟ್ರ 527 ರನ್ ಗಳಿಸಲು ಅವರ ದ್ವಿಶತಕ ನೆರವಾಯಿತು.

ಸುಮಾರು ಆರೂವರೆ ಗಂಟೆಗಳನ್ನು ಕ್ರೀಸ್‌ನಲ್ಲಿ ಕಳೆದ ಅರ್ಪಿತ್ 406 ಎಸೆತಗಳಲ್ಲಿ 202 ರನ್ ಗಳಿಸಿದರು. ಅದರಲ್ಲಿ 21 ಬೌಂಡರಿ ಮತ್ತು ಒಂದು ಸಿಕ್ಸರ್ ಇತ್ತು. ಅವರ ಪಾದಚಲನೆಯ ನಿಖರತೆಗೆ ಬೌಲರ್‌ಗಳು ಬಸವಳಿದರು. ಬೌನ್ಸರ್‌ವೊಂದು ತಮ್ಮ ಹೆಲ್ಮೆಟ್ ಅಪ್ಪಳಿಸಿದರೂ ಪ್ರಥಮ ಚಿಕಿತ್ಸೆ ಪಡೆದು ಆಟ ಮುಂದುವರಿಸಿದರು.

ಅದರಲ್ಲೂ ಸ್ಪಿನ್ನರ್‌ಗಳಾದ ಶ್ರೇಯಸ್ ಹಾಗೂ ಗೌತಮ್ ಸೇರಿ ಒಟ್ಟು 229 ರನ್‌ಗಳನ್ನು ಕೊಟ್ಟರು. ಕಳೆದ ಏಳು ಪಂದ್ಯಗಳಲ್ಲಿ 31 ವಿಕೆಟ್ ಗಳಿಸಿದ್ದ ಮಧ್ಯಮವೇಗಿ ವೈಶಾಖ ಈ ಪಂದ್ಯದಲ್ಲಿ ಒಂದೂ ವಿಕೆಟ್ ಪಡೆಯಲಿಲ್ಲ ಹಾಗೂ 119 ರನ್‌ಗಳನ್ನೂ ಬಿಟ್ಟುಕೊಟ್ಟರು.

ಇನಿಂಗ್ಸ್‌ನಲ್ಲಿ 59 ರನ್‌ಗಳ ಮುನ್ನಡೆ ಸಾಧಿಸಿದ್ದಾಗ ಸೌರಾಷ್ಟ್ರದ ಚಿರಾಗ್ ಜಾನಿ ರನ್‌ಔಟ್ ಆದರು. ನಂತರದ 61 ರನ್‌ಗಳ ಅಂತರದಲ್ಲಿ ತಂಡದ ಐದು ವಿಕೆಟ್‌ಗಳು ಪತನವಾದವು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ: 133.3 ಓವರ್‌ಗಳಲ್ಲಿ 407: ಸೌರಾಷ್ಟ್ರ: 174.4 ಓವರ್‌ಗಳಲ್ಲಿ 527 (ಅರ್ಪಿತ್ ವಾಸವಡ 202, ಚಿರಾಗ್ ಜಾನಿ 72; ವಿದ್ವತ್ ಕಾವೇರಪ್ಪ 83ಕ್ಕೆ 5, ಶ್ರೇಯಸ್ ಗೋಪಾಲ್ 113ಕ್ಕೆ 2). ಎರಡನೇ ಇನಿಂಗ್ಸ್: ಕರ್ನಾಟಕ: 26.4 ಓವರ್‌ಗಳಲ್ಲಿ 4ಕ್ಕೆ123 (ಮಯಂಕ್ ಅಗರವಾಲ್ 55, ನಿಕಿನ್ ಜೋಸ್ ಬ್ಯಾಟಿಂಗ್ 54; ಚೇತನ್ ಸಕಾರಿಯಾ 24ಕ್ಕೆ 2, ಧರ್ಮೇಂದ್ರಸಿಂಹ ಜಡೇಜ 27ಕ್ಕೆ 1, ಪಾರ್ಥ್ ಭುತ್ 41ಕ್ಕೆ 1)



ದ್ವಿಶತಕ ಸಂಭ್ರಮದಲ್ಲಿ ಅರ್ಪಿತ್ ವಾಸವಡ –ಪ್ರಜಾವಾಣಿ ಚಿತ್ರ/ವಿ.ಪುಷ್ಕರ್

ವಿದ್ವತ್‌ಗೆ ಐದು ವಿಕೆಟ್



ಶುಕ್ರವಾರ ಸಂಜೆ ಎರಡು ವಿಕೆಟ್ ಗಳಿಸಿದ್ ವೇಗಿ ವಿದ್ವತ್ ಕಾವೇರಪ್ಪ ನಾಲ್ಕನೇ ದಿನ ಮತ್ತೆ ಮೂರು ವಿಕೆಟ್ ಗಳಿಸಿದರು. ಅರ್ಪಿತ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಧರ್ಮೇಂದ್ರಸಿಂಹ ಜಡೇಜ ಹಾಗೂ ಖುಷಾಂಗ್ ಪಟೇಲ್ ವಿಕೆಟ್‌ಗಳನ್ನು ಗಳಿಸಿದರು. ಸ್ಪಿನ್ನರ್ ಶ್ರೇಯಸ್ ಕೂಡ ಎರಡು ವಿಕೆಟ್ ಪಡೆದರು.

ಇಬ್ಬರು ನಾಯಕರ ದ್ವಿಶತಕ ದಾಖಲೆ

ಕರ್ನಾಟಕದ ಮಯಂಕ್ ಅಗರವಾಲ್ ಮತ್ತು ಸೌರಾಷ್ಟ್ರದ ಅರ್ಪಿತ್ ವಾಸವಡ ಅವರು ಒಂದೇ ಪಂದ್ಯದಲ್ಲಿ ದ್ವಿಶತಕ ಗಳಿಸಿದ ಉಭಯ ತಂಡಗಳ ನಾಯಕರ ಸಾಲಿಗೆ ಸೇರಿದರು. ರಣಜಿ ಕ್ರಿಕೆಟ್‌ನಲ್ಲಿ ಇಂತಹ ಸಾಧನೆ ಮೂಡಿದ್ದು ಎರಡನೇ ಬಾರಿ. 2016–17ರಲ್ಲಿ ಬರೋಡಾ ತಂಡದ ನಾಯಕ ದೀಪಕ್ ಹೂಡಾ (ಅಜೇಯ 293) ಹಾಗೂ ಪಂಜಾಬ್ ತಂಡದ ನಾಯಕ ಯುವರಾಜ್ ಸಿಂಗ್(260) ಮೊದಲ ಬಾರಿ ಈ ಸಾಧನೆ ಮಾಡಿದ್ದರು ಎಂದು ದೇಸಿ ಕ್ರಿಕೆಟ್ ಅಂಕಿ ಸಂಖ್ಯೆ ಪರಿಣತರಾದ ಚನ್ನಗಿರಿ ಕೇಶವಮೂರ್ತಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಫೈನಲ್‌ನತ್ತ ಬಂಗಾಳ

ಇಂದೋರ್ (ಪಿಟಿಐ): ಬಂಗಾಳ ಕ್ರಿಕೆಟ್ ತಂಡವು ರಣಜಿ ಟ್ರೋಫಿ ಫೈನಲ್ ಪ್ರವೇಶವನ್ನು ಬಹುತೇಕ ಖಚಿತಗೊಳಿಸಿಕೊಂಡಿದೆ.

ಹೋಳ್ಕರ್ ಮೈದಾನದಲ್ಲಿ ನಡೆಯುತ್ತಿರುವ ಸೆಮಿಫೈನಲ್‌ನಲ್ಲಿ 547 ರನ್‌ಗಳ ಬೃಹತ್ ಮುನ್ನಡೆ ಸಾಧಿಸಿದೆ. ಕೊನೆಯ ದಿನವಾದ ಭಾನುವಾರ ಹಾಲಿ ಚಾಂಪಿಯನ್ ಮಧ್ಯಪ್ರದೇಶಕ್ಕೆ ಬ್ಯಾಟಿಂಗ್ ಅವಕಾಶ ಸಿಕ್ಕರೂ ಈ ಮೊತ್ತವನ್ನು ಮೀರಿ ನಿಲ್ಲುವುದು ಸಾಧ್ಯವಿಲ್ಲ. ಆದ್ದರಿಂದ ಡ್ರಾ ಆದರೂ ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಬಂಗಾಳ ಫೈನಲ್‌ಗೆ ಸಾಗುವುದು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಂಗಾಳ: 438. ಮಧ್ಯಪ್ರದೇಶ 170. 2ನೇ ಇನಿಂಗ್ಸ್: ಬಂಗಾಳ: 119 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 279 (ಅನುಸ್ಟುಪ್ ಮಜುಂದಾರ್ 80, ಪ್ರದೀಪ್ತಾ ಪ್ರಾಮಾಣಿಕ್ ಬ್ಯಾಟಿಂಗ್ 60, ಸುದೀಪ್ ಕುಮಾರ ಘರಮಿ 41, ಕುಮಾರ ಕಾರ್ತಿಕೇಯ 63ಕ್ಕೆ3, ಸಾರಾಂಶ್ ಜೈನ್ 103ಕ್ಕೆ6)

ವಾಲಿಬಾಲ್: ಕ್ಯಾಲಿಕಟ್ ಹೀರೋಸ್‌ಗೆ ಜಯ

ಬೆಂಗಳೂರು: ಕ್ಯಾಲಿಕಟ್ ಹೀರೋಸ್ ತಂಡದವರು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಎರಡನೇ ಗೆಲುವು ಸಾಧಿಸಿದರು. ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಕ್ಯಾಲಿಕಟ್ 4–1 ರಲ್ಲಿ ಹೈದರಾಬಾದ್ ಬ್ಲ್ಯಾಕ್ ಹಾಕ್ಸ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯ: ಬೆಂಗಳೂರು ಟಾರ್ಪಿಡೋಸ್– ಮುಂಬೈ ಮಿಟಿಯೋರ್ಸ್.
ಕೋಲ್ಕತ್ತ ಥಂಡರ್‌ಬೋಲ್ಟ್ಸ್– ಕೊಚ್ಚಿ ಬ್ಲೂ ಸ್ಪೈಕರ್ಸ್



ಹೈದರಾಬಾದ್ ತಂಡದ ಟ್ರೆಂಟ್ ಅವರ ಸ್ಮಾಷ್ ಅನ್ನು ಕ್ಯಾಲಿಕಟ್ ಆಟಗಾರರಾದ ಜೋಸ್ ಅಂಟೋನಿಯೊ ಸ್ಯಾಂಡೋವಲ್ ಹಾಗೂ ಮೋಹನ್ ತಡೆಯುವ ಪ್ರಯತ್ನ ಮಾಡಿದರು– ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಸಂಕ್ಷಿಪ್ತ ಸುದ್ದಿ

ಈಜು ಸ್ಪರ್ಧೆ: ಕರ್ನಾಟಕಕ್ಕೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆದ ಖೇಲೊ ಇಂಡಿಯಾ ಯೂತ್ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಚಾಂಪಿಯನ್ ಪಟ್ಟ ಧರಿಸಿತು.

ಶನಿವಾರ ಕೊನೆಗೊಂಡ ಈಜು ಸ್ಪರ್ಧೆಗಳಲ್ಲಿ ರಾಜ್ಯದ ಬಾಲಕಿಯರು ಒಟ್ಟು 216 ಪಾಯಿಂಟ್ಸ್ ಗಳಿಸಿದರು. ಬಾಲಕ ಮತ್ತು ಬಾಲಕಿಯರು ಸೇರಿ ಕರ್ನಾಟಕದ ಈಜುಪಟುಗಳು ಒಟ್ಟು 25 ಪದಕ (ಆರು ಚಿನ್ನ, 13 ಬೆಳ್ಳಿ ಮತ್ತು ಆರು ಕಂಚು) ತಮ್ಮದಾಗಿಸಿಕೊಂಡರು.

ಶನಿವಾರ ಕಾರ್ತಿಕೇಯನ್ ನಾಯರ್ ಬಾಲಕರ 200 ಮೀಟರ್ಸ್ ಬಟರ್‌ಫ್ಲೈನಲ್ಲಿ 2 ನಿಮಿಷ 5.74 ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಜಯಿಸಿದರು. ಬಾಲಕಿಯರ ವಿಭಾಗದಲ್ಲಿ ಹಾಷಿಕಾ ರಾಮಚಂದ್ರ (2 ನಿ. 24.82 ಸೆ.), 50 ಮೀ. ಫ್ರೀಸ್ಟೈಲ್‌ನಲ್ಲಿ ನೀನಾ ವೆಂಕಟೇಶ್ (27.32 ಸೆ.), 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ವಿಹಿತಾ ನಯನಾ, 1500 ಮೀ. ಫ್ರೀಸ್ಟೈಲ್‌ನಲ್ಲಿ ಶಿರಿನ್ (18 ನಿ. 24.89 ಸೆ.) ಬೆಳ್ಳಿ ಪದಕಗಳನ್ನು ತಮ್ಮದಾಗಿಸಿಕೊಂಡರು. 1500 ಮೀ. ಫ್ರೀಸ್ಟೈಲ್‌ನಲ್ಲಿ ಮೀನಾಕ್ಷಿ ಮೆನನ್ (18 ನಿ. 42.11 ಸೆ.) ಕಂಚು ಗೆದ್ದರು. ಬಾಲಕರ 400 X100 ಮೀ. ಫ್ರೀಸ್ಟೈಲ್‌ನಲ್ಲಿ ಕಾರ್ತಿಕೇಯನ್, ಸಂಕರ್ಷಣ ಬಹದ್ದೂರ್ ರಘುವಂಶಿ, ಅಕ್ಷಯ್ ಶೇಟ್ ಮತ್ತು ಧ್ಯಾನ್ ಎಂ. ಅವರಿದ್ದ ತಂಡ ಕಂಚು ಗೆದ್ದಿತು.

ಯಶಸ್ವಿನಿಗೆ ಕಿರೀಟ



ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಚೆನ್ನೈನಲ್ಲಿ ನಡೆದ ರಾಷ್ಟ್ರೀಯ 19 ವರ್ಷದೊಳಗಿನ ಮಹಿಳೆಯರ ಸಿಂಗಲ್ಸ್ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಪ್ರಶಸ್ತಿ ಜಯಿಸಿದರು. ಶನಿವಾರ ನಡೆದ ಫೈನಲ್‌ನಲ್ಲಿ ಯಶಸ್ವಿನಿ 11-8, 11-9, 7-11, 8-11, 13-11, 11-9ರಿಂದ ಹರಿಯಾಣದ ಸುಹಾನಾ ಸೈನಿ ಅವರನ್ನು ಸೋಲಿಸಿದರು. ಕರ್ನಾಟಕ ಬಾಲಕಿಯರ ತಂಡವು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 3–1ರಿಂದ ತಮಿಳುನಾಡು ತಂಡವನ್ನು ಸೋಲಿಸಿ ಕಂಚು ಗೆದ್ದಿತು.

ಟಿ20 ವಿಶ್ವಕಪ್: ಭಾರತಕ್ಕೆ ಶುಭಾರಂಭದ ನಿರೀಕ್ಷೆ

ಕೇಪ್‌ಟೌನ್ (ಪಿಟಿಐ): ಚೊಚ್ಚಲ ಪ್ರಶಸ್ತಿ ನಿರೀಕ್ಷೆಯಲ್ಲಿರುವ ಭಾರತ ತಂಡವು ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಭಾನುವಾರ ಪಾಕಿಸ್ತಾನ ಸವಾಲು ಎದುರಿಸಲಿದ್ದು ಶುಭಾರಂಭದ ನಿರೀಕ್ಷೆಯಲ್ಲಿದೆ.

ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್‌ಗೂ ಒಂದು ದಿನ ಮೊದಲು ನಡೆಯಲಿರುವ ಈ ಪಂದ್ಯವು ಭಾರತದ ಆಟಗಾರ್ತಿಯರಿಗೆ ಉತ್ತಮ ಸಾಮರ್ಥ್ಯ ತೋರಲು ವೇದಿಕೆ ಎನಿಸಿದೆ.

ನಾಯಕಿ ಹರ್ಮನ್‌ಪ್ರೀತ್ ಕೌರ್ (ಭುಜದ ಗಾಯ) ಮತ್ತು ಸ್ಮೃತಿ ಮಂದಾನ (ಬೆರಳು) ಅವರ ಗಾಯದ ಸಮಸ್ಯೆ ಭಾರತ ತಂಡದ ಕಳವಳಕ್ಕೆ ಕಾರಣವಾಗಿದೆ. ಅಭ್ಯಾಸ ಪಂದ್ಯಗಳಲ್ಲಿ ಭಾರತ ತಂಡವು ಆಸ್ಟ್ರೇಲಿಯಾಕ್ಕೆ ಸೋತು ಬಾಂಗ್ಲಾ ಎದುರು ಗೆದ್ದಿತ್ತು.

ರೇಣುಕಾ ಸಿಂಗ್ ಅವರನ್ನು ಹೊರತುಪಡಿಸಿ ಭಾರತದ ಬೌಲಿಂಗ್ ವಿಭಾಗವು ಅಷ್ಟೇನೂ ವಿಶ್ವಾಸ ಮೂಡಿಸುವಂತಿಲ್ಲ. ಶಿಖಾ ಪಾಂಡೆ ಮಿಂಚಬೇಕಿದೆ. ಬ್ಯಾಟಿಂಗ್‌ನಲ್ಲಿ ಹರ್ಮನ್‌ಪ್ರೀತ್ ಮತ್ತು ಮಂದಾನ ಅವರಿಗೆ ಉಳಿದವರು ನೆರವು ನೀಡಬೇಕು. ಶಫಾಲಿ ವರ್ಮಾ ಸ್ಥಿರ ಪ್ರದರ್ಶನ ತೋರಬೇಕಿದೆ. ಜೆಮಿಮಾ ರಾಡ್ರಿಗಸ್ ಅವರ ಮೇಲೆ ರನ್ ಗಳಿಸುವ ಒತ್ತಡವಿದೆ. ಆಲ್‌ರೌಂಡರ್ ಪೂಜಾ ವಸ್ತ್ರಕರ್ ಅವರ ಪ್ರದರ್ಶನವೂ ನಿರ್ಣಾಯಕ ಎನಿಸಿದೆ. ಪಾಕಿಸ್ತಾನ ತಂಡವು ನಿದಾ ಧರ್ ಮೇಲೆ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದೆ.

ಬಲಾಬಲ

10 ಭಾರತ ಗೆಲುವು
3 ಪಾಕಿಸ್ತಾನ ಗೆಲುವು
13 ಒಟ್ಟು ಪಂದ್ಯ

ಪಂದ್ಯ ಆರಂಭ: ಸಂಜೆ 6.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಶ್ರೀಲಂಕಾಕ್ಕೆ ರೋಚಕ ಜಯ: ಶ್ರೀಲಂಕಾ ತಂಡವು ಟಿ20 ವಿಶ್ವಕಪ್ ಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಮೂರು ರನ್‌ಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 4ಕ್ಕೆ 129 (ಚಾಮರಿ ಅಟಪಟ್ಟು 68, ವಿಶ್ಮಿ ಗುಣರತ್ನೆ 35; ಶಬ್ನಿಮ್ ಇಸ್ಮಾಯಿಲ್ 22ಕ್ಕೆ 1, ಮರಿಜಾನ್ ಕಾಪ್ 15ಕ್ಕೆ 1, ನದೈನ್ ಡಿ ಕ್ಲರ್ಕ್ 38ಕ್ಕೆ 1). ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 9ಕ್ಕೆ 126 (ಲೌರಾ ವೊಲ್‌ವಾರ್ಟ್ 18, ಸ್ಯೂನ್ ಲೂಸ್ 28; ಸುಗಂಧಿಕಾ ಕುಮಾರಿ 28ಕ್ಕೆ 2, ಒಶಾದಿ ರಣಸಿಂಗೆ 20ಕ್ಕೆ 2, ಇನೊಕಾ ರಣವೀರ 18ಕ್ಕೆ 3). ಫಲಿತಾಂಶ: ಶ್ರೀಲಂಕಾಕ್ಕೆ 3 ರನ್‌ಗಳ ಜಯ